
ಡಿ.ಎ.ಪಾಂಡು ಸ್ಮೃತಿ ಗ್ರಂಥಮಾಲೆ - 29

ಮಕ್ಕಳ ಕೈಗೀತೆ

ಹೊಸಕೆರೆ ಚಿದಂಬರಯ್ಯ

42



ಡಿ.ಎ.ಪಾಂಡುಸ್ಮೃತಿ ಗ್ರಂಥಮಾಲೆ – (29)

ಮಕ್ಕಳ ಕೈಗೀತೆ

(ಸರಳಗದ್ಯದಲ್ಲಿ ಗೀತೆಯ ಸಾರ)

ಲೇಖಕರು :
ಹೊಸಕೆರೆ ಚಿದಂಬರಯ್ಯ

ಪ್ರಧಾನ ಸಂಪಾದಕರು :
ಡಾ॥ ಟಿ.ವಿ. ರಾಜು

ಸಂಪಾದಕರು :
ಪ್ರೊ. ಜಿ. ಅಶ್ವತ್ಥನಾರಾಯಣ

ಪ್ರಕಾಶನ :
ವಿನಯ್ ಫೌಂಡೇಷನ್, ಬೆಂಗಳೂರು
2024

ಪ್ರಕಟನೆ	:	ಡಿ. ಎ. ಪಾಂಡುಸ್ಮೃತಿ ಗ್ರಂಥಮಾಲೆ–(29)
ಗ್ರಂಥ	:	ಮಕ್ಕಳ ಕೈಗೀತೆ (ಗದ್ಯದಲ್ಲಿ ಭಗವದ್ಗೀತೆಯ ಸಾರ)
ಲೇಖಕರು	:	ಹೊಸಕೆರೆ ಚಿದಂಬರಯ್ಯ
ಪ್ರಧಾನ ಸಂಪಾದಕರು	:	ಡಾ. ಟಿ.ವಿ. ರಾಜು ವ್ಯವಸ್ಥಾಪಕ ಟ್ರಸ್ಟಿ, ವಿನಯ್ ಫೌಂಡೇಷನ್, ಬೆಂಗಳೂರು. ಮೊಬೈಲ್ : 9880114446
ಸಂಪಾದಕರು	:	ಪ್ರೊ. ಜಿ. ಅಶ್ವತ್ಥನಾರಾಯಣ ನಿವೃತ್ತ ಕನ್ನಡ ಪ್ರಾಧ್ಯಾಪಕರು, ಬೆಂಗಳೂರು ನಂ. 95, 34 ಬಿ ಕ್ರಾಸ್, 16ನೇ ಮೈನ್, 4 ಟಿ ಬ್ಲಾಕ್, ಜಯನಗರ ಬೆಂಗಳೂರು – 560 041 ದೂರವಾಣಿ : 080–26637783
ಮುದ್ರಕರು	:	ಓಂಕಾರ್ ಆಫ್ ಸೆಟ್ ಪ್ರಿಂಟರ್ಸ್ ಹೊಸತರಗುಪೇಟೆ, ಬೆಂಗಳೂರು – 560 002 ದೂರವಾಣಿ : 080–26708126/87
ಮುದ್ರಣ	:	ಮೊದಲನೇ ಮುದ್ರಣ – 1931 ಎರಡನೇ ಮುದ್ರಣ – 2024
ಪುಟಗಳು	:	xxv + 82
ಬೆಲೆ	:	ರೂ. 60/–
ಬಳಸಿದ ಕಾಗದ	:	70 ಜಿಸಿಎಂ.
ಅಳತೆ	:	1/8 ಡೆಮ್ಮಿ
ಹಕ್ಕುಗಳು	:	ಕಾದಿರಿಸಿವೆ.

ಪ್ರಕಾಶಕರ ನುಡಿ

(ಎರಡನೆಯ ಮುದ್ರಣ 2024)

ಸಿಂಚನ ಕನ್ನಡ ವೇದಿಕೆ ಆರ್.ವಿ.ಇನ್ಸ್ಟಿಟ್ಯೂಟ್ ಆಫ್ ಮ್ಯಾನೇಜ್ಮೆಂಟ್ ಜಯನಗರ ಬೆಂಗಳೂರು–41ಸಂಪಾದಕರ ಮಂಡಳಿಯಿಂದ 2005 ರಿಂದ 2018 ರವರೆಗೆ 28 ಕನ್ನಡ ಗ್ರಂಥಗಳು ವಿವಿಧ ವಿಷಯಗಳ ಬಗ್ಗೆ ಡಿ.ಎ.ಪಾಂಡುಸ್ಮೃತಿ ಗ್ರಂಥಮಾಲೆ ಹೆಸರಿನಲ್ಲಿ ಪ್ರಕಟವಾದವು. 29ನೇ ಗ್ರಂಥ ಮಕ್ಕಳ ಕೈಗೀತೆ ಗ್ರಂಥ ಪ್ರಕಟನೆಯ ಮೂಲಕ ಡಿ.ಎ.ಪಾಂಡುಸ್ಮೃತಿ ಗ್ರಂಥಮಾಲೆಯನ್ನು ವಿನಯ್ ಫೌಂಡೇಷನ್,ಬೆಂಗಳೂರು ಮುಂದುವರೆಸುತ್ತಿದೆ.

ಕನ್ನಡದಲ್ಲಿ ಭಗವದ್ಗೀತೆಯ ಬಗ್ಗೆ ನೂರಾರು ಗ್ರಂಥಗಳು ಪ್ರಕಟವಾಗಿವೆ. ಈಗಲೂ ಹೊಸ ಪ್ರಕಟನೆಗಳು ಬರುತ್ತಿವೆ. ಆಚಾರ್ಯತ್ರಯರ ಭಾಷ್ಯಗಳು, ಇತರ ಭಾಷ್ಯಕಾರರ ಗ್ರಂಥಗಳು, ಮೂಲಪಠ್ಯದ ಗ್ರಂಥಗಳು, ಅನ್ವಯ ತಾತ್ಪರ್ಯವುಳ್ಳ ಗ್ರಂಥಗಳು, ವಿಮರ್ಶಾಗ್ರಂಥಗಳು, ಕನ್ನಡಪದ್ಯಾನುವಾದ ಗ್ರಂಥಗಳು, ಆಯ್ದಶ್ಲೋಕಗಳ ಪ್ರಕಟನೆಗಳು, ಕಿಸೆಯ ಗೀತಾಗ್ರಂಥಗಳು, ಹೀಗೆ ನಾನಾ ಬಗೆಯ ಗ್ರಂಥಗಳು ಈವರೆಗೆ ಹೊರಬಂದಿವೆ. ಈ ಪೈಕಿ ಕರ್ನಾಟಕದ ಪ್ರಸಿದ್ಧ ಗದ್ಯಲೇಖಕರಾಗಿರುವ ಹೊಸಗನ್ನಡದ ಗದ್ಯಶಿಲ್ಪಿ ಹೊಸಕೆರೆ ಚಿದಂಬರಯ್ಯನವರು (ಜನನ 28.12.1870 ಮರಣ 19.04.1938) ಗೀತೆಯ ಬಗ್ಗೆ 6 ಗ್ರಂಥಗಳನ್ನು ಬರೆದರು. ಆ ಪೈಕಿ 1931ರಲ್ಲಿ ಮಕ್ಕಳ ಕೈಗೀತೆಯೆಂಬ ಗೀತೆಯ ಸಾರವನ್ನು ಸುಲಭಗದ್ಯದಲ್ಲಿ "ಧರ್ಮದ ವಿಚಾರವು ತಲೆನರೆತವರ ಮಾತೆನ್ನುವುದು ತೀರಾ ದಡ್ಡತನದ್ದು. ಚೆನ್ನಾಗಿ ಕಣ್ಣುಬಿಟ್ಟು ನೋಡಿದರೆ ಮಕ್ಕಳೇ

ಅದಕ್ಕೆ ತಕ್ಕವರು". ಆದ್ದರಿಂದ ಮಕ್ಕಳಿಗೆ ಗೀತೆಯನ್ನು ಕನ್ನಡದ ವ್ಯಾಸಂಗದಲ್ಲಿ ತಿಳಿಸಬೇಕೆಂಬ ಉದ್ದೇಶದಿಂದ ಮಕ್ಕಳಬಳಕೆಯ ಮಾತಿನಲ್ಲಿ ಮಾತನಾಡುವ ಗೀತೆಯಾಗಿರಬೇಕೆಂಬ ಗುರಿಯಿಂದ ಬರೆದರು.

ಮಕ್ಕಳಿಗಾಗಿ ಕನ್ನಡದಲ್ಲಿ ಗೀತೆಯನ್ನು ಗದ್ಯದಲ್ಲಿ ಪ್ರಕಟಿಸಿದ ಹಲವು ಗ್ರಂಥಗಳಿವೆ. ಆದರೆ ಮೊದಲ ಬಾರಿಗೆ ಕನ್ನಡದಲ್ಲಿ ಮಕ್ಕಳ ಗೀತಾಗ್ರಂಥವನ್ನು ಸರಳಗದ್ಯದಲ್ಲಿ ರಚಿಸಿದ ಹೆಗ್ಗಳಿಕೆ ಹೊಸಕೆರೆ ಚಿದಂಬರಯ್ಯನವರದು. ಇಷ್ಟು ಸುಲಭಶೈಲಿಯಲ್ಲಿ ಸಮಗ್ರ ಗೀತಾಸಾರವನ್ನು ಕನ್ನಡದಲ್ಲಿ ಮಕ್ಕಳಿಗಾಗಿ ಕೊಟ್ಟವರಲ್ಲಿ ಹೊಸಕೆರೆ ಚಿದಂಬರಯ್ಯನವರು ಅಗ್ರಗಣ್ಯರು.

ಈ ಗ್ರಂಥವು 1931ರಲ್ಲಿ ಎಂದರೆ ಸುಮಾರು 90ವರ್ಷಗಳ ಹಿಂದೆ ಪ್ರಕಟವಾಗಿದ್ದು. ಈ ತಲೆಮಾರಿನ ಮಕ್ಕಳಿಗೆ ದೊರೆಯುವಂತಾಗಬೇಕೆಂದು ಸೂಚಿಸಿ ಅದನ್ನು ಸಂಪಾದಿಸಿ ಕೊಟ್ಟವರು ಮಾಲೆಯ ಸಂಪಾದಕರಾದ ಪ್ರೊ.ಜಿ.ಅಶ್ವತ್ಥನಾರಾಯಣ ಅವರು. ಮೂಲಗ್ರಂಥದ ಪ್ರತಿಯನ್ನು ದೊರಕಿಸಿ ಅದನ್ನು ಪರಿಷ್ಕರಿಸಿ ಮುದ್ರಣಕ್ಕೆ ಅವರು ಸಿದ್ಧಪಡಿಸಿಕೊಟ್ಟಿದ್ದಾರೆ ಅವರಿಗೆ ವಿನಯ್ ಫೌಂಡೇಷನ್ ಪರವಾಗಿ ವಂದನೆಗಳು ಇದರೊಂದಿಗೆ ಹೊಸಕೆರೆ ಚಿದಂಬರಯ್ಯನವರ ಗೀತೆಯ ತಿರುಳು ಎಂಬ ಪ್ರಶ್ನೋತ್ತರ ರೂಪದಲ್ಲಿ ಹಿರಿಯರಿಗಾಗಿ ಸರಳ ಗೀತಾಗ್ರಂಥವನ್ನು ವಿನಯ್ ಫೌಂಡೇಷನ್ ಈಗಾಗಲೇ ಮರುಮುದ್ರಣ ಮಾಡಿದೆ (2024)

ಡಿ.ಎ.ಪಾಂಡುಸ್ಮೃತಿ ಗ್ರಂಥಮಾಲೆಯ 28 ಗ್ರಂಥಗಳನ್ನು ಆದರದಿಂದ ಸ್ವೀಕರಿಸಿರುವ ಓದುಗರು ಈ ಗ್ರಂಥವನ್ನು ಕೊಂಡೋದಿ ಪ್ರೋತ್ಸಾಹಿಸುವರೆಂದು ನಂಬಿದ್ದೇವೆ.

ನವರಾತ್ರಿ
ತಾ. 01–10–2024
ಬೆಂಗಳೂರು

ಡಾ. ಟಿ. ವಿ. ರಾಜು
ಪ್ರಕಾಶಕರು
ಡಿ. ಎ. ಪಾಂಡುಸ್ಮೃತಿ ಗ್ರಂಥಮಾಲೆ
ವಿನಯ್ ಫೌಂಡೇಷನ್

ಸಂಪಾದಕರ ಮಾತು

(ಎರಡನೆಯ ಮುದ್ರಣಕ್ಕೆ (2024) ಬರೆದದ್ದು)

ಡಿ.ಎ.ಪಾಂಡುಸ್ಮೃತಿ ಗ್ರಂಥಮಾಲೆ ಮೂಲಕ 28 ಗ್ರಂಥಗಳನ್ನು ಇದುವರೆಗೆ ಪ್ರಕಟಿಸಿರುವ ಸಿಂಚನ ಕನ್ನಡ ವೇದಿಕೆಯ ಪ್ರಕಟನೆಗಳಲ್ಲಿ ಗೀತೆಯನ್ನು ಕುರಿತು. ಎಸ್.ಬಿಳಿಗಿರಿವಾಸನ್ ಅವರು ಸರಳ ಪದ್ಯರೂಪದಲ್ಲಿ ಅನುವಾದಿಸಿದ ಸಿರಿಗನ್ನಡ ಸರಳ ಭಗವದ್ಗೀತೆ ಗ್ರಂಥ ಪ್ರಕಟವಾಗಿದೆ. ಅನಂತರ ವಿನಯ್ ಫೌಂಡೇಷನ್ನಿನಿಂದ ಡಿ.ಎ.ಪಾಂಡುಸ್ಮೃತಿ ಗ್ರಂಥಮಾಲೆ ಮುಂದುವರೆದು ಇದೀಗ ಗ್ರಂಥಮಾಲೆಯ 29ನೇ ಗ್ರಂಥವಾಗಿ ಹೊಸಕೆರೆ ಚಿದಂಬರಯ್ಯನವರು ಮಕ್ಕಳಿಗಾಗಿಯೇ ರಚಿಸಿದ 'ಮಕ್ಕಳ ಕೈಗೀತೆ' ಪುಟ್ಟ ಗ್ರಂಥ ಪ್ರಕಟವಾಗುತ್ತಿದೆ. ಈ ಗ್ರಂಥವನ್ನು ಕುರಿತು ಲೇಖಕರು ಹೇಳಿದ ಮಾತುಗಳು ಗಮನಾರ್ಹವಾಗಿವೆ.

"ಧರ್ಮದ ವಿಚಾರವು ತಲೆನರೆತವರ ಮಾತೆನ್ನುವುದು ತೀರ ದಡ್ಡತನದ್ದು ಚೆನ್ನಾಗಿ ಕಣ್ಣು ಬಿಟ್ಟು ನೋಡಿದರೆ ಮಕ್ಕಳೇ ಅದಕ್ಕೆ ತಕ್ಕವರು. ಮುಖದಲ್ಲಿ ಕೂದಲು ಹುಟ್ಟುವುದರಲ್ಲಿರುವಾಗಲೆ ಮನಸ್ಸಿನೊಳಕ್ಕೆ ಧರ್ಮದ ಬೀಜವು ಬೀಳಬೇಕು. ಧ್ರುವ ಮತ್ತು ಪ್ರಹ್ಲಾದ ಮೊದಲಾದವರು ಚಿಕ್ಕಂದಿನಲ್ಲಿಯೇ ಈ ತಿಳಿವಿನ ತುದಿಯನ್ನು ಮುಟ್ಟಿದ್ದರೆಂದೂ ಪುರಾಣಗಳು ಡಂಗುರವನ್ನು ಹೊಡೆಯುತ್ತವೆ. ಹೊಸಬಟ್ಟೆಗೆ ಬಣ್ಣವು ಚೆನ್ನಾಗಿ ಕಚ್ಚಿ ಹಿಡಿಯುವಂತೆ ಚಿಕ್ಕವರಿಗೆ ಈ ವಿಷಯವು ಚೆನ್ನಾಗಿ ಕಚ್ಚಿ ಹಿಡಿಯುವ ಸಂಭವವುಂಟು."

"ಈಗಿನ ಕಾಲದಲ್ಲಿ ಮಕ್ಕಳಿಗೆ ಧರ್ಮದ ವಾಸನೆಯೇ ಇಲ್ಲದ್ದರಿಂದ ಅವರನ್ನು ಬರೀ ಹೊಟ್ಟೆಬಟ್ಟೆಗಳ ಹಂಬಲೊಂದೇ ಹತ್ತಿಕೊಂಡು ಪೀಡಿಸುತ್ತಿರುವುದು ಕಂಡುಬರುತ್ತದೆ. ಹೊಟ್ಟೆಬಟ್ಟೆಗಳ ಹಂಬಲವನ್ನು ಬಿಡೆಂದು ನಮ್ಮ ಧರ್ಮವೇನೂ ಹೇಳುವುದಿಲ್ಲ ಧರ್ಮವನ್ನು ಮುಂದು ಮಾಡಿಕೊಂಡು ಅವುಗಳ ಯೋಚನೆಯನ್ನು ನಡಿಸೆಂಬುದು ನಮ್ಮ ಹಿರಿಯರ ಉಪದೇಶ".

ಈ ಕಾರಣದಿಂದ ಮಕ್ಕಳಿಗೆ ಗೀತೆಯ ತಿಳಿವಳಿಕೆಯನ್ನು ತಂದುಕೊಡಬೇಕೆಂಬ ಉದ್ದೇಶದಿಂದ ಗೀತೆಯನ್ನು ಕನ್ನಡದ ವ್ಯಾಸಂಗದಲ್ಲಿ ಹೆಚ್ಚಿನ ಯೋಗ್ಯತೆಯನ್ನು ತೋರಿಸಿಕೊಳ್ಳುವ ಮಕ್ಕಳಿಗೆ ನ್ಯಾಷನಲ್ ಹೈಸ್ಕೂಲ್ ಮೊದಲಾದ ದೇಶೀಯ ಶಿಕ್ಷಣಸಂಸ್ಥೆಗಳಲ್ಲಿಯೂ ರಾಮಕೃಷ್ಣ ಹಾಸ್ಟೆಲ್ ಮೊದಲಾದ ಧಾರ್ಮಿಕ ಸಂಸ್ಥೆಗಳಲ್ಲಿಯೂ ಗೀತಾಜಯಂತಿಯ ದಿನ ಹಂಚಲು "ಮಕ್ಕಳಿಗೆ ತಕ್ಕ ಹಾಗೆ ಬರೆಯುವುದು ಸುಲಭವಲ್ಲವೆಂದು ನನಗೆ ಗೊತ್ತಿದ್ದರೂ ನನಗೆ ತಿಳಿದ ಮಟ್ಟಿಗೆ ಇದು ಮಕ್ಕಳ ಬಳಕೆಗಾಗಿ ಗ್ರಂಥವಾಗಬೇಕೆಂದು ಬರೆದಿರುವೆನು." ಎಂದಿದ್ದಾರೆ. ಹೊಸಕೆರೆ ಚಿದಂಬರಯ್ಯನವರು, ನಮ್ಮ ನಾಡಿನ ಪ್ರಖ್ಯಾತ ಲೇಖಕರು ಮತ್ತು ಗೀತಾ ಸಾಹಿತಿಗಳೂ ಆಗಿರುವವರು ಕಳೆದ ಶತಮಾನದ ಪ್ರಾರಂಭದಲ್ಲಿ ಆರು ಗೀತಾ ಗ್ರಂಥಗಳನ್ನು ಬರೆದು ಪ್ರಕಟಿಸಿದ್ದಾರೆ. ಕುರ್ತುಕೋಟಿ ಭಾಗವತರು ಧಾರವಾಡದಲ್ಲಿ (1917ರಲ್ಲಿ ನೀಡಿದ ಗೀತೋಪನ್ಯಾಸಗಳನ್ನು ಸಂಗ್ರಹಿಸಿ ಅವರಿಂದಲೇ ತಿದ್ದಿಸಿ ಭಗವದ್ಗೀತಾ ಸಾರ ವಿಚಾರವೆಂಬ ಗ್ರಂಥವನ್ನು ಪ್ರಕಟಿಸಿದರು. ಅದೇ ವರ್ಷದಲ್ಲಿ ಗೀತಾರ್ಥ ವಿವರಣೆಯನ್ನು ವೆಂಕಟನಾಥರೆಂಬ ಸಂಸ್ಕೃತ ವಿದ್ವಾಂಸರು ಬರೆದ ಬ್ರಹ್ಮಾನಂದಗಿರಿ ಎಂಬ ವ್ಯಾಖ್ಯಾನದ ಸಾರವನ್ನು ಕನ್ನಡಕ್ಕೆ ಭಟ್ಟಿ ಇಳಿಸಿದರು. ಅನಂತರ ಗೀತಾರ್ಥ ಚಂದ್ರಿಕೆ ಎಂಬ ಅಮೋಘ ಕನ್ನಡ ಗೀತಾ ವ್ಯಾಖ್ಯಾನವನ್ನು ಮೂಲಶ್ಲೋಕ, ಅನ್ವಯ, ವಿವರಣೆಯೊಂದಿಗೆ ಪ್ರಕಟಿಸಿದರು ಇದೊಂದು ವಿಶಿಷ್ಟ ರೀತಿಯ ಗೀತಾಗ್ರಂಥವಾಗಿದೆ. ಲೇಖಕರೇ ಹೇಳಿಕೊಂಡಂತೆ ಈ ಗ್ರಂಥದಲ್ಲಿ."

"ಕನ್ನಡದಲ್ಲಿ ಪ್ರತಿಯೊಂದು ಶಬ್ದಕ್ಕೂ ಅರ್ಥವನ್ನು ಪ್ರತಿಯೊಂದು ಗೀತೆಯ ಮಾತಿಗೂ ಕೊಟ್ಟಿದ್ದೇನೆ. ಕಂಸದಲ್ಲಿ ಕೊಟ್ಟಿರುವ ಸಂಸ್ಕೃತ ಶಬ್ದಗಳನ್ನು ಬಿಟ್ಟೋದಿದರೆ ವ್ಯಾಖ್ಯಾನವನ್ನು ಓದುವವರಿಗೆ ಯಾವ ಅಡೆತಡೆಯಿಲ್ಲದೆ ಓದುವ ಲಲಿತ ವಚನಕಾವ್ಯವಾಗಿದೆ. ಗೀತೆಯು ಸರ್ವೋಪನಿಷತ್ತುಗಳ ಸಾರ ಎಂಬರ್ಥವನ್ನು ಮನಗಾಣುವುದಕ್ಕಾಗಿ ಗೀತೆಯ ಮಾತುಗಳಿಗೆ ಆಧಾರವಾದ ಉಪನಿಷತ್ ವಾಕ್ಯಗಳನ್ನು ಟಿಪ್ಪಣಿ ಬರೆದು ಅದಕ್ಕೆ ಅರ್ಥವನ್ನು ಹೇಳಿದ್ದೇನೆ."

ಹೀಗೆ ವಿದ್ವತ್ಪೂರ್ಣ ಗ್ರಂಥದ ರಚನೆ ಮಾಡಿದ ಮೇಲೆ 1932ರಲ್ಲಿ ಜೇಬಿನಲ್ಲಿ ಹಿಡಿಯುವ ಗಾತ್ರದ ಗೀತೆಯ ಕೈಗನ್ನಡಿ ಎಂಬ ಕಿಸೆಪುಸ್ತಕದಲ್ಲಿ ಸಂಪೂರ್ಣ ಗೀತೆಯ ಶ್ಲೋಕಗಳನ್ನು ಅವುಗಳ ತಾತ್ಪರ್ಯವನ್ನು ಅತ್ಯಂತ ಸರಳವಾದ ಕನ್ನಡ ಭಾಷೆಯಲ್ಲಿ, ಇರುವುದನ್ನು ಬಿಡದೆ ಇಲ್ಲದ್ದನ್ನು ಸೇರಿಸದೆ ಯಥಾವತ್ತಾಗಿ ತಾತ್ಪರ್ಯ ನೀಡಿದ್ದಾರೆ. ಈ ರೀತಿ ಪುಟ್ಟಗಾತ್ರದಲ್ಲಿ ಗೀತೆ ಪ್ರಕಟವಾದದ್ದು ಕನ್ನಡದಲ್ಲಿ ಇದೇ ಮೊದಲು. ಈ ಪುಟ್ಟ ಗ್ರಂಥ ಎಷ್ಟು ಜನಪ್ರಿಯವಾಯಿತು ಎಂದರೆ ಇದು 12ಕ್ಕೂ ಹೆಚ್ಚು ಮುದ್ರಣಗಳನ್ನು ಕಂಡಿದೆ.

ಇದಾದ ಮೇಲೆ 1931ರಲ್ಲಿ ಗೀತೆಯ ತಿರುಳು ಎಂಬ ಪುಟ್ಟ ಗ್ರಂಥವನ್ನು ಪ್ರಶ್ನೋತ್ತರ ರೂಪದಲ್ಲಿ 90 ಪುಟಗಳಲ್ಲಿ ಬಾಲಗೋಪಾಲ ಬಾಯಲ್ಲಿ ಬ್ರಹ್ಮಾಂಡ ತೋರಿದಂತೆ ಗೀತೆಯ ಸಾರವನ್ನೆಲ್ಲ ಜನರ ಮುಂದಿಟ್ಟಿದ್ದಾರೆ. ಗೀತೆಯ 700 ಶ್ಲೋಕಗಳ ಸಾರವನ್ನು ಕ್ರಮವಾಗಿ ಶ್ಲೋಕಗಳನ್ನು ಗುಂಪಾಗಿ ತೆಗೆದುಕೊಂಡು ಸಾರವತ್ತಾಗಿ ಗೀತೆಯಲ್ಲಿರುವ ವಿಷಯಗಳನ್ನು ಸರಳ ಸುಂದರವಾಗಿ ನಿರೂಪಿಸಿದ್ದಾರೆ. ಓದಿದರೆ ಸರಳ ಗದ್ಯ ಪ್ರಬಂಧವಾಗಿ ಕಾಣುತ್ತದೆ. ಈ ಗ್ರಂಥವನ್ನು ಕಂಡಾಗ ಈ ಸಾರಸಂಗ್ರಹದ ರೀತಿಯು ಎ.ಆರ್.ಕೃಷ್ಣಶಾಸ್ತ್ರಿಗಳ ವಚನ ಭಾರತದ ಪೀಠಿಕೆಯಲ್ಲಿ ಹೇಳಿದ ಮಾತುಗಳನ್ನು ನೆನಪಿಸುತ್ತದೆ.

"ನನ್ನ ಉದ್ದೇಶ ಸರ್ವಾವಯವ ಸಂಗ್ರಹವಲ್ಲ; ಕಬ್ಬಿನ ಜಲ್ಲೆಯಲ್ಲಿ ಬೇರು ಗರಿ, ಗಿಣ್ಣುಗಳನ್ನು ಕತ್ತರಿಸಿ ಹಾಕಿ, ಸಿಪ್ಪೆ ಹೆರೆದು, ಸಿಗುರು ಕಳೆದು, ಹೋಳುಮಾಡಿ ಅದನ್ನು ಬಟ್ಟಲಲ್ಲಿ ತುಂಬಿಕೊಡುವಂಥಾದ್ದು. ಕಿತ್ತಲೆಯ ಹಣ್ಣಿನ ಸಿಪ್ಪೆ ಸುಲಿದು ತೊಳೆಬಿಡಿಸಿ ನಾರು ಬೀಜಗಳನ್ನು ತೆಗೆದುಹಾಕಿ ಕುಸುಮವನ್ನು ಒಂದು ಅಡಕವಾದ ತಟ್ಟೆಯಲ್ಲಿ ಜೋಡಿಸಿಡುವಂಥದ್ದು" ಈ ಮಾತುಗಳು ಮಕ್ಕಳ ಕೈಗೀತೆ ಗ್ರಂಥಕ್ಕೆ ಎಲ್ಲ ರೀತಿಯಲ್ಲೂ ಒಪ್ಪುತ್ತದೆ.

ಗೀತೆ ಕೇವಲ ಹಿರಿಯರಿಗಷ್ಟೇ ಅಲ್ಲ ವಿದ್ಯಾರ್ಥಿಗಳ ಅಭ್ಯಾಸಕ್ಕೂ ಯೋಗ್ಯವಾದದ್ದು ಎಂಬುದನ್ನು ಹಿಂದೆಯೇ ಶಿಕ್ಷಣ ತಜ್ಞರು ತಿಳಿದುಕೊಂಡಿದ್ದರು. ಅದಕ್ಕಾಗಿ 1846 ರಲ್ಲಿ ಜೆ.ಗ್ಯಾರೆಟ್ ಸಂಸ್ಕೃತ-ಕನ್ನಡ-ಇಂಗ್ಲಿಷ್ ತ್ರಿಭಾಷೆಗಳಲ್ಲಿ ಗೀತೆಯನ್ನು ಪ್ರಕಟಿಸಿದರು. ಇದರಲ್ಲಿ ಇಂಗ್ಲಿಷ್ ಅನುವಾದವನ್ನು ಚಾರ್ಲೆಸ್ ವಿಲ್ಕಿನ್ಸ್ ಅವರೂ ಕನ್ನಡಾನುವಾದವನ್ನು ಮುನ್ಷಿ ಶ್ರೀನಿವಾಸಯ್ಯ ಅವರೂ ಮಾಡಿದ್ದರು. ಮೈಸೂರು ಮತ್ತು ಕೊಡಗು ಪ್ರಾಂತಗಳಲ್ಲಿ ಶಿಕ್ಷಣ ಇಲಾಖೆ ನಿರ್ದೇಶಕರಾಗಿದ್ದ ರೆವರೆಂಡ್.ಜೆ.ಗ್ಯಾರೆಟ್ ಸಂಸ್ಕೃತ-ಕನ್ನಡ ಅನುವಾದದ 2ನೇ

ಮುದ್ರಣವನ್ನು 1870ರಲ್ಲಿ ಮೈಸೂರು ವರ್ನಾಕ್ಯುಲರ್ ಸೀರೀಸ್ನಲ್ಲಿ ಪ್ರಕಟಿಸಿದರು ಈ ಕನ್ನಡಾನುವಾದ ಗ್ರಂಥ ಕನ್ನಡ ಆನರ್ಸ್ ವಿದ್ಯಾರ್ಥಿಗಳಿಗೆ ಪಠ್ಯವಾಗಿ ಗೊತ್ತುಮಾಡಲಾಗಿತ್ತು. ಅನಂತರ ವಿದ್ಯಾರ್ಥಿಗಳಿಗಾಗಿ ಬರೆದ ಕನ್ನಡದ ಮೊದಲ ಗದ್ಯ ಗ್ರಂಥವೆಂದರೆ ಹೊಸಕೆರೆ ಚಿದಂಬರಯ್ಯನವರು ಬರೆದ ಮಕ್ಕಳ ಕೈಗೀತೆ ಗ್ರಂಥವಾಗಿದೆ.

ಪರಿಷ್ಕರಣಕಾರ್ಯ

ಹೊಸಕೆರೆ ಚಿದಂಬರಯ್ಯನವರು 1931ರಲ್ಲಿ ಪ್ರಕಟಿಸಿದ ಮಕ್ಕಳ ಕೈಗೀತೆಯನ್ನು 2024ರಲ್ಲಿ 2ನೇ ಮುದ್ರಣವಾಗಿ ಪ್ರಕಟಮಾಡಿರುವ ಈ ಗ್ರಂಥದಲ್ಲಿ ಕೆಲವು ತಿದ್ದುಪಡಿಗಳನ್ನು ಮೂಲಕ್ಕೆ ಧಕ್ಕೆ ಬಾರದಂತೆ ಮಾಡಲಾಗಿದೆ.

1) ಲೇಖಕರ ಪೂರ್ಣ ಭಾವಚಿತ್ರ (ವರ್ಣರಂಜಿತ)ವನ್ನು ಪ್ರಕಟಿಸಲಾಗಿದೆ. ಅವರ ಸಂಕ್ಷಿಪ್ತ ಪರಿಚಯವನ್ನು ನೀಡಲಾಗಿದೆ.

2) ಈಗಲೂ ಪಠ್ಯದ ಮೊದಲಿಗೆ ಬರುವ ಪ್ರಕಾಶಕರ ನುಡಿ, ಸಂಪಾದಕರ ನುಡಿ, ಲೇಖಕರ ನುಡಿ, ಮುನ್ನುಡಿ ಮೊದಲಾದವಕ್ಕೆ ರೋಮನ್ ಸಣ್ಣಕ್ಷರಗಳನ್ನು (i) (ii) (iii) ಇತ್ಯಾದಿ ಬಳಸಲಾಗುತ್ತದೆ. ಆದರೆ ಚಿದಂಬರಯ್ಯನವರು ಸ್ವಾತಂತ್ರ್ಯ ಪೂರ್ವದಲ್ಲೇ ಇವುಗಳಿಗೆ ರೋಮನ್ ಸಣ್ಣಕ್ಷರಗಳಿಗೆ ಬದಲಾಗಿ ಅ ಆ ಇ ಈ ಉ ಊ ... ಇತ್ಯಾದಿ ವರ್ಣಮಾಲೆ ಅಕ್ಷರಗಳನ್ನು ಬಳಸುವುದನ್ನು ರೂಢಿಗೆ ತಂದರು. ಆದರೆ ಆ ಪದ್ಧತಿಯನ್ನು ಯಾರೂ ಮುಂದುವರೆಸಲಿಲ್ಲ.

3) ಹಿಂದಿನ ಮುದ್ರಣದಲ್ಲಿದ್ದ ಅಚ್ಚಿನ ದೋಷಗಳನ್ನು ತಿದ್ದಲಾಗಿದೆ.

4) 18 ಅಧ್ಯಾಯಗಳಿಗೆ ಮೂಲ ಭಗವದ್ಗೀತೆಯಲ್ಲಿ ಅರ್ಜುನ ವಿಷಾದಯೋಗ, ಕರ್ಮಯೋಗ ಇತ್ಯಾದಿ ಮೂಲ ಶೀರ್ಷಿಕೆಗಳನ್ನು ಕೊಡಲಾಗಿದೆ. ಆದರೆ ಚಿದಂಬರಯ್ಯನವರು ತಮ್ಮದೇ ಆದ ಕನ್ನಡ ಶೀರ್ಷಿಕೆಗಳನ್ನು ಮಾತ್ರ ಕೊಟ್ಟಿದ್ದಾರೆ. ವಿಷಯ ಸೂಚಿಯಲ್ಲಿ ಕನ್ನಡ ಶೀರ್ಷಿಕೆ ಮತ್ತು ಮೂಲ ಸಂಸ್ಕೃತ ಶೀರ್ಷಿಕೆಗಳನ್ನು ಒಟ್ಟಿಗೆ ಕೊಡಲಾಗಿದೆ.

5) ಗೀತೆಯ ಕೈಗನ್ನಡಿ ಕಿಸೆಗ್ರಂಥದಲ್ಲಿ ಗೀತೆಯ ತಾತ್ಪರ್ಯವನ್ನು ಅಚ್ಚಗನ್ನಡ ಪದಗಳಲ್ಲಿ ಚಿಕ್ಕ ವಾಕ್ಯಗಳಲ್ಲಿ ಸುಲಭ ಶೈಲಿಯಲ್ಲಿ ಅನುವಾದಿಸಲು ಯತ್ನಿಸಿದರು. ಅಲ್ಲಿಯ ತಾತ್ಪರ್ಯವನ್ನು ಇಲ್ಲಿ ಈ ಗ್ರಂಥದಲ್ಲಿ ಅಳವಡಿಸಿಕೊಂಡಿದ್ದಾರೆ. ಅದನ್ನು ಗಮನಿಸಲಾಗಿದೆ.

6) ಹಲವು ಪದಗಳನ್ನು ಸೇರಿಸಿ ಸಂಸ್ಕೃತದಲ್ಲಿ ಸಮಾಸಪದಗಳನ್ನು ಮಾಡಿ ಬಳಸುವುದು ಎಲ್ಲರಿಗೂ ತಿಳಿದ ವಿಷಯ ಆದರೆ ಹೊಸಕೆರೆ ಚಿದಂಬರಯ್ಯನವರು ಹಲವಾರು ಕನ್ನಡ ಪದಗಳನ್ನು ಒಗ್ಗೂಡಿಸಿ ಸಮಾಸಮಾಡಿ ಬರೆಯುತ್ತಾರೆ. ಇದು ಅವರ ಶೈಲಿಯ ರೀತಿ ಅವುಗಳನ್ನು ಹಾಗೆಯೇ ಇಡಲಾಗಿದೆ. ಉದಾಹರಣೆಗೆ: ಕಾಲಪರಿಮಾಣವನ್ನರಿತವರು, ಇನ್ನೊಂದರಿಂದಾದವನಲ್ಲವೆಂದೊ ಸಂಬಂಧವಿಲ್ಲದವನಾದುದರಿಂದಲೂ ಇತ್ಯಾದಿ ದೀರ್ಘಪದಪ್ರಯೋಗಗಳು ಅಲ್ಲಲ್ಲಿ ಕಂಡು ಬರುತ್ತವೆ ಎಂಬುದನ್ನು ಗುರುತಿಸಿ ಅವು ಅವರ ಶೈಲಿಯ ರೀತಿ ಎಂದು ತಿಳಿಯಲಾಗಿದೆ.

7) ದೀರ್ಘ ಪದಪ್ರಯೋಗಗಳನ್ನು ಅಲ್ಲಲ್ಲಿ ಪ್ರಯೋಗಿಸಿದರೂ ಇಡೀ ಗ್ರಂಥದ ಉದ್ದಕ್ಕೂ ಸರಳ ವಾಕ್ಯಗಳಲ್ಲಿ ಪುಟ್ಟ ಪದಗಳನ್ನು ಬಳಸುತ್ತಾ ಚಿಕ್ಕ ಚೊಕ್ಕ ವಾಕ್ಯಗಳನ್ನು ರಚಿಸುತ್ತಾರೆ. ಹೀಗಾಗಿ ಅವರ ಶೈಲಿ ಓದುವವರಿಗೆ ಚಿತ್ತಾಕರ್ಷಕವಾಗಿರುತ್ತದೆ. ಉದಾಹರಣೆಗೆ: ಶ್ಲೋಕ 63–66 ಅಧ್ಯಾಯ 18ರ ಸಾರವನ್ನು ಹೀಗೆ ರೂಪಿಸಿದ್ದಾರೆ; "ನೀನು ನನಗೆ ಅಚ್ಚು ಮೆಚ್ಚಿನ ಗೆಳೆಯನಾದ್ದರಿಂದ ನಿನಗೆ ಒಳ್ಳೇದಾಗಲೆಂದು ಹೇಳುತ್ತೇನೆ; ನನ್ನಲ್ಲಿ ಮನಸ್ಸಿಡು; ನನ್ನಲ್ಲಿ ಪ್ರೇಮವುಳ್ಳವನಾಗು; ನನ್ನನ್ನು ಪೂಜೆಮಾಡು; ನನಗೆ ಎರಗು; ನನ್ನನ್ನೇ ಹೊಂದುತ್ತಿ; ನೀನು ನನ್ನ ಗೆಳೆಯನೆಂಬುದರ ಮೇಲೆ ನಿನಗೆ ನಿಜವಾಗಿ ಆಣೆಮಾಡಿ ಹೇಳುತ್ತೇನೆ...."

8) ಅವರ ಶೈಲಿಯ ಇನ್ನೊಂದು ಗುರುತು ಎಂದರೆ ದ್ವಿಬಹುವಚನಗಳನ್ನು ಬಳಸುವುದು ಇದು ಆಕಾಲದ ಶೈಲಿಯೇ ಆಗದ್ದೀತು. ಅವುಗಳನ್ನು ದ್ವಿಬಹುವಚನ ಅಗತ್ಯವಿಲ್ಲೆಂದು ತಿದ್ದಿಲ್ಲ. ಹಾಗೆಯೇ ಉಳಿಸಿಕೊಂಡಿದೆ. ಉದಾಹರಣೆಗೆ: ತಿಳಿಯಲಾಗದವುಗಳು (ತಿಳಿಯಲಾಗದವು), ಹುರಿದವುಗಳು (ಹುರಿದವು), ದಿವ್ಯವಾದವುಗಳು (ದಿವ್ಯವಾದವು), ವ್ಯರ್ಥವಾದವುಗಳು (ವ್ಯರ್ಥವಾದವು) ಇತ್ಯಾದಿ.

9) ಮೂಲದರ್ಥಕ್ಕೆ ಧಕ್ಕೆ ಬಾರದಂತೆ ಶ್ಲೋಕಗಳನ್ನು ಗುಂಪು ಮಾಡಿ ಅರ್ಥೈಸುವಾಗ ಮೂಲ ಶ್ಲೋಕಗಳನ್ನು ಯಥಾವತ್ತಾಗಿ ಕೆಲವೆಡೆ ಅನುವಾದ ಮಾಡಿದರೆ ಕೆಲವೆಡೆ ಶ್ಲೋಕದ ಕೆಲವು ಭಾಗಗಳನ್ನು ತೆಗೆದುಕೊಂಡಿದ್ದಾರೆ. ಕೆಲವು ಶ್ಲೋಕಗಳನ್ನು ಬಿಟ್ಟಿದ್ದಾರೆ. ಕೆಲವು ಪದಗಳನ್ನಷ್ಟೇ ಶ್ಲೋಕಗಳಿಂದ ಆಯ್ದುಕೊಂಡಿದ್ದಾರೆ ಇಷ್ಟಾದರೂ ಓದುಗರಿಗೆ ಇದು ಸಂಸ್ಕೃತ ಗ್ರಂಥದ ಅನುವಾದವೆಂದೇ ಎನಿಸದೆ ಕನ್ನಡ ಗ್ರಂಥ ಓದುತ್ತಿದ್ದೇನೆ ಎನಿಸುತ್ತೆ.

ಈಗಾಗಲೇ ಪದ್ಯಾನುವಾದ, ಪ್ರಶ್ನೋತ್ತರ ರೂಪದ ಗೀತೆಯ ಅನುವಾದ ಗ್ರಂಥಗಳನ್ನು ಪ್ರಕಟಿಸಿರುವ ವಿನಯ್ ಫೌಂಡೇಷನ್ನಿನವರು ಪ್ರಬಂಧರೂಪದಲ್ಲಿ ಸರಳಗದ್ಯದಲ್ಲಿ ವಿದ್ಯಾರ್ಥಿಗಳಿಗಾಗಿ ಕನ್ನಡದಲ್ಲಿ ಬಂದ ಮೊದಲಗ್ರಂಥ ಮಕ್ಕಳ ಕೈಗೀತೆಯನ್ನು ಪರಿಷ್ಕರಿಸಿ ಸಂಪಾದಿಸಿ ಕೊಡಿ ಎಂದು ಕೇಳಿದ್ದಕ್ಕೆ ನಾನು ಕೃತಜ್ಞನಾಗಿದ್ದೇನೆ. ಏಕೆಂದರೆ ಹತ್ತಾರು ದಶಕಗಳ ಕಾಲ ಜನರಿಂದ ಕಣ್ಮರೆಯಾದ ಗೀತಾಗ್ರಂಥ ಈಗಿನ ತಲೆಮಾರಿನವರ ಗಮನಕ್ಕೆ ತಂದು ಪ್ರಾಚೀನ ದೇವಾಲಯವನ್ನು ಜೀರ್ಣೋದ್ಧಾರ ಮಾಡಿದಂತೆ ಹೊಸಕೆರೆ ಚಿದಂಬರಯ್ಯನವರ ಗೀತಾ ಗ್ರಂಥಕ್ಕೆ ಪುನರ್ಜನ್ಮ ನೀಡಿ ವಿನಯ್ ಫೌಂಡೇಷನ್ ನಾಡಿನ ಜನರ ಅಭಿನಂದನೆಗೆ ಪಾತ್ರರಾಗಿದ್ದಾರೆ. ಇದಕ್ಕೆ ಕಾರಣಕರ್ತರಾದ ವಿನಯ್ ಫೌಂಡೇಷನ್ನಿನ ವ್ಯವಸ್ಥಾಪಕ ಅಧ್ಯಕ್ಷರಾದ ಟಿ.ವಿ.ರಾಜು ಅವರಿಗೆ ನಾವೆಲ್ಲರು ಕೃತಜ್ಞರಾಗಿರಬೇಕು. ಅವರ ಶ್ರದ್ಧೆ ಶ್ರಮ ಸಾರ್ಥಕವಾಗಲು ಗೀತಾ ಪ್ರೇಮಿಗಳೆಲ್ಲರೂ ಈ ಗ್ರಂಥವನ್ನು ಕೊಂಡೋದಿ ಕೊಂಡಾಡಬೇಕು.

ನವರಾತ್ರಿ
01.10.2024

ಪ್ರೊ.ಜಿ.ಅಶ್ವತ್ಥನಾರಾಯಣ
ಸಂಪಾದಕ

ಮೊದಲ ಮಾತು

(ಮಕ್ಕಳ ಕೈಗೀತೆಗೆ ಮೊದಲ ಮುದ್ರಣಕ್ಕೆ ಲೇಖಕರು ಬರೆದಿದ್ದು 1931ರಲ್ಲಿ)

ಧರ್ಮಕ್ಕೆ ತೌರುಮನೆಯೆಂಬ ಮಾತು ನಮ್ಮ ದೇಶಕ್ಕೆ ಮೀಸಲು. ಧರ್ಮ ಗ್ರಂಥಗಳಲ್ಲಿ ಎಲ್ಲರ ಗಂಟಲೊಳಗೂ ಇಳಿಯುವ ತುತ್ತಾಗಿರುವವುಗಳಲ್ಲಿ ಭಗವದ್ಗೀತೆಯು ಮೇಲುಗೈ ಆಗಿರುವದು. ಇದರ ಪ್ರಸಿದ್ಧಿ ನಮ್ಮ ದೇಶದಲ್ಲಿ ಮಾತ್ರವೇ ಅಲ್ಲ; ಜಗತ್ತಿನಲ್ಲಿ ಲಿಪಿ ಇರುವ ಭಾಷೆಗಳಲ್ಲೆಲ್ಲ ಇದು ರೂಪುಗೊಂಡಿರುವದು. ಧರ್ಮವೆಂಬ ಮಾತಿಗೆ ಎಷ್ಟೋ ಅರ್ಥಗಳಿವೆ. ಇಲ್ಲಿ ಈಗ ಭಗವಂತ, ನಾವು ಮತ್ತು ಜಗತ್ತು – ಈ ಮೂರರ ನಿಜವನ್ನು ಕಂಡುಕೊಂಡು, ಈಶ್ವರನಿಗೆ ಒಪ್ಪಾಗುವಂತೆ ನಡೆದು, ಜಗತ್ತಿನ ದುಃಖಗಳನ್ನು ಅಂಟಿಸಿಕೊಳ್ಳದವನಾಗಿ, ಬಹು ಹೆಚ್ಚಿನದಾದ ಈಶ್ವರಾನುಗ್ರಹದ ಸುಖವನ್ನು ಅನುಭವಿಸುವದೆಂಬ ಅರ್ಥವನ್ನಿಟ್ಟುಕೊಂಡರೆ ಸಾಕಾಗಿದೆ. ಈ ಗ್ರಂಥವು ಈ ವಿಚಾರವನ್ನು ಬಹು ಸವಿಕಟ್ಟಾಗಿ ತಿಳಿಸುವದು. ಈ ತಿಳಿವಳಿಕೆಯಿಂದಲೆ ಜಗತ್ತಿನ ನೆಮ್ಮದಿ. ದೇಶದ ಏಳಿಗೆಗೆ ಕಾರಣವೆನಿಸಿಕೊಳ್ಳುವ ಹಣದ ಸುಗ್ಗಿ ಮೊದಲಾದವುಗಳೆಲ್ಲ ಇದಕ್ಕೆ ಎರಡನೆಯವು. ಆದ್ದರಿಂದಲೆ ಪರದೇಶಗಳಲ್ಲಿ ಹೊನ್ನಿನ ಹೊಗೆ ಹಾಯುತ್ತಿದ್ದರೂ ಈ ತಿಳಿವಳಿಕೆಯ ಕೊರತೆ ಇರುವದರಿಂದ ಅಲ್ಲಿಕೂಡ ಆಗಬಾರದವುಗಳೆಷ್ಟೋ ಆಗುತ್ತ ಅವರನ್ನು ದುಃಖವೆಂಬ ಕಡಲಲ್ಲಿ ಮುಳುಗಿಸಿ ಗುಟುಕು ನೀರನ್ನು ಕುಡಿಸುತ್ತಿರುವವು. ಧರ್ಮವೊಂದು ಮೈದುಂಬಿಕೊಂಡಿದ್ದರೆ ಹಣದ ಸುಗ್ಗಿ ಮೊದಲಾದವು ಬಸವನ ಹಿಂದಿನ ಬಾಲದಂತೆ ಬೆನ್ನು ಹತ್ತಿಕೊಂಡು ಬರುವವು. ಆದ್ದರಿಂದ ಧರ್ಮಸೂಕ್ಷ್ಮಗಳನ್ನು ತಿಳಿದುಕೊಳ್ಳಬೇಕು. ಅವುಗಳ ವಿವರವು ಧರ್ಮಗ್ರಂಥಗಳಲ್ಲಿರುವದು.

ಆದ್ದರಿಂದ ಅದನ್ನು ತಿಳಿದುಕೊಳ್ಳುವದಕ್ಕಾಗಿ ದೊಡ್ಡವರ ಮಾತಿಗೆ ಕಿವಿಗೊಡಬೇಕು. ಕೃಷ್ಣನು ದೊಡ್ಡವರಿಗೆಲ್ಲ ದೊಡ್ಡವನು. ಆದ್ದರಿಂದ ಅವನು ಈ ಗ್ರಂಥದಲ್ಲಿ ಹೇಳಿರುವ ಬುದ್ಧಿವಾದವು ನಮಗೆ ಪಥ್ಯ. ನಾವು ಶೋಕ ಮೋಹಗಳನ್ನು ಗೆದ್ದವರಾದರೆ ಆಗ ನಮಗೂ ನಿಜವಾದ ಧರ್ಮವು ಹೊಳೆದೀತು. ನಾವಿನ್ನೂ ಆ ಮೆಟ್ಟಲಿಗೇರಿಲ್ಲ. ಆದ್ದರಿಂದ ಈ ಗ್ರಂಥವನ್ನೋದುವದಗತ್ಯ.

ಧರ್ಮದ ವಿಚಾರವು ತಲೆ ನರೆತವರ ಮಾತೆನ್ನುವದು ತೀರ ದಡ್ಡತನದ್ದು. ಚೆನ್ನಾಗಿ ಕಣ್ಣು ಬಿಟ್ಟು ನೋಡಿದರೆ ಮಕ್ಕಳೆ ಅದಕ್ಕೆ ತಕ್ಕವರು. ಮುಖದಲ್ಲಿ ಕೂದಲು ಹುಟ್ಟುವದರಲ್ಲಿರುವಾಗಲೆ ಮನಸ್ಸಿನೊಳಕ್ಕೆ ಧರ್ಮದ ಬೀಜವು ಬೀಳಬೇಕು. ಮದಾಲಸೆಯೆಂಬ ತಾಯಿಯ ಈ ಬಗೆಯ ಉಪದೇಶದಿಂದ ತೀರ ಚಿಕ್ಕ ವಯಸ್ಸಿನವರು ಕೂಡ ಜಗತ್ತಿಗೆ ಪೂಜ್ಯರಾದರೆಂದೂ ಧ್ರುವ ಮತ್ತು ಪ್ರಹ್ಲಾದ ಮೊದಲಾದವರು ಚಿಕ್ಕಂದಿನಲ್ಲಿಯೇ ಈ ತಿಳಿವಿನ ತುದಿಯನ್ನು ಮುಟ್ಟಿದ್ದರೆಂದೂ ಪುರಾಣಗಳು ಡಂಗುರವನ್ನು ಹೊಡೆಯುತ್ತವೆ. ಹೊಸ ಬಟ್ಟೆಗೆ ಬಣ್ಣವು ಚೆನ್ನಾಗಿ ಕಚ್ಚಿ ಹಿಡಿಯುವಂತೆ ಚಿಕ್ಕವರಿಗೆ ಈ ವಿಷಯವು ಚೆನ್ನಾಗಿ ಕಚ್ಚಿ ಹಿಡಿಯುವ ಸಂಭವ ಉಂಟು.

ಈಗಿನ ಕಾಲದಲ್ಲಿ ಮಕ್ಕಳಿಗೆ ಧರ್ಮದ ವಾಸನೆಯೇ ಇಲ್ಲದ್ದರಿಂದ ಮುಂದೆ ಅವರನ್ನು ಬರೀ ಹೊಟ್ಟೆ ಬಟ್ಟೆಗಳ ಹಂಬಲೊಂದೇ ಹತ್ತಿಕೊಂಡು ಪೀಡಿಸುತ್ತಿರುವದು ಕಂಡು ಬರುತ್ತದೆ. ಹೊಟ್ಟೆ ಬಟ್ಟೆಗಳ ಹಂಬಲನ್ನು ಬಿಡೆಂದು ನಮ್ಮ ಧರ್ಮವೇನೂ ಹೇಳುವದಿಲ್ಲ. ಧರ್ಮವನ್ನು ಮುಂದುಮಾಡಿಕೊಂಡು ಅವುಗಳ ಯೋಚನೆಯನ್ನು ನಡೆಸೆಂಬುದು ನಮ್ಮ ಹಿರಿಯರ ಉಪದೇಶ, ಹೊಟ್ಟೆ ಬಟ್ಟೆಗಳ ಯೋಚನೆಯನ್ನೆ ಬಿಟ್ಟು ದೇವರನ್ನೇ ನಂಬಿಕೊಂಡಿದ್ದ ನಮ್ಮ ಹಿರಿಯರು ತಮ್ಮ ಧರ್ಮದ ಪ್ರಭಾವದಿಂದ ರಾಜಾಧಿರಾಜರಿಗೆ ಕೂಡ ಅವರು ತಲೆದೂಗುವಂತೆ ಸತ್ಕಾರವನ್ನು ಮಾಡಿದ ಉದಾಹರಣೆಗಳೆಷ್ಟೋ ಇವೆ. ನಾವು ಭಗವಂತನನ್ನು ನಂಬಿ ಅವನ ಉಪದೇಶದಂತೆ ನಡೆದರೆ ನನಗೊಂದು ಮುದ್ದೆ ಹಿಟ್ಟೂ ಗೇಣು ಬಟ್ಟೆಯೂ ದೊರೆಯಲಾರದೆ? ಹೀಗೆಂದು ಕೈ ಮುದುರಿಕೊಂಡು ಭಗವಂತನನ್ನೆ ನೆನೆಯುತ್ತಿರುವ ಹೆಚ್ಚಿನ ಯೋಗ್ಯತೆ ಇಲ್ಲದ್ದರಿಂದ ಹೊಟ್ಟೆ ಬಟ್ಟೆಗಳ ಯೋಚನೆಯನ್ನು ನಡೆಸಿದರೂ ಯಾರೂ ತಮ್ಮ ಧರ್ಮವನ್ನು ತಾವು ಮೀರಬಾರದು.

ಮಕ್ಕಳಿಗೆ ತಿಳಿವಳಿಕೆಯನ್ನು ತಂದುಕೊಡಬೇಕೆಂಬ ಉದ್ದೇಶದಿಂದ ಗೀತೆಯನ್ನು ಕನ್ನಡದ ವ್ಯಾಸಂಗದಲ್ಲಿ ಹೆಚ್ಚಿನ ಯೋಗ್ಯತೆಯನ್ನು ತೋರಿಸಿಕೊಳ್ಳುವ ಮಕ್ಕಳಿಗೆ ನ್ಯಾಷನಲ್ ಹೈಸ್ಕೂಲ್ ಮೊದಲಾದ ದೇಶೀಯ ಸಂಸ್ಥೆಗಳಲ್ಲಿಯೂ ರಾಮಕೃಷ್ಣ ಹಾಸ್ಟೆಲ್ ಮೊದಲಾದ ಧಾರ್ಮಿಕ ಸಂಸ್ಥೆಗಳಲ್ಲಿಯೂ ಗೀತಾಜಯಂತಿಯ ದಿನ ಉಚಿತವಾಗಿ ಹಂಚಬೇಕೆಂದು ಆಲೋಚಿಸಿ ಶ್ರೀಯುತ ಎಸ್.ಕೆ.ನರಸಿಂಹಯ್ಯನವರು ತಮ್ಮ ಉದಾರ ಹೃದಯವನ್ನು ನನ್ನ ಮುಂದೆ ಬಿಚ್ಚಿ ಅದಕ್ಕೆ ನನ್ನ ನೆರವನ್ನು ಬಯಸಿದರು. ಮಕ್ಕಳಿಗೆ ತಕ್ಕಹಾಗೆ ಬರೆಯುವದು ಸುಲಭವಲ್ಲವೆಂದು ನನಗೆ ಗೊತ್ತಿದ್ದರೂ ನನಗೆ ತಿಳಿದ ಮಟ್ಟಿಗೆ ಇದು ಮಕ್ಕಳ ಬಳಕೆಯ ಮಾತಿನಲ್ಲಿ ಮಾತಾಡುವ ಗೀತೆಯಾಗಿರಬೇಕೆಂಬ ಗುರಿಯನ್ನಿಟ್ಟುಕೊಂಡು ಬರೆದುಕೊಟ್ಟೆನು. ಇದನ್ನು ಹರಡುವದರ ಮೂಲಕ ಧರ್ಮಕ್ಕೆ ಊರುಗೋಲನ್ನು ಕೊಟ್ಟು ನಿಲ್ಲಿಸುವ ಶ್ರೀಯುತರ ಪ್ರಯತ್ನವು ಧರ್ಮಕಾರ್ಯಗಳಲ್ಲೆಲ್ಲ ಕಲಶಪ್ರಾಯವೆಂದು ನಾನು ಇಲ್ಲಿ ಹೇಳದಿರಲಾರೆನು.

ಇದು ಮಕ್ಕಳ ಕೈಗೀತೆಯೆಂದು ದೊಡ್ಡವರು ಕೈಮುದುರಿಕೊಳ್ಳಬಾರದು. ಮಕ್ಕಳದೆಂಬ ಮುದ್ದಿನಿಂದಲಾದರೂ ದೊಡ್ಡವರೂ ಇದನ್ನು ಓದಿ ಆನಂದಿಸಬಹುದು. ಧರ್ಮದ ವಿಷಯವನ್ನು ತಿಳಿದಿರುವವರಿಗೆ ಇದು ತಮ್ಮ ತಿಳಿವನ್ನು ಮೆಲುಕುಹಾಕುವದಕ್ಕೆ ಸಾಧನವಾಗುವದು. ಇನ್ನು ಅದರ ಪರಿಚಯವಿಲ್ಲದವರಂತೂ ಈ ವಿಷಯದಲ್ಲಿ ಮಕ್ಕಳ ಸಾಲಿಗೆ ಸೇರಿದವರಾದ್ದರಿಂದ ಅವರೂ ಇದನ್ನು ಓದಿ ಇದರ ಅಭಿಪ್ರಾಯಗಳನ್ನು ಅರಗಿಸಿಕೊಳ್ಳಬೇಕು.

ಗೀತೆಯನ್ನೆಲ್ಲ ಓದಿ ತಿಳಿದುಕೊಳ್ಳುವದಕ್ಕೆ ಮುಂಚೆ ಅದರ ಕಥೆ ಕಣ್ಣಿಗೆ ಕಟ್ಟಿದ ಹಾಗೆ ಆಗಿದ್ದರೆ ಆನುಕೂಲವಾಗುವದೆಂದು ಯೋಚಿಸಿ ಅದನ್ನು ಇದರ ಮುಂದೆಯೇ ಸೇರಿಸಿರುವೆನು. ಅದನ್ನು ಉಪಯೋಗ ಮಾಡಿಕೊಂಡು ವಾಚಕರು ಗೀತೆಯ ಅಭಿಪ್ರಾಯವನ್ನು ಚೆನ್ನಾಗಿ ಮನಸ್ಸಿನಲ್ಲಿ ಮುದ್ರಿಸಿಕೊಳ್ಳಬೇಕೆಂಬುದು ನನ್ನ ಬಲವಾದ ಬಯಕೆ.

ಭಾವ–ಕರ್ಕಾಟಕ ಸಂಕ್ರಮಣ
(1931ನೇ ಇಸವಿ) ಬೆಂಗಳೂರು

ಹೊಸಕೆರೆ ಚಿದಂಬರಯ್ಯ
ಲೇಖಕರು

ಗೀತೆಯ ಕಥೆ

ಈ ಕಲಿಯುಗದ ಮೊದಲು ಎಂದರೆ ಸುಮಾರು ಐದು ಸಾವಿರ ವರ್ಷಗಳ ಹಿಂದೆ, ಈ ನಮ್ಮ ದೇಶಕ್ಕೆ ಹಸ್ತಿನಾ ಪಟ್ಟಣವೆಂಬುದು ದೊಡ್ಡ ರಾಜಧಾನಿಯಾಗಿತ್ತು. ಅದು ಈಗ ದೆಹಲಿ ಅಥವಾ ದಿಲ್ಲಿ ಎಂದು ಹೆಸರುಗೊಂಡಿದೆ. ಅಲ್ಲಿ ಆಗ ಧೃತರಾಷ್ಟ್ರ, ಪಾಂಡು ಎಂಬಿಬ್ಬರು ರಾಜಕುಮಾರರಿದ್ದರು. ಧೃತರಾಷ್ಟ್ರನು ಹಿರಿಯ; ಪಾಂಡು ಕಿರಿಯ, ಧೃತರಾಷ್ಟ್ರನಿಂದ ಹುಟ್ಟಿದ ನೂರು ಮಕ್ಕಳಿದ್ದರು. ಅವರ ಗುಂಪಿಗೆ ಕೌರವರೆಂದು ಹೆಸರು. ಅವರಲ್ಲಿ ದುರ್ಯೋಧನನು ಹಿರಿಯನು. ಪಾಂಡುವಿನಿಂದ ಹುಟ್ಟಿದ ಐವರು ಮಕ್ಕಳಿದ್ದರು. ಅವರ ಗುಂಪಿಗೆ ಪಾಂಡವರೆಂದು ಹೆಸರು. ಈಗ ಈ ಗ್ರಂಥದಲ್ಲಿ ಮತ್ತೆ ಮತ್ತೆ ಬರುವ ಅರ್ಜುನನೆಂಬ ಹೆಸರಿನವನು ಪಾಂಡವರೆಂಬ ಅಣಿಮುತ್ತಿನ ಮಾಲೆಯ ನಡುವಣ ಪದಕ. ಈ ಕೌರವರೂ ಪಾಂಡವರೂ ಚಿಕ್ಕಂದಿನಲ್ಲಿ ಒಂದೇ ಕಡೆ ಕೂಡಿ ಬೆಳೆದರೂ ಮನಸ್ಸಿನಲ್ಲಿ ಮಾತ್ರ ಅವರವರಿಗೆ ಹೊಂದಿಕೆ ಇರಲಿಲ್ಲ. ಕೌರವರು ಕೆಟ್ಟ ಆಸೆಯಿಂದ ಪಾಂಡವರನ್ನು ತಿಂದು ತೇಗಿ ತಮ್ಮ ಬೊಜ್ಜನ್ನು ಬೆಳೆಸಿಕೊಳ್ಳಬೇಕೆಂಬ ಹುಟ್ಟುಗುಣದವರಾಗಿದ್ದರು. ಪಾಂಡವರಿಗೆ ಧರ್ಮದ ಕಡೆಯ ಒಲವು ಬಹಳವಾಗಿತ್ತು. ಆಗಿನ ಕಾಲದಲ್ಲಿ ಭಗವಂತನ ಅವತಾರವೆಂದು ಹೆಸರುಗೊಂಡ ಶ್ರೀಕೃಷ್ಣನು ಅವರಿಗೆ ತಾಯಕಡೆಯ ಹತ್ತಿರದ ನಂಟನೂ ಹಿತಚಿಂತಕನೂ ಆಗಿದ್ದದ್ದಲ್ಲದೆ ಅರ್ಜುನನಿಗೆ ಭಾವಮೈದುನನಾಗಿರುವದರ ಜೊತೆಗೆ ಗೆಳೆಯನೂ ಆಗಿ ಅವನ ತೇರನ್ನು ನಡೆಸುವ ಕೆಲಸವನ್ನು ಕೈಕೊಂಡಿದ್ದನು.

ಕೌರವರೂ ಪಾಂಡವರೂ ದೊಡ್ಡವರಾದ ಮೇಲೆ ಆ ರಾಜ್ಯವನ್ನು ಹಂಚಿಕೊಂಡು ಆಳುತ್ತಿದ್ದರು. ಹೀಗಿರುವಾಗ ಒಮ್ಮೆ ಕೌರವರು ಪಾಂಡವರನ್ನು ಜೂಜಿಗೆ ಕರೆದು ಮೋಸದಿಂದ ಅವರನ್ನು ಸೋಲಿಸಿ ಅದರ ಫಲವಾಗಿ ಅವರು ಹನ್ನೆರಡು ವರ್ಷ ಕಾಡಿನಲ್ಲಿ ಅಲೆದುಕೊಂಡಿರಬೇಕೆಂದೂ ಒಂದು ವರ್ಷ ಯಾವುದಾದರೂ ಊರೊಳಗಿದ್ದು ಕಾಣಿಸಿಕೊಳ್ಳದಿರಬೇಕೆಂದೂ ಅವರನ್ನು ಹೊರಕ್ಕೆ ಅಟ್ಟಿ ಅವರ ರಾಜ್ಯವನ್ನೆಲ್ಲ ನುಂಗಿ ನೀರು ಕುಡಿದರು. ಪಾಂಡವರು ತಮ್ಮ ಪಾಲಿಗೆ ಬಂದ ಕಷ್ಟವನ್ನು ಹದಿಮೂರು ವರ್ಷ ಸಹನೆಯಿಂದ ಅನುಭವಿಸಿ ತೀರಿಸಿದರು. ಆಮೇಲೆ ಕೃಷ್ಣನು ಪಾಂಡವರ ಕಡೆಯವನಾಗಿ ಬಂದು ಅವರ ಪಾಲಿನ ಅರ್ಧರಾಜ್ಯವನ್ನು ಅವರಿಗೆ ಕೊಡಬೇಕೆಂದು ಮಾತು ತೆಗೆದನು. ದುರ್ಯೋಧನನು ಒಪ್ಪಲಿಲ್ಲ. ಕೊನೆಗೆ ಐವರಿಗೆ ಐದೂರುಗಳನ್ನಾದರೂ ಕೊಡೆಂದು ಕೃಷ್ಣನು ಅಂಗಲಾಚಿಕೊಂಡನು. ಪಾಂಡವರು ಅರ್ಧರಾಜ್ಯಕ್ಕೆ ಅಧಿಕಾರಿಗಳಾಗಿದ್ದರೂ ಕೂಡ ಅವರಿಗೆ ಸೂಜಿಯ ಮೊನೆಯಷ್ಟು ನೆಲವನ್ನೂ ಕೊಡುವದಿಲ್ಲವೆಂದು ದುರ್ಯೋಧನನು ಅವರನ್ನು ಹಠದಿಂದ ಮಾತಿನಲ್ಲಿ ಹಾರಿಸಿಬಿಟ್ಟನು. ಆದ್ದರಿಂದ ಅವರಿಬ್ಬರಿಗೂ ಯುದ್ಧವು ಮೊದಲಾಯಿತು. ಇದಿಷ್ಟೂ ಗೀತೆಯ ಹಿಂದಿನ ಕಥೆ.

ಇನ್ನು ಗೀತೆಯಲ್ಲಿ ತುಂಬಿಕೊಂಡಿರುವ ಕಥೆಯ ತಿರುಳೇನೆಂದರೆ :- ಕುರುಕ್ಷೇತ್ರವೆಂಬ ಸ್ಥಳದಲ್ಲಿ ಎರಡೂ ಕಡೆಯ ದಂಡು ಸೇರಿತು. ಧೃತರಾಷ್ಟ್ರನು ಎರಡು ಕಣ್ಣೂ ಕಾಣದ ಹುಟ್ಟು ಕುರುಡ; ಆದರೆ ರಣರಂಗದಲ್ಲಿ ನಡೆದ ವಿಷಯವನ್ನು ತಿಳಿಯಬೇಕೆಂಬ ಕುತೂಹಲವು ಅವನಿಗೆ ಬಹಳ. ಇದನ್ನರಿತು ಅವನ ಮೇಲಿನ ಅನುಗ್ರಹದಿಂದ ವ್ಯಾಸರು ಸಂಜಯನೆಂಬುವನಿಗೆ ದೂರದ ನೋಟವು ಕಾಣುವಂತೆಯೂ ದೂರದ ಮಾತು ಕೇಳಿಬರುವಂತೆಯೂ ಶಕ್ತಿಯನ್ನು ಕೊಟ್ಟು ಧೃತರಾಷ್ಟ್ರನ ಬಯಕೆಯನ್ನು ತೀರಿಸೆಂದು ಹೇಳಿದ್ದರು. ಅದರಂತೆ ಸಂಜಯನು ಅಲ್ಲಿನ ನಡೆನುಡಿಗಳನ್ನೆಲ್ಲ ಧೃತರಾಷ್ಟ್ರನಿಗೆ ಹೇಳಿದ್ದೇನೆಂದರೆ :

ಆಗ ದುರ್ಯೋಧನನಿಗೆ ತನ್ನ ದಂಡೇ ಹೆಚ್ಚಾಗಿದ್ದರೂ ಎದೆಯಲ್ಲಿ ಅಳುಕುದೋರಿತು. ಆದ್ದರಿಂದ ಅವನು ತನ್ನ ಧನುರ್ವಿದ್ಯಾಗುರುಗಳಾದ ದ್ರೋಣರ ಬಳಿಗೆ ಬಂದು ತನ್ನಕಡೆಯ ನಾಯಕರ ಹೆಸರನ್ನೆಲ್ಲ ಹೇಳುತ್ತಾ ಎಲ್ಲರೂ ಸೇರಿ ಸೇನಾಪತಿಗಳಾದ ಭೀಷ್ಮರನ್ನು ಹಿಂಬಾಲಿಸಿಕೊಂಡಿರಬೇಕೆಂದು

ಸೂಚಿಸುವದರ ಮೂಲಕ ಧರ್ಮವನ್ನು ತಂದುಕೊಳ್ಳುತ್ತಿದ್ದನು. ಅವನು ಎದೆಗೆಡದಿರಲೆಂದು ಭೀಷ್ಮರು ಶಂಖವನ್ನೂದಿದರು. ಎಲ್ಲ ಕಡೆಯಲ್ಲಿಯೂ ರಣವಾದ್ಯಗಳ ಕಲರವವೆದ್ದಿತು. ಅದರಲ್ಲಿ ಪಾಂಡವರ ಶಂಖಧ್ವನಿಗಳಿಂದ ಕೌರವರ ಕಡೆಯವರ ಎದೆ ಬಿರಿಯಿತು. ಆಗ ಒಬ್ಬರಮೇಲೊಬ್ಬರು ಬಾಣಗಳನ್ನು ಬಿಡಬೇಕಾದ ಹೊತ್ತಿನಲ್ಲಿ ತನ್ನೊಡನೆ ಕಾದುವದಕ್ಕೆ ಬಂದಿರುವವರನ್ನೆಲ್ಲ ನೋಡಬೇಕೆಂದು ಅರ್ಜುನನಿಗೆ ಮನಸ್ಸಾಯಿತು. ಅರ್ಜುನನ ಕೋರಿಕೆಯಂತೆ ಕೃಷ್ಣನು ಅರ್ಜುನನ ತೇರನ್ನು ಎರಡು ದಂಡುಗಳ ನಡುವೆ ನಿಲ್ಲಿಸಿದನು. ಆಗ ಸುತ್ತಲೂ ಕಣ್ಣು ಹಾಕಿ ನೋಡಿದ ಅರ್ಜುನನಿಗೆ ಅವರೆಲ್ಲ ಆ ಕಾಲದಲ್ಲಿ ಹಗೆಗಳಾಗಿ ಕಾಣುವದಕ್ಕೆ ಬದಲು ಗುರುಗಳಾಗಿಯೂ ಹಿರಿಯರಾಗಿಯೂ ನಂಟರಿಷ್ಟರಾಗಿಯೂ ಕಂಡರು. ಅವರ ಮೇಲೆ ಕೈ ಮಾಡುವದು ಹೇಗೆಂದು ಅವನ ಮನಸ್ಸು ಕರಗಿ ನೀರಾಗಿ ಹರಿದು ಕೋಡಿಯಿಟ್ಟಿತು. ರಾಜ್ಯವನ್ನು ಗಳಿಸುವದಕ್ಕಾಗಿ ಗುರುಗಳು ಹಿರಿಯರು– ಮೊದಲಾದ ತನ್ನವರನ್ನು ಕೊಂದು ಪಾಪವನ್ನು ಸೆರಗಿಗೆ ಗಂಟುಹಾಕಿಕೊಳ್ಳುವದಕ್ಕಿಂತ ತಿರಿದು ತಿನ್ನುವದಾದರೂ ಅವನಿಗೆ ಮೇಲೆನಿಸಿತು. ಇದರಮೇಲೆ ತಾನು ಗೆಲ್ಲುವೆನೋ ಸೋಲುವೆನೋ ಎಂಬ ಸಂಶಯವೂ ಅವನೊಳಗೆ ತಲೆ ಎತ್ತಿತು. ಹೀಗೆ ಶೋಕ ಮೋಹಗಳ ಬಾಯಿಗೆ ತುತ್ತಾದ ಅವನು ತನ್ನ ಧನುಸ್ಸನ್ನು ಕೆಳಗಿಟ್ಟು ತಾನು ಕಾದಲಾರೆನೆಂದು ಹೇಳಿ ತೇರಿನ ಮೇಲೆಯೇ ಕೈ ಮುದುರಿಕೊಂಡು ಕುಳಿತುಬಿಟ್ಟನು. ಕೃಷ್ಣನು ಬೆನ್ನು ಚಪ್ಪರಿಸಿದರೂ ಅರ್ಜುನನು ತನಗೇನೂ ತೋಚದೆಂದನು.

ಅರ್ಜುನನ ಗುಟ್ಟು ಕೃಷ್ಣನಿಗೆ ಗೊತ್ತಿತ್ತು. ಅರ್ಜುನನು ಹೆಚ್ಚು ರಜೋಗುಣದ ಮನುಷ್ಯ. ಯುದ್ಧವೆಂದರೆ ಅವನ ಮೈಯುಬ್ಬುವುದು, ಅವನು ಕಾದುವುದಕ್ಕೆ ಸಿಕ್ಕಿದರೆ ಸಾಕೆಂದು ಕಾದಿರುವವನು. ಆದರೆ ಅವನಲ್ಲಿ ತಕ್ಕಷ್ಟು ಸತ್ತ್ವಗುಣವೂ ಇತ್ತು. ಅದರಿಂದ ಕೊಲ್ಲುವುದು ಕ್ರೂರತನವೆನಿಸಿ ಅವನಿಗೆ ಆಗ ಯುದ್ಧವು ಮಾಡತಕ್ಕದ್ದಲ್ಲವೆಂದು ತೋರಿತು. ಈಗ ಬಿಟ್ಟರೂ ಮುಂದೆ ಅವನು ಮಾಡತಕ್ಕವನೆ. ಹೀಗಿರುವಾಗ ಅವನು ಕಾದುವದಕ್ಕೆಂದು ಬಂದವನು ಕಾದುವದಿಲ್ಲವೆಂದು ಕೈ ಮುದುರಿಕೊಂಡದ್ದು ಸರಿಯಾಗಲಿಲ್ಲ. ಆದ್ದರಿಂದ ಕಾದುವದಕ್ಕೆ ಅವನನ್ನು ಎಬ್ಬಿಸಿ ನಿಲ್ಲಿಸುವ ಕೆಲಸವು ಅವನ ಗೆಳೆಯನಾದ ಶ್ರೀ ಕೃಷ್ಣನ ಮೇಲೆ ಬಿತ್ತು. ಪಾಪಕ್ಕೆ ಹೆದರಿ ಕಾದುವದನ್ನು ಕೈಬಿಟ್ಟ ಅರ್ಜುನನಿಗೆ ಅದರಲ್ಲಿ ಪಾಪವಿಲ್ಲವೆಂಬುದನ್ನು ತೋರಿಸಬೇಕಾಗಿ ಬಂತು. ತಾನು ಕೊಲ್ಲುವವನೆಂಬ ಮತ್ತು ಅವರು

ಸಾಯುವವರೆಂಬ ತಿಳಿವು ಇರುವವರೆಗೂ ಪಾಪವು ತಪ್ಪಿದ್ದಲ್ಲ. ಕೊಲ್ಲುವದೂ ಸಾಯುವದೂ ದೇಹಕ್ಕೆ ಗಂಟುಬಿದ್ದದ್ದೆಂದೂ ತಾನು ದೇಹಕ್ಕಿಂತ ಬೇರೆಯೆಂದೂ ತಿಳಿದು ಶಾಸ್ತ್ರದ ಮಾತನ್ನು ನಡೆಸಿದರೆ ಮಾತ್ರ ಪಾಪವು ಅಂಟುವದಿಲ್ಲ. ಈ ತಿಳಿವಳಿಕೆಯನ್ನು ಅರ್ಜುನನಿಗೆ ತಂದುಕೊಡಬೇಕೆಂದು ಕೃಷ್ಣನು ಸಮಸ್ತ ಧರ್ಮಗ್ರಂಥಗಳ ಶಿಖರಪ್ರಾಯವಾದ ಉಪನಿಷತ್ತುಗಳ ಭಟ್ಟಿಯನ್ನು ಇಳಿಸಿ ಅದರಿಂದ ಅರ್ಜುನನನ್ನು ಹುರಿದುಂಬಿಸುವ ಹಂಚಿಕೆಯನ್ನು ಮಾಡಿದನು.

ಅವನು ಮೊದಲು ಅರ್ಜುನನನ್ನು ಕುರಿತು "ಅರ್ಜುನ, ಗುರುಗಳೂ ಹಿರಿಯರೂ ಮೊದಲಾದವರೆಲ್ಲ ನಿನ್ನಿಂದ ಸಾಯುವದರಿಂದ ನಿನಗೆ ಪಾಪವು ಬರುವದೆಂಬುದು ನಿನ್ನ ಮನಸ್ಸನ್ನು ಕೊರೆಯುತ್ತಿದೆಯಷ್ಟೆ. ಸಾವು ದೇಹಕ್ಕೆ ಹೊರತು ಆತ್ಮನಿಗಲ್ಲ. ದೇಹವೆಂದಿದ್ದರೂ ಸಾಯತಕ್ಕದ್ದೆ. ಆತ್ಮನು ಕೊಲ್ಲುವವನೂ ಅಲ್ಲ; ಕೊಲ್ಲಿಸಿಕೊಳ್ಳುವವನೂ ಅಲ್ಲ. ಅವನು ಹುಟ್ಟುಸಾವುಗಳಿಲ್ಲದೆ ಯಾವಾಗಲೂ ಯಾವ ಬದಲಾವಣೆಯನ್ನೂ ಹೊಂದದೆ ಇದ್ದೇ ಇರುವವನು, ಕಾದುವದು ಕ್ಷತ್ರಿಯನ ಧರ್ಮ. ಆದ್ದರಿಂದ ಕಾದುವದಕ್ಕೆ ಏಳು" ಎಂದು ಹೇಳಿದನು.

ಈ ತಿಳಿವಳಿಕೆಯ ಮಾತು ಶೋಕಮೋಹಗಳ ಹುಟ್ಟಡಗಿಸುವ ಮಹೌಷಧವಾದರೂ ಅರ್ಜುನನಿಗೆ ದಕ್ಕಲಿಲ್ಲ. ಅರ್ಜುನನ ಬುದ್ಧಿಯು ಆ ಮಹೌಷಧಿಯನ್ನು ಒಳಕೊಳ್ಳಲಾರದೆ ಹೋದದ್ದನ್ನು ನೋಡಿ ಕೃಷ್ಣನು ಅದರ ಕೆಳಗಿನ ಮೆಟ್ಟಲಿನ ಮಾತನ್ನೆತ್ತಿ "ಅರ್ಜುನ, ಕರ್ಮಗಳ ಫಲದ ಬಯಕೆ ಇರುವವರ ಮನಸ್ಸಿಗೆ ಈ ತಿಳಿವಳಿಕೆ ಹತ್ತುವದಿಲ್ಲ. ನೀನು ಅದನ್ನು ಬಿಟ್ಟು ಮಾಡು. ನೀನು ದೇಹಕ್ಕಿಂತ ಬೇರೆಯೆಂಬುದನ್ನರಿತುಕೊ. ಎಲ್ಲ ಕರ್ಮಗಳ ಫಲಗಳೂ ಆ ತಿಳಿವಿನ ಒಂದು ಮೂಲೆಯಲ್ಲಿರುವವು. ಆ ನಿಜವಾದ ಆತ್ಮನನ್ನು ಅರಿತರೆ ನೀನೂ ಹುಟ್ಟು ಸಾವುಗಳಿಲ್ಲದವನಾಗುತ್ತಿ" ಎಂದು ಹೇಳಿದನು. ಆಗ ಅರ್ಜುನನು ಆತ್ಮನನ್ನರಿತವರ ನಡೆನುಡಿಗಳನ್ನು ತಿಳಿಯಲಪೇಕ್ಷಿಸಿದನು. ಕೃಷ್ಣನು ಅವರ ವಿಚಾರವನ್ನು ಚೆನ್ನಾಗಿ ಹೊಗಳಿ ಶಾಂತಿ ಎಂಬುದು ಅವರಿಗೆ ಮೀಸಲೆಂದು ತನ್ನ ಮಾತನ್ನು ಮುಗಿಸಿದನು.

"ಆತ್ಮನ ಅರಿವು ಅಷ್ಟು ಮೇಲಾದದ್ದಾದರೆ ತನಗೆ ಈ ಕೊಲೆಯ ಕೆಲಸವನ್ನೇಕೆ ಹೇಳುತ್ತಿ?" ಎಂದು ಅರ್ಜುನನು ಕೇಳಿದನು. ಆಗ ಕೃಷ್ಣನು "ಅರ್ಜುನ, ಆತ್ಮನ ಅರಿವಿನೊಳಗೆ ತೇಲಾಡುವ ಮಾತು ಒಳ್ಳೆಯ ಹಣ್ಣಾದ ವಿಚಾರವುಳ್ಳವರಿಗೆ

ಅದನ್ನಿನ್ನೂ ಮೈಗೂಡಿಸಿಕೊಳ್ಳಬೇಕೆನ್ನುವವರಿಗೆ ನಿನಗೆ ನಾನು ಹೇಳಿದ ಕರ್ಮಯೋಗದ ಮಾತು. ಯಾರಿಗೂ ಸುಮ್ಮನಿರುವದಕ್ಕಾಗುವದಿಲ್ಲ. ಆದ್ದರಿಂದ ಶಾಸ್ತ್ರವು ತನಗೆ ಗೊತ್ತು ಮಾಡಿರುವ ಕರ್ಮವನ್ನು ಮಾಡುವದೊಳ್ಳೆಯದು. ನಮ್ಮ ಕರ್ಮಗಳಿಂದ ನಾವು ದೇವತೆಗಳನ್ನು ಪೂಜಿಸಿದರೆ ಅವರು ನಮ್ಮ ಬಯಕೆಗಳನ್ನೆಲ್ಲ ತೀರಿಸುವರು." ಎಂದು ಹೇಳಿ ಆತ್ಮನನ್ನರಿತವರು ಮಾತ್ರ ಏನನ್ನೂ ಮಾಡಬೇಕಾದದ್ದಿಲ್ಲವೆಂದೂ ಜನರಿಗೆ ಮೇಲು ಪಂಕ್ತಿಯಾಗಿರುವದಕ್ಕಾದರೂ ನೀನು ಮಾಡಬೇಕೆಂದೂ ತನ್ನ ಧರ್ಮವನ್ನು ಬಿಟ್ಟು ಮತ್ತೊಬ್ಬರ ಧರ್ಮವನ್ನು ನಡೆಸಹೋಗುವದು ಪಾಪಕರವೆಂದೂ ವಿವರಿಸಿದನು.

ಅಂಥ ಪಾಪಕ್ಕೆ ಮನಸ್ಸನ್ನು ತಳ್ಳುವ ಹಗೆ ಯಾವುದೆಂಬದನ್ನು ತಿಳಿಸೆಂದು ಅರ್ಜುನನು ಕೇಳಿದನು. ಅದಕ್ಕೆ ಕೃಷ್ಣನು "ಅರ್ಜುನ, ರಜೋಗುಣದಿಂದ ಹುಟ್ಟಿದ ಬಯಕೆಯು ಹಾಗೆ ಮಾಡಿಸುವದು. ಅದು ಕಾಲೂರಿಕೊಂಡಿರುವ ಇಂದ್ರಿಯಗಳನ್ನೂ ಮನಸ್ಸನ್ನೂ ಬಿಗಿಹಿಡಿದು ಆ ಹಗೆಯನ್ನು ಕೊಲ್ಲು. ಈ ಯೋಗವನ್ನು ನಾನೇ ಮೊದಲು ಸೂರ್ಯನಿಗೆ ಹೇಳಿದೆನು." ಎಂದು ಸೂಚಿಸಿದನು. ಈಗ ಹುಟ್ಟಿರುವ ಕೃಷ್ಣನು ಬಹು ಹಿಂದೆ ಹುಟ್ಟಿದ ಸೂರ್ಯನಿಗೆ ಹೇಳಿದ್ದು ಹೇಗೆಂದು ಅರ್ಜುನನಿಗೆ ಸಂಶಯವು ಬಂತು. ಆಗ ಕೃಷ್ಣನು "ಅರ್ಜುನ, ನಾನು ಯಾವಾಗಲೂ ಇರುವವನಾಗಿ ಮಾಯೆಯಿಂದ ಈ ಜಗತ್ತನ್ನು ಹುಟ್ಟಿಸಿದವನು. ಧರ್ಮವನ್ನು ನೆಟ್ಟಗೆ ನಿಲ್ಲಿಸುವದಕ್ಕಾಗಿ ನಾನು ಆಗಾಗ ಇಳಿದುಬರುವವನು. ಯಾವ ಯಾವ ಗುಣದವರಿಗೆ ಯಾವ ಯಾವ ಕರ್ಮಗಳು ತಕ್ಕವೆಂದು ನಾನು ಗೊತ್ತುಮಾಡಿದ್ದೇನೆ. ಹಿಂದಿನಿಂದ ನಡೆದುಬಂದಿರುವ ಆ ಪದ್ಧತಿಯನ್ನು ನೀನೂ ನಡೆಸು" ಎಂದು ಹೇಳುತ್ತ, ಆತ್ಮನಿಗೆ ಕರ್ಮಗಳ ಸಂಬಂಧವಿಲ್ಲವೆಂದು ತಿಳಿದವರಿಗೆ ಪಾಪವು ತಟ್ಟುವದಿಲ್ಲವೆಂಬ ಅಭಿಪ್ರಾಯವನ್ನು ಅವನ ಕಣ್ಣ ಮುಂದೆ ಎತ್ತಿ ಹಿಡಿದನು.

ಕೃಷ್ಣನು ಹೀಗೆ ಕರ್ಮವನ್ನು ಒಮ್ಮೆ ಮಾಡುವದನ್ನೂ ಒಮ್ಮೆ ಬಿಡುವದನ್ನೂ ಹೊಗಳಿದ್ದು ಮತ್ತೆ ಅರ್ಜುನನಿಗೆ ಸಂಶಯಕ್ಕೆ ಕಾರಣವಾಯಿತು. ಅವೆರಡರಲ್ಲಿ ತನಗೆ ಯಾವದು ಒಳ್ಳೆಯದೆಂದು ಅವನು ಕೇಳಿದನು. ಅದಕ್ಕೆ ಕೃಷ್ಣನು ಅರ್ಜುನ, ಅವೆರಡರಲ್ಲಿ ಯಾವದನ್ನು ಸಾಧಿಸಿದರೂ ಒಂದೇ ಫಲ. ಅವೆರಡರಲ್ಲಿ ಕರ್ಮವನ್ನು ಬಿಡುವದಕ್ಕಿಂತ ಮಾಡುವದು ಮೇಲು. ಫಲದ ಆಸೆಯನ್ನು ಬಿಟ್ಟು ಮಾಡಿದರೆ

ಅವನು ಮಾಡಿದವನೂ ಆಗುವನು; ಬಿಟ್ಟವನೂ ಆಗುವನು. ಧ್ಯಾನವೆಂಬ ಮೆಟ್ಟಿಲನ್ನು ಹತ್ತಬೇಕೆನ್ನುವವನಿಗೆ ಮಾಡುವದು ಸಾಧನ; ಅದನ್ನು ಹತ್ತಿದವನಿಗೆ ಬಿಡುವದು ಸಾಧನ." ಎಂದು ಮುಂತಾಗಿ ಹೇಳಿ ಧ್ಯಾನದ ಸ್ವರೂಪವನ್ನು ವಿವರಿಸಿ ಧ್ಯಾನದಿಂದ ಎಲ್ಲೆಲ್ಲಿಯೂ ತುಂಬಿರುವ ತನ್ನ ನಿಜಸ್ವರೂಪವನ್ನು ತಿಳಿಯಲಾಗುವದೆಂದನು. ಧ್ಯಾನದಲ್ಲಿ ಮನಸ್ಸನ್ನು ನಿಲ್ಲಿಸುವದು ಅರ್ಜುನನಿಗೆ ಆಗದ ಮಾತೆನಿಸಿತು. ಅದನ್ನು ಕಂಡು ಕೃಷ್ಣನು "ಅರ್ಜುನ, ಅಭ್ಯಾಸದಿಂದಲೂ ವೈರಾಗ್ಯದಿಂದಲೂ ಅದು ಸಾಧ್ಯವಾಗುವದು. ಅದು ಕೊನೆ ಮುಟ್ಟುವದಕ್ಕೆ ಮುಂಚೆ ಸತ್ತರೂ ಆ ಯತ್ನವು ಮುಂದಿನ ಜನ್ಮದಲ್ಲಿ ಮುಂದುವರಿದು ಸಿದ್ಧಿಯಾಗುವದು." ಎಂದು ಸಮಾಧಾನವನ್ನು ಹೇಳಿ ತಾನು ಎಲ್ಲೆಲ್ಲಿಯೂ ತುಂಬಿಕೊಂಡಿರುವ ಸ್ವರೂಪವನ್ನು ವಿವರಿಸಿ ತನಗೆ ಶರಣುಬಂದವರು ಅಧ್ಯಾತ್ಮ ಮೊದಲಾದವುಗಳನ್ನೆಲ್ಲ ತಿಳಿದವರಾಗಿ ಸಾಯುವಾಗ ತನ್ನ ನೆನಪನ್ನು ಹೊಂದುವರೆಂದನು. ಆ ಅಭಿಪ್ರಾಯವನ್ನು ಮತ್ತಷ್ಟು ವಿವರಿಸಬೇಕೆಂದು ಅರ್ಜುನನ ಪ್ರಶ್ನೆ ಬಂತು. ಕೃಷ್ಣನು ಅವುಗಳನ್ನೆಲ್ಲ ವಿವರಿಸಿ ಸಾಯುವಾಗ ತನ್ನ ನೆನಪು ಬರುವದರಿಂದ ಅವರು ಸತ್ತ ಮೇಲೆ ತನ್ನ ಬಳಿಗೇ ಬರುವರೆಂದು ಹೇಳುತ್ತ ಓಂಕಾರದ ಮೂಲಕ ತನ್ನನ್ನು ನೆನೆಯುತ್ತ ಸಾಯುವವರ ವಿಚಾರವನ್ನೆತ್ತಿ ಅವರು ಸತ್ತಮೇಲೆ ಉತ್ತರದ ದಾರಿಯಲ್ಲಿ ಹೋಗಿ ಮೋಕ್ಷವನ್ನು ಹೊಂದುವರೆಂದೂ ಉಳಿದ ಕರ್ಮಠರು ದಕ್ಷಿಣದ ದಾರಿಯಲ್ಲಿ ಹಿಂದಿರುಗುವರೆಂದೂ ತಿಳಿಸಿ ಜಗತ್ತಿನಲ್ಲಿ ತನ್ನ ಸಾನ್ನಿಧ್ಯವು ಹೆಚ್ಚಾಗಿರುವ ಕಡೆಗಳನ್ನೆಲ್ಲ ಹೇಳಿದನು. ಇದನ್ನು ಕೇಳಿ ಅರ್ಜುನನು ಬಹು ಸಂತೋಷಗೊಂಡು ಅದನ್ನು ಇನ್ನೂ ಬೆಳೆಸಿ ಹೇಳೆಂದನು. ಅದು ಎಂದಿಗೂ ಕೊನೆಮುಟ್ಟುವದಿಲ್ಲವೆಂದು ಹೇಳಿ ಕೃಷ್ಣನು ಜಗತ್ತೆಲ್ಲ ತನ್ನದೊಂದಂಶವೆಂದನು. ಜಗತ್ತನ್ನೆಲ್ಲ ಅಡಗಿಸಿಕೊಂಡಿರುವ ನಿನ್ನ ರೂಪವನ್ನು ನೋಡಬೇಕೆಂದು ಅರ್ಜುನನು ಬಾಯಿನೀರು ಸುರಿಸಿದನು. ಅರ್ಜುನನ ಬಯಕೆಯನ್ನು ತೀರಿಸುವದಕ್ಕಾಗಿ ಕೃಷ್ಣನು ತನ್ನ ರೂಪವನ್ನು ನೋಡುವ ಶಕ್ತಿಯುಳ್ಳ ಕಣ್ಣನ್ನು ಅವನಿಗೆ ಕೊಟ್ಟು ಆ ರೂಪವನ್ನು ತಾಳಿದನು.

ಅರ್ಜುನನು ನೋಡುತ್ತಾನೆ; ಎಷ್ಟು ಮುಖ! ಎಷ್ಟು ಕಣ್ಣು! ಎಷ್ಟು ಒಡವೆಗಳು! ಎಷ್ಟು ಆಯುಧಗಳು! ಎಷ್ಟು ಮಾಲೆಗಳು! ಎಷ್ಟು ಕೋಟಿಸೂರ್ಯರ ಬೆಳಕು! ಅದರೊಳಗೊಂದುಕಡೆ ಎಲ್ಲ ಜಗತ್ತು! ಆಕಾಶಕ್ಕೂ ಭೂಮಿಗೂ ಏಕವಾಗಿರುವ ರೂಪ! ಕಾದುವದಕ್ಕೆ ಬಂದಿರುವವರೆಲ್ಲ ಅವನ ಬಾಯೊಳಕ್ಕೆ ನುಗ್ಗುತ್ತಿದ್ದಾರೆ!

ಅವರ ಕಿರೀಟಗಳೆಲ್ಲ ಅವನ ಹಲ್ಲ ಸಂದಿಯಲ್ಲಿ ಚೂರುಚೂರಾಗುತ್ತಿವೆ! ಇವನ್ನೆಲ್ಲ ನೋಡಿ ಬೆಪ್ಪಾಗಿ ಅರ್ಜುನನು ನೀನು ಯಾರೆಂದು ಅವನನ್ನು ಕೇಳಿದನು. ಅದಕ್ಕೆ ಆ ವಿಶ್ವರೂಪಿಯಾದ ಕೃಷ್ಣನು ನಾನು ಲೋಕಗಳನ್ನೆಲ್ಲ ನುಂಗುವದಕ್ಕೆ ಬಂದಿರುವವನು. ನಿನ್ನ ಹೊರತು ಇಲ್ಲಿ ಕಾದುವದಕ್ಕೆ ಬಂದಿರುವವರನ್ನೆಲ್ಲ ನಾನಾಗಲೆ ಕೊಂದಿರುವೆನು! ನೀನು ನಿಮಿತ್ತ ಮಾತ್ರಕ್ಕೆ ನಿಂತು ಕಾದಿ ಗೆದ್ದು ಕೀರ್ತಿಯನ್ನು ಗಳಿಸಿಕೊ." ಎಂದು ಉತ್ತರವನ್ನಿತ್ತನು. ಆಗ ಅರ್ಜುನನು ಅವನಿಗೆರಗಿ ತಾನು ಈ ಯೋಗ್ಯತೆಯನ್ನು ತಿಳಿಯದೆ ಗೆಳೆಯತನದ ಸಲಿಗೆಯಿಂದ ಮಾಡಿದ ಅಪಚಾರಗಳನ್ನು ಮನ್ನಿಸಿ ಶಾಂತವಾದ ಮೊದಲಿನ ರೂಪನ್ನು ತೋರಿ ಕಾಪಾಡೆಂದು ಕೃಷ್ಣನನ್ನು ಬೇಡಿಕೊಂಡನು. ಹಾಗೆಯೇ ಆಗಲೆಂದು ಕೃಷ್ಣನು ಮತ್ತೆ ಮೊದಲಿನಂತಾದನು. ಅದನ್ನು ನೋಡಿದ ಮೇಲೆ ಅರ್ಜುನನಿಗೆ ಸಮಾಧಾನ ಉಂಟಾಯಿತು. ಆಗ ಕೃಷ್ಣನು ಈ ತನ್ನ ರೂಪವನ್ನು ಭಕ್ತಿಯಿಂದ ನೋಡಲಾಗುವದೆಂದನು.

ಅದನ್ನು ಕೇಳಿ ಅರ್ಜುನನು "ಭಕ್ತಿಯಲ್ಲಿ ಈ ಕಾಣುವ ಸ್ವರೂಪದ ಉಪಾಸನೆ ಮೇಲೋ? ಎಲ್ಲೆಲ್ಲಿಯೂ ತುಂಬಿಕೊಂಡು ಕಾಣದಿರುವ ಸ್ವರೂಪದ ಉಪಾಸನೆ ಮೇಲೊ?" ತಿಳಿಯಹೇಳೆಂದನು. ಅದಕ್ಕೆ ಕೃಷ್ಣನು " ಅರ್ಜುನ, ನನ್ನ ಕಾಣುವ ಸ್ವರೂಪದ ಉಪಾಸನೆಯೇ ಮೇಲು. ಕಾಣದ ಸ್ವರೂಪದ ಉಪಾಸನೆಯು ಕಷ್ಟ. ಅದನ್ನು ಸಾಧಿಸುವವರು ತಮ್ಮನ್ನು ತಾವೆ ಮೇಲಕ್ಕೆತ್ತಿಕೊಳ್ಳುವ ಧೀರರು." ಎಂದು ಮುಂತಾಗಿ ಹೇಳಿ ಭಕ್ತರನ್ನು ಬಾಯಿತುಂಬ ಹೊಗಳಿದನು. ಆ ಮೇಲೆ ಅವನು ಕಾಣದ ಸ್ವರೂಪವನ್ನು ತಿಳಿಯುವದಕ್ಕೆ ಸಾಧನಗಳನ್ನೂ ತಾನು ಎಲ್ಲರ ಜೀವವಾಗಿರುವದನ್ನೂ ತನ್ನನ್ನು ಮರೆಮಾಡಿರುವ ಗುಣಗಳ ವಿಚಾರವನ್ನೂ ಆ ಗುಣಗಳನ್ನು ಗೆದ್ದವರ ನಡೆನುಡಿಗಳನ್ನೂ ತಿಳಿಸಿ ತಾನು ಈ ಸಂಸಾರದ ತಾಯಿಬೇರಾಗಿರುವೆನೆಂದು ಹೇಳಿ ಜನರ ಒಳ್ಳೆಯ ಮತ್ತು ಕೆಟ್ಟ ಸ್ವಭಾವಗಳನ್ನು ವಿವರಿಸಿದನು. ಆಗ ಅರ್ಜುನನು ಶಾಸ್ತ್ರದ ಕಟ್ಟನ್ನು ಬಿಟ್ಟು ಮಾಡುವವರ ಶ್ರದ್ಧೆಯ ಬೆಲೆಯ ವಿಚಾರವನ್ನೆಲ್ಲ ಕೃಷ್ಣನನ್ನು ಕೇಳಿ ತಿಳಿದುಕೊಂಡನು.

ಇಷ್ಟಾಗುವದರಲ್ಲಿ ಕೃಷ್ಣನು ಬಿಡುವದೆಂಬರ್ಥದಲ್ಲಿ ಒಮ್ಮೊಮ್ಮೆ ಸಂನ್ಯಾಸವೆಂಬ ಮಾತನ್ನೂ ಒಮ್ಮೊಮ್ಮೆ ತ್ಯಾಗವೆಂಬ ಮಾತನ್ನೂ ಉಪಯೋಗಿಸಿದ್ದನು. ಅವೆರಡಕ್ಕೂ ವ್ಯತ್ಯಾಸವೇನಿರಬಹುದೆಂದು ಅರ್ಜುನನು ಮಾತು ತೆಗೆದನು.

ಆಗ ಕೃಷ್ಣನು ಅರ್ಜುನನನ್ನು ಕುರಿತು ಫಲದಾಸೆಯ ಕರ್ಮಗಳನ್ನು ಬಿಡುವುದು ಸಂನ್ಯಾಸವೆಂದೂ ಫಲದಾಸೆಯನ್ನು ಬಿಡುವದು ತ್ಯಾಗವೆಂದೂ ಹೇಳಿ ತ್ಯಾಗವೆಂಬ ಮಾತಿನ ಅರ್ಥಕ್ಕೆ ಮತ್ತಷ್ಟು ಬಣ್ಣವನ್ನು ಕೊಡುತ್ತ ಮಾತಿಗೆ ಹತ್ತಿಬಂದ ಅನೇಕ ವಿಷಯಗಳನ್ನು ವಿವರಿಸಿ ಆತ್ಮನು ಏನನ್ನೂ ಮಾಡುವವನಲ್ಲವೆಂಬ ಅಭಿಪ್ರಾಯದಿಂದ ಕರ್ಮಗಳನ್ನೆಲ್ಲ ದೂರ ಮಾಡಿಕೊಂಡು ತನ್ನಲ್ಲಿ ಭಕ್ತಿಯನ್ನಿಟ್ಟು ಕಾದಿದರೆ ಪಾಪದ ಹೊಡೆತವನ್ನು ತಾನು ತಪ್ಪಿಸುವೆನೆಂದು ತನ್ನ ಉಪದೇಶವನ್ನು ಮುಗಿಸಿದನು. ಇದನ್ನೆಲ್ಲ ಕೇಳಿದ ಅರ್ಜುನನು ಈಗ ತನಗೆ ಬುದ್ಧಿ ಬಂತೆಂದು ಹೇಳಿ ಕಾದುತ್ತೇನೆಂದೊಪ್ಪಿಕೊಂಡನು.

ಹೀಗೆ ರಣರಂಗದಲ್ಲಿ ನಡೆದದ್ದನ್ನೆಲ್ಲ ಹೇಳಿ ಧೃತರಾಷ್ಟ್ರನ ಬಯಕೆಯನ್ನು ತೀರಿಸಿದ ಸಂಜಯನು ತನಗೆ ಕಂಡ ವಿರಾಡ್ರೂಪವನ್ನೂ ಕೃಷ್ಣನ ಬಾಯಿಂದ ಬಂದ ಉಪದೇಶವನ್ನೂ ನೆನೆನೆನೆದು ರೋಮಾಂಚವನ್ನು ಹೊಂದಿ ಆನಂದಿಸುತ್ತ ಕೃಷ್ಣನೂ ಅರ್ಜುನನೂ ಇರುವ ಕಡೆ ಗೆಲವಾಗುವಹಾಗೆ ತನಗೆ ತೋರುವದೆಂದು ತನ್ನ ಮನಸ್ಸಿನಲ್ಲಿ ಉಕ್ಕಿ ಬಂದ ಅಭಿಪ್ರಾಯವನ್ನು ಧೃತರಾಷ್ಟ್ರನ ಮುಂದಿಟ್ಟನು. ಇದಿಷ್ಟೂ ಗೀತೆಯಲ್ಲಿರುವ ಕಥೆ.

ಶ್ರೀ ಕೃಷ್ಣನ ಮಾತಿನಂತೆ ಅರ್ಜುನನು ಕಾದುವದಕ್ಕೆದ್ದ ಮೇಲೆ ಅವನ ತೋಳ ಬಲವು ಒಳ್ಳೆಯ ಹೆಸರುವಾಸಿಯನ್ನು ಪಡೆಯಿತು. ಆ ಯುದ್ಧದಲ್ಲಿ ಹದಿನೆಂಟು ಅಕ್ಷೋಹಿಣಿಯ ದಂಡು ಮಣ್ಣುಗೂಡಿಹೋಯಿತು ಕೌರವರು ಹೇಳುವದಕ್ಕೆ ಹೆಸರಿಲ್ಲದಂತಾದರು. ಜಯಲಕ್ಷ್ಮಿಯು ಪಾಂಡವರಿಗೆ ಮಾಲೆಯನ್ನು ಹಾಕಿದಳು. ಅವರಲ್ಲಿ ಹಿರಿಯನಾದ ಧರ್ಮರಾಯನಿಗೆ ಪಟ್ಟವಾಯಿತು. ಕಿರಿಯರೆಲ್ಲ ಅವನನ್ನು ಹಿಂಬಾಲಿಸಿಕೊಂಡಿದ್ದು ಎಲ್ಲರೂ ಕೂಡಿ ಏಕಚ್ಛತ್ರಾಧಿಪತ್ಯ ವನ್ನನುಭವಿಸುತ್ತ ದೇಶದ ಹಿತಕ್ಕಾಗಿ ದುಡಿದರು. ದೇಶದಲ್ಲೆಲ್ಲ ಸುಖಸಾಮ್ರಾಜ್ಯವು ನೆಲೆಗೊಂಡಿತು. ಈ ಕಥೆಯ ವಿವರವೆಲ್ಲ ಪ್ರಸಿದ್ಧವಾದ ಮಹಾಭಾರತವೆಂಬ ದೊಡ್ಡ ಗ್ರಂಥದಲ್ಲಿ ವಿಸ್ತಾರವಾಗಿದೆ.

ಹೊಸಕೆರೆ ಚಿದಂಬರಯ್ಯ

ಲೇಖಕರ ಪರಿಚಯ

ಹೊಸಕೆರೆ ಚಿದಂಬರಯ್ಯನವರು ತುಮಕೂರು ಜಿಲ್ಲೆಯ ಹೊಸಕೆರೆ ಗ್ರಾಮದಲ್ಲಿ ೨೮.೧೨.೧೮೭೦ರಲ್ಲಿ ಜನಿಸಿದರು. ಪ್ರಾಥಮಿಕ ಶಾಲೆಯ ಶಿಕ್ಷಕರಾಗಿ ಕಾರ್ಯ ನಿರ್ವಹಿಸಿ ನಿವೃತ್ತಿ ನಂತರ ಧಾರವಾಡದಲ್ಲಿ ಅನಿಬೆಸೆಂಟರು ಸ್ಥಾಪಿಸಿದ ದೇಶಿಯ ವಿದ್ಯಾಶಾಲೆಯಲ್ಲಿ ಆಹ್ವಾನಿತ ಅಧ್ಯಾಪಕರಾದರು. ದೇಶ ಪ್ರೇಮಿಗಳಾದ ಇವರು ಕನ್ನಡ,ಇಂಗ್ಲಿಷ್,ಮರಾಠಿ ಭಾಷೆಗಳಲ್ಲಿ ಪಾಂಡಿತ್ಯಗಳಿಸಿ ೭೦ಕ್ಕೂ ಹೆಚ್ಚಿನ ಗ್ರಂಥಗಳನ್ನು ರಚಿಸಿದರು ಸಚ್ಚಿದಾನಂದೇಂದ್ರ ಸ್ವಾಮಿಗಳ ಜತೆಯಲ್ಲಿ ಶೃಂಗೇರಿಯ ಜಗದ್ಗುರು ಶ್ರೀ ಶಿವಾಭಿನವ ನರಸಿಂಹ ಭಾರತಿ ಸ್ವಾಮಿಗಳಿಂದ ಕಾಲಟಿಯಲ್ಲಿ ಭಾಷ್ಯಶಾಂತಿ ಪಾಠಕ್ಕೆ ಅನುಗ್ರಹ ಪಡೆದರು.

ಇವರು ಕುರ್ತಕೋಟಿ ಶ್ರೀ ಮಹಾಭಾಗವತರ ಮತ್ತು ಗೋಂದಾವಲಿ ಮಹಾರಾಜರ ಸಂಪರ್ಕದಿಂದ ವೈರಾಗ್ಯ ಜೀವಿಗಳಾದರು. ೧೯-೦೪-೧೯೩೮ರಂದು ನಿಧನರಾದರು ಇವರು ರಚಿಸಿದ ಆರ್ಯಧರ್ಮ ಪ್ರದೀಪಿಕಾ ಗೀತಾರ್ಥಚಂದ್ರಿಕೆ ಕೀರ್ತನಕಂಠಾಭರಣ, ಭಗವದ್ಗೀತಾ ಸಾರವಿಚಾರ, ಮನಾಚೆಶ್ಲೋಕದ ಪಂಚದಶಿ ಅನುವಾದ, ಅನುಭವಾಮೃತ ಟೀಕೆ ಮೊದಲಾದ ಗ್ರಂಥಗಳು ಕನ್ನಡಕ್ಕೆ ಅವರಿತ್ತ ಶ್ರೇಷ್ಠ ಕೊಡುಗೆಗಳಾಗಿವೆ. ಕಾದಂಬರಿ(೬) ನಾಟಕ(೮) ನೀತಿಗ್ರಂಥ(೫) ಧಾರ್ಮಿಕಗ್ರಂಥಗಳು(೧೫) ಶಿಕ್ಷಣ ಗ್ರಂಥ(೭) ಗೀತಾ ಸಾಹಿತ್ಯ(೬) ಜೀವನ ಚರಿತ್ರೆ(೭) ಕಾವ್ಯ(೩) ಸ್ತೋತ್ರ ಸಾಹಿತ್ಯ ಮೊದಲಾದ ವಿವಿಧ ಬಗೆಯ ಕೃತಿಗಳನ್ನು ರಚಿಸಿದ್ದಾರೆ.

ಬೆಂಗಳೂರಿನಲ್ಲಿ ನೆಲೆಸಿದ್ದ ಇವರು ೧೯.೦೪.೧೯೩೮ರಲ್ಲಿ ನಿಧನರಾದರು. ಕನ್ನಡದಲ್ಲಿ ಪ್ರಸಿದ್ಧ ಗೀತಾ ಸಾಹಿತಿಗಳೂ ವಿದ್ವಾಂಸರೂ ಆದ ಇವರು ೧. ಭಗವದ್ಗೀತಾ ಸಾರವಿಚಾರ ೨. ಗೀತಾರ್ಥ ವಿವರಣೆ ೩. ಗೀತೆಯ ಕೈಗನ್ನಡಿ, ೪. ಮಕ್ಕಳ ಕೈಗೀತೆ, ೫. ಗೀತಾರ್ಥಚಂದ್ರಿಕೆ, ೬. ಗೀತೆಯ ತಿರುಳು ಗ್ರಂಥಗಳನ್ನು ರಚಿಸಿದ್ದಾರೆ.

ಶಿಕ್ಷಣ ಕ್ಷೇತ್ರಕ್ಕೆ ಸಂಬಂಧಿಸಿದಂತೆ ೧. ಗಣಿತಾಬ್ಜ ಭಾಸ್ಕರ ೨. ಚರಿತ್ರ ಚಿಂತಾಮಣಿ ೩. ಉಪಾಧ್ಯಾಯರ ಯೋಗ್ಯತೆಗಳು ೪. ಬೋಧನಾಕ್ರಮ ೫. ಮನಶ್ಶಿಕ್ಷಣ ಮುಂತಾದ ಗ್ರಂಥಗಳನ್ನು ರಚಿಸಿದ್ದಾರೆ.

ಭರತಖಂಡದ ಜೀವಜ್ಯೋತಿಗಳು ಎಂಬ ಗ್ರಂಥ ಶಿವರಾಮಕಾರಂತರ ಮೆಚ್ಚುಗೆಗೆ ಪಾತ್ರವಾಗಿತ್ತು ಆದರ್ಶ ಶಿಕ್ಷಕರೂ ದೇಶಾಭಿಮಾನಿಗಳಾದ ಇವರಿಗೆ ಕರ್ನಾಟಕ ಕವಿರತ್ನ ಎಂಬ ಬಿರುದನ್ನು ಜನತೆಕೊಟ್ಟಿತ್ತು.

ಮಕ್ಕಳ ಕೈಗೀತೆ

ಶ್ರೀ ಗುರುಭ್ಯೋನಮಃ

ಮಕ್ಕಳ ಕೈಗೀತೆ

ಅಧ್ಯಾಯ-೧

ಅರ್ಜುನನಿಗೆ ಯುದ್ಧವು ಬೇಡವೆನಿಸಿದ್ದು

ಧರ್ಮಕಾರ್ಯಗಳು ಬಹಳವಾಗಿ ನಡೆದಿದ್ದ ಕುರುಕ್ಷೇತ್ರದಲ್ಲಿ ಕೌರವರೂ ಪಾಂಡವರೂ ಕಾದಬೇಕೆಂದು ಸೇರಿದ್ದರು. ಕೌರವರ ತಂದೆಯಾದ ಧೃತರಾಷ್ಟ್ರನು ತನ್ನವರೂ ತನ್ನ ತಮ್ಮನಾದ ಪಾಂಡುವಿನ ಮಕ್ಕಳಾದ ಪಾಂಡವರೂ ಅಲ್ಲಿ ಏನು ಮಾಡಿದರೆಂದು ಸಂಜಯನನ್ನು ಕೇಳಿದನು. ಅಗ ಸಂಜಯನು ಹೇಳಿದ್ದೇನೆಂದರೆ: (೧)

ಪಾಂಡವರು ತಮ್ಮ ದಂಡನ್ನು ಬೇರೆಬೇರೆ ಆಕಾರಗಳಲ್ಲಿ ನಿಲ್ಲಿಸಿಕೊಂಡಿರುವದನ್ನು ನೋಡಿ ಕೌರವರ ಹಿರಿಯನಾದ ದುರ್ಯೋಧನನು ತನ್ನ ಗುರುಗಳಾದ ದ್ರೋಣಾಚಾರ್ಯರ ಬಳಿಗೆ ಬಂದು ಹೇಳುವದಕ್ಕೆ ಮೊದಲುಮಾಡಿದ್ದೇನೆಂದರೆ :"ಗುರುಗಳೆ, ದ್ರುಪದನ ಮಗನೂ ನಿಮ್ಮ ಶಿಷ್ಯನೂ ಬುದ್ಧಿವಂತನೂ ಆದ ಧೃಷ್ಟದ್ಯುಮ್ನನು ಪಾಂಡವರ ದೊಡ್ಡ ದಂಡನ್ನು ಬೇರೆ ಬೇರೆ ಆಕಾರದಲ್ಲಿ ನಿಲ್ಲಿಸಿರುವುದನ್ನು ನೋಡಿ, ಈ ದಂಡಿನಲ್ಲಿ ಕಾದುವದರಲ್ಲಿ ಭೀಮಾರ್ಜುನರಂತೆ ಗಟ್ಟಿಗರಾಗಿ ದೊಡ್ಡ ದೊಡ್ಡ ಬಿಲ್ಲುಗಳನ್ನು ಹಿಡಿದಿರುವ ಸಾತ್ಯಕಿ, ವಿರಾಟ, ಒಬ್ಬನೇ ಹತ್ತು ಸಹಸ್ರ ಜನರ ಮೇಲೆ ಕೈ ಮಾಡಬಲ್ಲ ದ್ರುಪದ, ಧೃಷ್ಟಕೇತು, ಚೇಕಿತಾನ, ಬಲಶಾಲಿಯಾದ ಕಾಶೀರಾಜ, ಪುರುಜಿತ್, ಕುಂತಿಭೋಜ, ಮೇಲುಗೈ ಆದ ಶೈಬ್ಯ, ಶೂರನಾದ ಯುಧಾಮನ್ಯು, ವೀರನಾದ ಉತ್ತಮೌಜ, ಸುಭದ್ರೆಯ ಮಗ ಅಭಿಮನ್ಯು, ದ್ರೌಪದಿಯ ಮಕ್ಕಳು-ಇವರೆಲ್ಲ ಒಬ್ಬೊಬ್ಬರೇ ಹತ್ತು ಸಹಸ್ರ ಜನರೊಡನೆ ಹೋರಾಡಬಲ್ಲವರು. ಒಳ್ಳೆಯ ಬ್ರಾಹ್ಮಣರಾದ ದ್ರೋಣಾಚಾರ್ಯರೆ, ನಮ್ಮ ದಂಡಿನಲ್ಲಿ ಯಾರು ಯಾರು ಹೆಚ್ಚಿನವರೆಂಬುದನ್ನು ಮನಸ್ಸಿಗೆ ತಂದುಕೊಳ್ಳಿ. ನಿಮಗೆ ನೆನಪಾಗಲೆಂದು ನಾನು ಅವರ ಹೆಸರನ್ನು

ಹೇಳುತ್ತೇನೆ. ನೀವು, ಭೀಷ್ಮ, ಕರ್ಣ, ಗೆಲುವಿನಾಳಾದ ಕೃಪ, ಅಶ್ವತ್ಥಾಮ, ವಿಕರ್ಣ, ಸೋಮದತ್ತನ ಮಗನಾದ ಭೂರಿಶ್ರವ, ಜಯದ್ರಥ. ನನಗಾಗಿ ಸಾವಿಗೆ ಸಿದ್ಧರಾಗಿರುವವರು ಇನ್ನೂ ಬಹಳ ಶೂರರಿದ್ದಾರೆ. ಇವರೆಲ್ಲ ಬೇಕುಬೇಕಾದ ಆಯುಧಗಳನ್ನು ಉಪಯೋಗಿಸಬಲ್ಲವರು ಮತ್ತು ಕಾದುವದನ್ನು ಚೆನ್ನಾಗಿ ಬಲ್ಲವರು. ಭೀಷ್ಮರು ಆಳುತ್ತಿರುವ ನಮ್ಮ ದಂಡು ಲೆಕ್ಕವಿಲ್ಲದಷ್ಟಿದೆ. ಭೀಮನು ಆಳುತ್ತಿರುವ ಈ ಪಾಂಡವರ ದಂಡು ಸಣ್ಣದು. ನೀವೆಲ್ಲರೂ ನಿಮನಿಮಗೆ ಗೊತ್ತಾದ ಕಡೆಗಳಲ್ಲಿದ್ದುಕೊಂಡು ಭೀಷ್ಮನನ್ನೇ ಕಾಪಾಡಿರಿ." (೨-೧೧)

ದುರ್ಯೋಧನನು ಹೀಗೆ ಹೇಳುವ ಹೊತ್ತಿಗೆ ಸರಿಯಾಗಿ ಕೌರವರ ಹಿರಿಯನೂ ಅಜ್ಜನೂ ಬಹು ಗಟ್ಟಿಗನೂ ಆದ ಭೀಷ್ಮನು ಅವನಿಗೆ ಹರ್ಷ ಉಂಟಾಗುವಂತೆ ಸಿಂಹದಂತೆ ಗಟ್ಟಿಯಾಗಿ ಗರ್ಜಿಸಿ ತನ್ನ ಶಂಖವನ್ನು ಊದಿದನು. ಒಡನೆ ಒಂದೇ ಸಲ ಎಲ್ಲರೂ ಶಂಖಗಳನ್ನೂ ಭೇರಿಗಳನ್ನೂ ಮೃದಂಗಗಳನ್ನೂ ನಗಾರಿಗಳನ್ನೂ ರಣಸಿಂಹಗಳನ್ನೂ ಧ್ವನಿ ಮಾಡಿದರು. ಆ ಗದ್ದಲವು ಎಲ್ಲೆಲ್ಲಿಯೂ ತುಂಬಿತು. (೧೨-೧೩)

ಆಗಲೆ ಬಿಳೀ ಕುದುರೆಗಳನ್ನು ಹೂಡಿದ್ದ ದೊಡ್ಡ ತೇರಿನ ಮೇಲೆ ಕುಳಿತಿದ್ದ ಕೃಷ್ಣನೂ ಅರ್ಜುನನೂ ಮೇಲುಗೈ ಆದ ತಮ್ಮ ಶಂಖಗಳನ್ನೂದಿದರು. ಕೃಷ್ಣನು ಪಾಂಚಜನ್ಯವನ್ನೂ ಅರ್ಜುನನು ದೇವದತ್ತವನ್ನೂ ಹಗೆಗಳನ್ನು ಗುಡಗುಟ್ಟಿಸುವ ಭೀಮನು ಪೌಂಡ್ರವೆಂಬ ದೊಡ್ಡ ಶಂಖವನ್ನೂ ಕುಂತಿಯ ಮಕ್ಕಳಲ್ಲಿ ಅರಸಾದ ಧರ್ಮರಾಯನು ಅನಂತವಿಜಯವನ್ನೂ ನಕುಲನು ಸುಘೋಷವನ್ನೂ ಸಹದೇವನು ಮಣಿಪುಷ್ಪಕವನ್ನೂ ಊದಿದರು. ದೊಡ್ಡ ಬಿಲ್ಲಾಳಾದ ಕಾಶೀರಾಜನೂ ಒಬ್ಬನೇ ಹತ್ತು ಸಹಸ್ರ ಜನರ ಮೇಲೆ ಕೈಮಾಡಬಲ್ಲ ಶಿಖಂಡಿಯೂ ಧೃಷ್ಟದ್ಯುಮ್ನನೂ ವಿರಾಟನೂ ಯಾರಿಗೂ ಸೋಲದ ಸಾತ್ಯಕಿಯೂ ದ್ರುಪದನೂ ದ್ರೌಪದಿಯ ಮಕ್ಕಳೂ ಬಲವಾದ ತೋಳುಗಳುಳ್ಳ ಅಭಿಮನ್ಯುವೂ-- ಎಲ್ಲರೂ ಬೇರೆಬೇರೆ ಶಂಖಗಳನ್ನು ಊದಿದರು. ಆ ಗದ್ದಲವು ಭೂಮಿಯಲ್ಲಿಯೂ ಆಕಾಶದಲ್ಲಿಯೂ ಗುಡುಗುಟ್ಟುತ್ತ ಪ್ರತಿಧ್ವನಿಯನ್ನು ಹಬ್ಬಿಸಿ ಕೌರವರ ಎದೆ ಬಿರಿಯುವಂತೆ ಮಾಡಿತು. (೧೪-೧೯)

ಆಮೇಲೆ ಅರ್ಜುನನು ಎದುರಿಗೆ ನಿಂತಿರುವ ಕೌರವರನ್ನು ನೋಡಿ ಹೊಡೆತಕ್ಕೆ ಮೊದಲು ಮಾಡಬೇಕಾದ ಆ ಸಮಯದಲಿ ಗಾಂಡೀವವನ್ನು

ಕೈಗೆ ತೆಗೆದುಕೊಂಡು ಕೃಷ್ಣನನ್ನು ಕುರಿತು ಈ ಮಾತನ್ನು ಹೇಳಿದನು. "ಕೃಷ್ಣ, ಕಾದುವದಕ್ಕೆ ಎದುರಿಗೆ ಯಾರು ಯಾರು ನಿಂತಿರುವರೊ ಈಗ ಹೂಡಿರುವ ಯುದ್ಧದಲ್ಲಿ ನಾನು ಯಾರೊಡನೆ ಕಾದಬೇಕೊ ಅದನ್ನೆಲ್ಲ ನೋಡುವವರೆಗೂ ನನ್ನ ತೇರನ್ನು ಎರಡು ದಂಡುಗಳ ನಡುವೆ ನಿಲ್ಲಿಸು. ಕೆಡುಕನಾದ ದುರ್ಯೋಧನನಿಗೆ ಯುದ್ಧದಲ್ಲಿ ಹಿತವನ್ನು ಮಾಡಬೇಕೆಂದು ಕಾದುವದಕ್ಕಾಗಿ ಇಲ್ಲಿಗೆ ಬಂದಿರುವ ಇವರನ್ನೆಲ್ಲ ನಾನು ನೋಡುತ್ತೇನೆ." (೨೦-೨೩)

ಹೀಗೆಂದ ಅರ್ಜುನನ ಮಾತುಗಳನ್ನು ಕೇಳಿ ಕೃಷ್ಣನು ಎರಡು ದಂಡುಗಳ ನಡುವೆ ಆ ದೊಡ್ಡ ರಥವನ್ನು ನಿಲ್ಲಿಸಿ ಇಲ್ಲಿ ನೆರೆದಿರುವ ಈ ಕೌರವರನ್ನೆಲ್ಲ ನೋಡೆಂದು ಭೀಷ್ಮನ, ದ್ರೋಣನ ಮತ್ತು ಎಲ್ಲ ಅರಸರ ಎದುರಿಗೆ ಹೇಳಿದನು. ಅರ್ಜುನನು ಅಲ್ಲಿರುವ ಎರಡು ದಂಡಿನವರನ್ನು ತಂದೆಯವರು, ಅಜ್ಜಂದಿರು, ಗುರುಗಳು, ಸೋದರಮಾವಂದಿರು, ಅಣ್ಣ ತಮ್ಮಂದಿರು, ಮಕ್ಕಳು, ಮೊಮ್ಮಕ್ಕಳು, ಗೆಳೆಯರು, ಮಾವಂದಿರು, ಉಪಕಾರಿಗಳು ಮೊದಲಾದ ವಾವೆಯವರನ್ನಾಗಿ ಕಂಡನು. ಆ ಅರ್ಜುನನು ತನ್ನ ನಂಟರೂ ಇಷ್ಟರೂ ಎದುರಿಗೆ ನಿಂತಿರುವದನ್ನು ನೋಡಿ ಹೆಚ್ಚಿನ ಕನಿಕರಕ್ಕೆ ಒಳಗಾದವನಾಗಿ ದುಃಖದಿಂದ ಹೇಳಿದ್ದೇನೆಂದರೆ. (೨೪-೨೮)

"ಕೃಷ್ಣ, ಕಾದುವದಕ್ಕೆ ನಿಂತಿರುವ ಈ ನನ್ನವರನ್ನು ನೋಡಿ ನನ್ನ ಅವಯವಗಳು ಸೊರಗುತ್ತಿವೆ; ಬಾಯಿಯೂ ಒಣಗುತ್ತಿದೆ; ನನ್ನ ಮೈಯಲ್ಲಿ ನಡುಕವೂ ಕೂದಲ ನಿಗರುವಿಕೆಯೂ ಉಂಟಾಗಿವೆ; ಗಾಂಡೀವವೆಂಬ ಬಿಲ್ಲು ಕೈಯಿಂದ ಕೆಳಕ್ಕೆ ಬೀಳುತ್ತಿದೆ; ಚರ್ಮವೂ ಕಾವೇರಿದೆ; ನಾನು ನಿಲ್ಲಲೂ ಆರೆನು ; ನನ್ನ ಮನಸ್ಸು ಗಿರಗಿರನೆ ತಿರುಗುವಹಾಗಿದೆ. ಕಾಣಬಾರದ ಅಪಶಕುನಗಳನ್ನು ಕಾಣುತ್ತಿದ್ದೇನೆ. ನನ್ನವರನ್ನು ಕೊಂದರೆ ಒಳ್ಳೆಯದಾದೀತೆಂದು ನನಗೆ ತೋರುವದಿಲ್ಲ. ನನಗೆ ಗೆಲುವೂ ಬೇಡ ; ರಾಜ್ಯವೂ ಬೇಡ; ಸುಖವೂ ಬೇಡ. ರಾಜ್ಯದಿಂದಾಗಲಿ, ಸುಖಾನುಭವದಿಂದಾಗಲಿ, ಬದುಕಿರುವದರಿಂದಾಗಲಿ-ಏನು ಪ್ರಯೋಜನ? ರಾಜ್ಯ, ಸುಖಸಾಧನೆಗಳು, ಸುಖ-ಇವನ್ನು ಯಾರಿಗಾಗಿ ನಾನು ಬಯಸುವೆನೊ ಆ ಇವರೇ ಜೀವದಾಸೆಯನ್ನೂ ಹಣಕಾಸುಗಳಾಸೆಯನ್ನೂ ಬಿಟ್ಟು ಕಾದುವದಕ್ಕೆ ನಿಂತಿದ್ದಾರೆ. ಗುರುಗಳು, ತಂದೆಯವಾವೆಯವರು, ಮಕ್ಕಳು, ಅಜ್ಜಂದಿರು, ಸೋದರಮಾವಂದಿರು, ಮಾವಂದಿರು, ಮಕ್ಕಳು, ಮೊಮ್ಮಕ್ಕಳು, ಭಾವಮೈದುನರು, ಮತ್ತು ಹೀಗೆಯೇ ಬೇರೆಬೇರೆ ವಾವೆಯವರು-ಇವರು ನನ್ನನ್ನು ಹೊಡೆದರೂ

ಮೂರು ಲೋಕವೇ ದೊರೆಯುತ್ತೆಂದರೂ ನಾನು ಇವರನ್ನು ಹೊಡೆಯಲಾರೆನು. ಇನ್ನು ಈ ನೆಲಕ್ಕಾಗಿ ಹೊಡೆದೇನೆ? ಕೌರವರನ್ನು ಕೊಂದರೆ ನಮಗೇನು ಸುಖ? ಈ ಕೇಡಿಗರನ್ನು ಕೊಲ್ಲುವದರಿಂದ ನನಗೆ ಪಾಪವೇ ಬಂದೀತು. ಆದ್ದರಿಂದ ನಾವು ನಂಟರಾದ ಕೌರವರನ್ನು ಕೊಲ್ಲಬಾರದು. ನಮ್ಮವರನ್ನು ಕೊಂದು ನಾವು ಹೇಗೆ ಸುಖಿಗಳಾದೇವು? ದುರಾಶೆಗೆ ಮನಸ್ಸು ಮಾರಿಕೊಂಡಿರುವ ಇವರು ಕುಲವನ್ನು ಹಾಳುಮಾಡಿದರೆ ಮತ್ತು ಗೆಳೆಯರಿಗೆ ಎರಡು ಬಗೆದರೆ ಪಾಪವು ಬರುತ್ತದೆಂಬುದನ್ನು ತಿಳಿಯದಿದ್ದರೂ ಕುಲವನ್ನು ಹಾಳುಮಾಡಿದರೆ ಪಾಪವೆಂದು ಮನಗಂಡ ನಮಗೆ ಈ ಪಾಪದಿಂದ ಹಿಮ್ಮೆಟ್ಟಬೇಕೆಂದೇಕೆ ತಿಳಿಯಬಾರದು? ಕುಲವನ್ನು ಹಾಳುಮಾಡಿದರೆ ಬಹು ಹಿಂದಿನಿಂದ ಬಂದಿರುವ ಕುಲಧರ್ಮಗಳೆಲ್ಲ ಹೇಳುವದಕ್ಕೆ ಹೆಸರಿಲ್ಲದಂತಾಗುತ್ತವೆ. ಹೀಗೆ ಧರ್ಮವು ಹಾಳಾದರೆ ಅಧರ್ಮವು ಬಂದು ಕುಲವನ್ನೆಲ್ಲ ತುಳಿದುಬಿಡುತ್ತದೆ. ಅಧರ್ಮಕ್ಕೆ ಸೋಲುವದರಿಂದ ಶೀಲವತಿಯರಾದ ಹೆಂಗಸರು ಕೆಡುವರು. ಹೆಂಗಸರು ಕೆಟ್ಟರೆ ಜಾತಿಯು ಬೆರಕೆಯಾಗುವದು. ಆ ಬೆರಕೆಯು ಕುಲವನ್ನು ಹಾಳುಮಾಡಿದವರಿಗೂ ಕುಲಕ್ಕೂ ಕೂಡ ನರಕಕ್ಕೇ ದಾರಿ. ಕುಲವನ್ನು ಹಾಳುಮಾಡಿದವರ ಹಿರಿಯರು ಅನ್ನವೂ ನೀರೂ ಇಲ್ಲದೆ ಕೆಳಕ್ಕೆ ಬೀಳುವರು. ಜಾತಿಯ ಬೆರಕೆಯನ್ನು ಮಾಡುವ ಕುಲನಾಶಕರ ಈ ತಪ್ಪುಗಳಿಂದ ಬಹು ಹಿಂದಿನಿಂದ ನಡೆದು ಬಂದಿರುವ ಜಾತಿ ಧರ್ಮಗಳೂ ಕುಲಧರ್ಮಗಳೂ ಇಲ್ಲದಂತಾಗುತ್ತವೆ. ಕುಲಧರ್ಮಗಳನ್ನು ಇಲ್ಲದಂತೆ ಮಾಡಿದ ಮನುಷ್ಯರು ಯಾವಾಗಲೂ ನರಕದಲ್ಲಿರಬೇಕಾಗುವದೆಂದು ನಾವು ಕೇಳಿದ್ದೇವೆ. ಅಹಾ! ರಾಜ್ಯದ ಸುಖದ ಮೇಲಿನ ಕೆಟ್ಟ ಆಸೆಯಿಂದ ನಮ್ಮವರನ್ನು ಕೊಲ್ಲುವದಕ್ಕೆ ಹೊರಟ ನಾವು ದೊಡ್ಡ ಪಾಪವನ್ನು ಮಾಡುವದಕ್ಕೆ ಹೊರಟಂತಾಗುವದು. ಬದಲು ಕೈ ಮಾಡದೆ ಮತ್ತು ಕೈಯಲ್ಲಿ ಆಯುಧವಿಲ್ಲದೆ ಇರುವ ನನ್ನನ್ನು ಕೌರವರು ಯುದ್ಧದಲ್ಲಿ ಕೊಂದರೆ ಅದು ನನಗೆ ಬಹಳ ಒಳ್ಳೆಯದೆ ಆದೀತು."

(೨೯–೪೬)

ಹೀಗೆ ಹೇಳಿ ಅರ್ಜುನನು ರಣರಂಗದಲ್ಲಿ ಬಿಲ್ಲನ್ನು ಹೂಡಿದ ಬಾಣವನ್ನು ಕೈಬಿಟ್ಟು ದುಃಖದಿಂದ ಮನಸ್ಸಿನಲ್ಲಿ ತಳಮಳಿಸುತ್ತ ತೇರಿನಮೇಲೆ ಕುಳಿತುಬಿಟ್ಟನು. (೪೭)

ಅಧ್ಯಾಯ-೨

ಆತ್ಮನ ಸ್ವರೂಪ

ಹೀಗೆ ಮೈದುಂಬಿ ಬಂದ ಕನಿಕರದಿಂದ ಕಣ್ಣುಗಳಲ್ಲಿ ನೀರು ತುಂಬಿಕೊಂಡು ದುಃಖಿಸುತ್ತಿರುವ ಅರ್ಜುನನನ್ನು ಕುರಿತು ಕೃಷ್ಣನು ಹೇಳಿದ್ದೇನೆಂದರೆ; ಅರ್ಜುನ, ನಿನಗೆ ಈ ಹೊಲಸು ಬರಬಾರದ ಕಡೆ ಏಕೆ ಬಂತು? ದೊಡ್ಡವರೆನಿಸಿಕೊಂಡವರು ಇಂಥದ್ದಕ್ಕೆ ದಾರಿಯನ್ನು ಕೊಟ್ಟಿಲ್ಲ. ಇದು ಸ್ವರ್ಗದ ದಾರಿಯನ್ನು ಬಿಡಿಸಿ ಅಡ್ಡದಾರಿಗೆಳೆಯುವದು. ಇದರಿಂದ ನಿನಗೆ ಕೆಟ್ಟ ಹೆಸರು ಬರುವದು. ಎದೆಗೇಡಿತನವನ್ನು ಹೊಂದಬೇಡ. ನಿನಗೆ ಇದು ಸರಿಯಲ್ಲ. ಹಗೆಗಳನ್ನು ಗುಡಗುಟ್ಟಿಸುವ ನೀನು ಕೀಳಾದ ಈ ಅಳುಕನ್ನು ಕೊಡವಿಕೊಂಡು ಕಾದುವವದಕ್ಕೆ ಏಳು. (೧-೩)

ಆಗ ಅರ್ಜುನನು ಹೇಳಿದ್ದು : ಕೃಷ್ಣ, ನನ್ನಿಂದ ಪೂಜೆಯನ್ನು ಹೊಂದತಕ್ಕವರಾದ ಭೀಷ್ಮರನ್ನೂ ದ್ರೋಣರನ್ನೂ ಹೇಗೆ ಹೊಡೆಯಲಿ ? ದೊಡ್ಡ ಯೋಗ್ಯತೆಯವರಾದ ಗುರುಗಳನ್ನು ಕೊಲ್ಲುವದನ್ನು ಬಿಟ್ಟು ಲೋಕದಲ್ಲಿ ತಿರಿದು ತಿನ್ನುವದಾದರೂ ಮೇಲು. ದುಡ್ಡಿನಾಸೆಯಿಂದ ಕಾದುವದಕ್ಕೆ ನಿಂತಿರುವ ಗುರುಗಳನ್ನು ಕೊಂದರೆ ಅವರ ರಕ್ತದಲ್ಲಿ ಅದ್ದಿದ ಸುಖಗಳನ್ನು ಈ ಲೋಕದಲ್ಲಿ ಮಾತ್ರ ಅನುಭವಿಸೇನು. ಯಾವದು ಮೇಲೋ ನಮಗೆ ತಿಳಿಯದು. ಇದರ ಮೇಲೆ ನಾವೇನು ಗೆಲ್ಲುವೆವೊ ಸೋಲುವೆವೊ? ಯಾರನ್ನು ಕೊಂದು ನಾವು ಬದುಕಬೇಕೆಂದಿಲ್ಲವೊ ಆ ಕೌರವರು ಎದುರಿಗೆ ನಿಂತಿದ್ದಾರೆ. ನನ್ನ ಸ್ವಭಾವವು ದೀನತೆಯಿಂದ ಕಳೆಗೆಟ್ಟಿದೆ. ನನ್ನ ಮನಸ್ಸು

ಇದೇ ಧರ್ಮವೆಂದು ಗೊತ್ತು ಮಾಡಲಾರದು. ಆದ್ದರಿಂದ ನಿನ್ನನ್ನು ಕೇಳುತ್ತೇನೆ. ನನಗೆ ಯಾವದು ಮೇಲೆಂಬುದನ್ನು ನೀನು ಗೊತ್ತು ಮಾಡಿಹೇಳು. ನಾನು ನಿನ್ನ ಶಿಷ್ಯನು. ಶರಣು ಬಂದಿರುವ ನನಗೆ ನೀನು ಬುದ್ಧಿವಾದವನ್ನು ಹೇಳು. ಲೋಕದಲ್ಲಿ ಹಗೆಗಳಿಲ್ಲದಂಥ ಮತ್ತು ಬೇಕಾದದ್ದೆಲ್ಲ ಇರುವಂಥ ರಾಜ್ಯವನ್ನು ಪಡೆದರೂ ಮತ್ತು ದೇವತೆಗಳ ಮೇಲಿನ ಅಧಿಕಾರವನ್ನು ಪಡೆದರೂ ಅದು ನನ್ನ ಇಂದ್ರಿಯಗಳನ್ನೆಲ್ಲ ಸೊರಗಿಸುತ್ತಿರುವ ಈ ದುಃಖವನ್ನು ಕಳೆದೀತೆಂದು ನನಗೆ ತೋರುವದಿಲ್ಲ. (೪-೮)

ಅರ್ಜುನನು ಕೃಷ್ಣನನ್ನು ಕುರಿತು ಹೀಗೆ ಹೇಳಿ ತಾನು ಕಾದುವದಿಲ್ಲವೆಂದು ಸುಮ್ಮನಾದನು. ಎರಡು ದಂಡುಗಳ ನಡುವೆ ವ್ಯಥೆಗೊಳ್ಳುತ್ತಿರುವ ಆ ಅರ್ಜುನನನ್ನು ಕುರಿತು ಕೃಷ್ಣನು ವಿನೋದದ ರೀತಿಯಲ್ಲಿ ತನ್ನ ಬುದ್ಧಿವಾದವನ್ನು ಮೊದಲು ಮಾಡಿದನು. (೯-೧೦)

ಶ್ರೀ ಕೃಷ್ಣನು ಹೇಳಿದ್ದು :

ಅರ್ಜುನ, ನೀನು ಯಾರಿಗಾಗಿ ಅಳಬಾರದೊ ಅವರಿಗಾಗಿ ಅಳುತ್ತಿ ಮತ್ತು ಜಾಣತನದ ಮಾತುಗಳನ್ನೂ ಆಡುತ್ತಿ. ಆತ್ಮನ ಸ್ವರೂಪವನ್ನು ತಿಳಿದವರು ಸತ್ತವರಿಗಾಗಲಿ ಸಾಯುವವರಿಗಾಗಲಿ ಅಳುವುದಿಲ್ಲ. ನಾನು ನೀನು, ಈ ಅರಸರು-ಯಾರೂ ಹಿಂದೆ ಯಾವಾಗಲೂ ಇಲ್ಲದೆ ಇರಲಿಲ್ಲ. ನಾವೆಲ್ಲರೂ ಮುಂದೆ ಇಲ್ಲದೆ ಹೋಗುವದೂ ಇಲ್ಲ. ದೇಹ ಉಳ್ಳವರಿಗೆ ಈ ದೇಹದಲ್ಲಿ ಹುಡುಗತನವೂ ಪ್ರಾಯವೂ ಮುಪ್ಪೂ ಹೇಗೋ ಹಾಗೆ. ಬೇರೆ ದೇಹವು ಬರುತ್ತದೆ. ಈ ವಿಷಯದಲ್ಲಿ ಜಾಣನು ತಪ್ಪು ತಿಳಿದುಕೊಳ್ಳಬಾರದು. ಇಂದ್ರಿಯಗಳಿಗೂ ಹೊರಗಣ ಪದಾರ್ಥಗಳಿಗೂ ಆಗುವ ಸಂಬಂಧಗಳು ಶೀತೋಷ್ಣಗಳಂತೆ ಸುಖವನ್ನೂ ದುಃಖವನ್ನೂ ಕೊಡತಕ್ಕವುಗಳು ಮತ್ತು ಬಂದು ಹೋಗತಕ್ಕವುಗಳು. ಅವು ನೆಲೆಯಾಗಿರುವದಿಲ್ಲ. ಅವುಗಳನ್ನು ತಡೆದುಕೊ. ಅವು ಯಾವನನ್ನು ವ್ಯಥೆಗೊಳಿಸುವದಿಲ್ಲವೊ ಯಾವನು ಸುಖದಲ್ಲಿಯೂ ದುಃಖದಲ್ಲಿಯೂ ಒಂದೇ ರೀತಿ ಇರುವನೋ ಅವನು ಮೋಕ್ಷಕ್ಕೆ ತಕ್ಕವನು. (೧೧-೧೫)

ಬಿಡಿಯಾಗಿ ಒಂದು ಕಡೆ ಒಂದು ಕಾಲದಲ್ಲಿ ಮಾತ್ರ ಇರುವ ವಸ್ತು ಇರುವದೆನಿಸುವದಿಲ್ಲ. ಎಲ್ಲೆಲ್ಲಿಯೂ ಯಾವಾಗಲೂ ಇರುವ ಆತ್ಮನು

ಇಲ್ಲವೆನಿಸುವದಿಲ್ಲ. ಆತ್ಮನ ಸ್ವರೂಪವನ್ನು ಕಂಡವರಿಗೆ ಇವೆರಡರ ನೆಲೆಯು ಗೊತ್ತು. ಆತ್ಮವು ಜಗತ್ತಿನ ಎಲ್ಲಾ ಪದಾರ್ಥಗಳಲ್ಲಿಯೂ ತುಂಬಿಕೊಂಡಿರುವದು. ಅದು ನಾಶವಾಗುವದಲ್ಲ. ಅದನ್ನು ಯಾರೂ ಇಲ್ಲದಂತೆ ಮಾಡಲಾರರು. ಯಾವಾಗಲೂ ಇರುವವನೂ ಶರೀರದೊಳಗೆ ಹೊಕ್ಕಿರುವವನೂ ನಾಶವಿಲ್ಲದವನೂ ಇಂದ್ರಿಯಗಳಿಗೆ ಕಾಣಬರದವನೂ ಆದ ಆತ್ಮನ ಈ ದೇಹಗಳು ಎಂದಿದ್ದರೂ ಒಂದು ದಿನ ಹೋಗತಕ್ಕವುಗಳು. ಅದ್ದರಿಂದ ಏಳು; ಯುದ್ಧ ಮಾಡು. (೧೬–೧೮)

ಅವನು ಕೊಲ್ಲುವವನೆಂದು ಯಾರು ತಿಳಿಯುತ್ತಾರೆ ಅವನು ಸತ್ತನೆಂದು ಯಾರು ತಿಳಿಯುತ್ತಾರೋ ಅವರಿಬ್ಬರೂ ತಿಳಿದವರಲ್ಲ. ಅವನು ಕೊಲ್ಲುವದೂ ಇಲ್ಲ; ಸಾಯುವದೂ ಇಲ್ಲ. ಆತ್ಮನು ಎಂದೂ ಹುಟ್ಟುವದೂ ಇಲ್ಲ; ಎಂದೂ ಸಾಯುವದೂ ಇಲ್ಲ. ಅವನು ಇದ್ದವನೆನಿಸಿಕೊಂಡು ಮತ್ತೆ ಇಲ್ಲದವನಾಗುವದೂ ಇಲ್ಲ. ಅವನಿಗೆ ಹುಟ್ಟಿಲ್ಲ, ಸಾವಿಲ್ಲ. ಅವನು ಬದಲಾವಣೆಯನ್ನು ಹೊಂದುವವನಲ್ಲ, ಅವನು ಬೆಳೆಯುವವನಲ್ಲ. ದೇಹವು ಸತ್ತರೂ ಅವನು ಸಾಯುವದಿಲ್ಲ. ಆತ್ಮನು ನಾಶವಾಗುವವನಲ್ಲವೆಂದೂ ಎಂದೆಂದಿಗೂ ಇರುವವನೆಂದೂ ಹುಟ್ಟು ಸಾವುಗಳಿಲ್ಲದವನೆಂದೂ ತಿಳಿದ ಮನುಷ್ಯನು ಯಾರನ್ನಾದರೂ ಹೇಗೆ ಹೊಡೆಸುವವನಾದಾನು ಮತ್ತು ಹೊಡೆಯುವವನಾದಾನು? ಮನುಷ್ಯನು ನಲುಗಿದ ಹಳೇ ಬಟ್ಟೆಗಳನ್ನು ತೆಗೆದೊಗೆದು ಬೇರೆ ಹೊಸವನ್ನು ಹೊದಿಯುವಂತೆ ದೇಹದಲ್ಲಿರುವ ಜೀವನು ಒಂದು ದೇಹವನ್ನು ಬಿಟ್ಟು ಇನ್ನೊಂದನ್ನು ಪಡೆಯುತ್ತಾನೆ. (೧೯–೨೨)

ಆತ್ಮನನ್ನು ಶಸ್ತ್ರಗಳು ಕತ್ತರಿಸಲಾರವು; ಬೆಂಕಿ ಸುಡಲಾರದು; ನೀರು ನೆನೆಸಲಾರದು ಮತ್ತು ಗಾಳಿ ಒಣಗಿಸಲಾರದು. ಅವನು ತುಂಡಾಗದವನು, ಸುಟ್ಟು ಹೋಗದವನು, ನೆನೆಯದವನು, ಒಣಗದವನು. ಅವನು ಎಂದೆಂದಿಗೂ ಇರುವವನು, ಎಲ್ಲೆಲ್ಲಿಯೂ ಇರುವವನು, ಒಂದೇರೀತಿಯಲ್ಲಿರುವವನು, ಅಲುಗದವನು ಮತ್ತು ಎಂದಿನಿಂದಲೂ ಹೀಗೆಯೇ ಇರುವವನು. ಅವನು ಇಂದ್ರಿಯಗಳಿಗೆ ಕಾಣಬರುವವನಲ್ಲ, ಮನಸ್ಸಿಗೆ ನಿಲುಕುವವನಲ್ಲ ಮತ್ತು ಬದಲಾವಣೆಯನ್ನು ಹೊಂದುವವನಲ್ಲ. ಆದ್ದರಿಂದ ಆತ್ಮನು ಇಂಥವನೆಂದು ತಿಳಿದು ದುಃಖವನ್ನು ಬಿಡು. (೨೩–೨೫)

ಇನ್ನು ನೀನು ಆತ್ಮನನ್ನು ಯಾವಾಗಲೂ ಹುಟ್ಟುತ್ತಲೂ ಸಾಯುತ್ತಲೂ ಇರುವವನೆಂದು ತಿಳಿಯುವದಾದರೂ ಹೀಗೆ ದುಃಖಿಸಬಾರದು. ಏಕೆಂದರೆ : ಹುಟ್ಟಿದವರಿಗೆ ಸಾವು ತಪ್ಪಿದ್ದಲ್ಲ; ಸತ್ತವರಿಗೆ ಹುಟ್ಟು ತಪ್ಪಿದ್ದಲ್ಲ. ಆದ್ದರಿಂದ ತಪ್ಪಿಸುವದಕ್ಕಾಗದ ವಿಷಯದಲ್ಲಿ ನೀನು ವ್ಯಥೆಪಡಬಾರದು. ಪ್ರಾಣಿಗಳೆಲ್ಲ ಹುಟ್ಟುವದಕ್ಕೆ ಮುಂಚೆ ಕಾಣಬರುತ್ತಿರಲಿಲ್ಲ; ಈಗ ಕಾಣಬರುತ್ತವೆ. ಸತ್ತ ಮೇಲೆ ಕಾಣಬರುವದಿಲ್ಲ. ಇದಕ್ಕೇಕೆ ದುಃಖ? (೨೬-೨೮)

ಆತ್ಮನನ್ನು ಕಾಣುವ ಯಾವನೋ ಒಬ್ಬನು ಆಶ್ಚರ್ಯವನ್ನು ಕಂಡಂತೆ ಕಾಣುತ್ತಾನೆ. ಅವನ ವಿಷಯವನ್ನು ಹೇಳುವ ಇನ್ನೊಬ್ಬನು ಆಶ್ಚರ್ಯವನ್ನು ಹೇಳುವಂತೆ ಹೇಳುತ್ತಾನೆ. ಆಶ್ಚರ್ಯವಾದದ್ದನ್ನು ಕೇಳುವಂತೆ ಕೇಳುತ್ತಾನೆ. ಕೇಳಿದರೂ ಯಾವನೂ ಅವನನ್ನರಿಯುವದಿಲ್ಲ. ಎಲ್ಲರ ದೇಹದಲ್ಲಿರುವ ಆತ್ಮನು ಎಂದಿಗೂ ಸಾಯಿಸಿಕೊಳ್ಳತಕ್ಕವನಲ್ಲ. ಆದ್ದರಿಂದ ನೀನು ಯಾವ ಪ್ರಾಣಿಗಳ ವಿಷಯಕ್ಕೂ ದುಃಖಿಸಬಾರದು. (೨೯-೩೦)

ಕಾದುವದು ನಿನ್ನ ಧರ್ಮವೆಂಬುದನ್ನು ನೀನು ಮನಸ್ಸಿಗೆ ತಂದುಕೊಂಡಾದರೂ ಹೀಗೆ ನಡುಗಬಾರದು. ಕ್ಷತ್ರಿಯನಿಗೆ ಧರ್ಮವಾದ ಯುದ್ಧಕ್ಕಿಂತ ಬೇರೆ ಮೇಲಾದುದಿಲ್ಲ. ತಾನಾಗಿ ಬಂದು ಗಂಟುಬಿದ್ದದ್ದಾಗಿಯೂ ಸ್ವರ್ಗದ ಬಾಗಿಲನ್ನು ಹಾರಹೊಡೆಯುವದಾಗಿಯೂ ಇರುವ ಇಂಥ ಯುದ್ಧವು ಪುಣ್ಯಶಾಲಿಗಳಾದ ಕ್ಷತ್ರಿಯರಿಗೆ ದೊರೆಯುತ್ತದೆ. ಇನ್ನು ನೀನು ಈ ಧರ್ಮವಾದ. ಯುದ್ಧವನ್ನು ಮಾಡದೆ ಹೋದರೆ ಅದರಿಂದ ಧರ್ಮವನ್ನೂ ಕೀರ್ತಿಯನ್ನೂ ಕಳೆದುಕೊಂಡು ಪಾಪವನ್ನು ಗಂಟು ಹಾಕಿಕೊಳ್ಳುತ್ತಿ. ಎಲ್ಲರ ಬಾಯಿಂದಲೂ ನಿನಗೆ ಎಂದಿಗೂ ಹೋಗದಂಥ ಕೆಟ್ಟ ಹೆಸರು ಬರುವದು. ಒಳ್ಳೆಯ ಹೆಸರನ್ನು ಹೊಂದಿದ್ದವನಿಗೆ ಕೆಟ್ಟ ಹೆಸರು ಸಾವಿಗಿಂತ ಹೆಚ್ಚು. ನೀನು ಯುದ್ಧಕ್ಕೆ ಹೆದರಿ ಹಿಮ್ಮೆಟ್ಟಿದನೆಂದು ದೊಡ್ಡ ದೊಡ್ಡ ಕಾದಾಳುಗಳೆಲ್ಲ ತಿಳಿಯುವರು. ಅವರಿಗೆಲ್ಲ ದೊಡ್ಡವನೆನಿಸಿಕೊಂಡಿದ್ದ ನೀನು ಈಗ ಹಗುರವಾದವನಾಗುತ್ತಿ. ನಿನ್ನ ಹಗೆಗಳು ನಿನ್ನ ತೋಳ ಬಲವನ್ನು ಹೀಯಾಳಿಸಿ ಲೆಕ್ಕವಿಲ್ಲದಷ್ಟು ಆಡಬಾರದ ಮಾತುಗಳನ್ನಾಡುವರು. ಅದಕ್ಕಿಂತ ಹೆಚ್ಚಿನ ದುಃಖವು ಯಾವದು? ಅರ್ಜುನ, ಸತ್ತರೆ ಸ್ವರ್ಗವನ್ನು ಪಡೆಯುತ್ತಿ; ಗೆದ್ದರೆ ಭೂಮಿಯನ್ನಾಳುತ್ತಿ, ಆದ್ದರಿಂದ ಕಾದುವದಕ್ಕೆ ಮನಸ್ಸನ್ನು ಗಟ್ಟಿಮಾಡಿಕೊಂಡು ಏಳು. ಸುಖ ದುಃಖ ಲಾಭ ನಷ್ಟ

ಗೆಲುವು ಸೋಲು–ಈ ಜೋಡಿಗಳನ್ನು ಒಂದೇ ರೀತಿಯಲ್ಲಿ ಕಾಣುತ್ತ ಆ ಮೇಲೆ ಯುದ್ಧಕ್ಕೆ ಕೈ ಹಾಕು. ಹೀಗಾದರೆ ನಿನಗೆ ಪಾಪವು ಅಂಟುವುದಿಲ್ಲ. (೩೧–೩೮)

ಅರ್ಜುನ, ಆತ್ಮನ ವಿಚಾರವಾದ ಈ ತಿಳಿವಳಿಕೆಯನ್ನು ನಿನಗೆ ಹೇಳಿದ್ದಾಯಿತು. ಇನ್ನು ಇದರ ಸಾಧನವನ್ನು ಕೇಳು. ನೀನು ಈ ತಿಳಿವಳಿಕೆಯನ್ನು ಹೊಂದಿದರೆ ಕರ್ಮದ ಕಟ್ಟನ್ನು ಕಳಚಿಕೊಳ್ಳುತ್ತಿ. ಈ ಸಾಧನವನ್ನು ಮೊದಲು ಮಾಡಿದ್ದು ವ್ಯರ್ಥವಾಗುವದಿಲ್ಲ. ಇದರಲ್ಲಿ ದೋಷ ಉಂಟಾಗುವದಿಲ್ಲ. ಇದನ್ನು ಸ್ವಲ್ಪ ನಡೆಸಿದರೂ ಇದು ದೊಡ್ಡ ಹೆದರಿಕೆಯನ್ನು ತಪ್ಪಿಸುತ್ತದೆ. ಇದನ್ನು ಗೊತ್ತು ಮಾಡಿಕೊಂಡವರ ಬುದ್ಧಿಯು ಒಂದೇ ಮುಖವಾಗಿರುವದು. ಇದರ ನೆಲೆಯನ್ನರಿಯದವರ ಬುದ್ಧಿಯು ಬಹು ಕೊಂಬೆಗಳುಳ್ಳದ್ದಾಗಿ ಬಹು ಕಡೆಗೆ ಹರಿಯುವುದು. (೩೯–೪೧)

ಹೂವು ಆ ಕಾಲದಲ್ಲಿ ಮಾತ್ರ ಕಣ್ಣಿಗೆ ಚೆನ್ನಾಗಿ ಕಾಣುವಂತೆ ಕೇಳುವ ಕಾಲದಲ್ಲಿ ಮಾತ್ರ ಕಿವಿಗೆ ಇಂಪಾಗಿರುವ ಮಾತನ್ನು ಹೇಳುವವರು ದಡ್ಡರು. ಮಾಡಿದ್ದಕ್ಕೆ ಬದಲು ದೊರೆಯುವ ಫಲವನ್ನು ಅಟ್ಟಕ್ಕೇರಿಸಿ ಆಡುವ ನುಡಿಗಳನ್ನು ಅವರು ನುಡಿಯುವರು. ಅದರ ಹೊರತು ಎರಡನೇ ಮಾತೇ ಇಲ್ಲವೆಂದು ಅವರ ಅಭಿಪ್ರಾಯ. ಅವರು ಬಯಕೆಗಳಲ್ಲಿಯೇ ಮುಳುಗಿದವರು. ಅವರಿಗೆ ಸ್ವರ್ಗವೇ ಹೆಚ್ಚಿನದು. ಅವರು ಇಂದ್ರಿಯಗಳ ಸುಖವನ್ನೂ, ಭಾಗ್ಯವನ್ನೂ ಪಡೆಯುವದಕ್ಕಾಗಿ ಹುಟ್ಟಿ ಸಾಯುತ್ತಿರುವಂತೆ ಮಾಡುವ ಬಗೆಬಗೆಯ ಅನೇಕ ಕರ್ಮಗಳನ್ನು ಹೇಳುವರು. ಬದಲು ದೊರೆಯುವ ಫಲವನ್ನು ಬಯಸದೆ ಕರ್ಮವನ್ನು ಮಾಡುವದರಿಂದ ಆತ್ಮನನ್ನು ಅರಿಯುವದಕ್ಕೆ ದಾರಿಯಾಗುವದು. ಇಂದ್ರಿಯಗಳ ಸುಖದಲ್ಲಿಯೂ ಭಾಗ್ಯದಲ್ಲಿಯೂ ಆಸಕ್ತಿಯುಳ್ಳವರಾಗಿ ಅದಕ್ಕೆ ಮನಸ್ಸು ಸೋತವರಿಗೆ ಆ ನೆಲೆಗೆ ನಿಂತ ತಿಳಿವಳಿಕೆಯುಂಟಾಗುವದಿಲ್ಲ. (೪೨–೪೪)

ಅರ್ಜುನ; ಕರ್ಮದ ವಿಷಯವಾದ ಮಾತುಗಳೆಲ್ಲ ಸತ್ತ್ವ,ರಜ, ತಮ–ಎಂಬ ಗುಣಗಳ ಸಂಬಂಧವಾದವು. ನೀನು ಆ ಗುಣಗಳನ್ನು ದಾಟು; ಸುಖ ದುಃಖ–ಮೊದಲಾದ ಜೋಡಿಗಳನ್ನು ಗೆಲ್ಲು; ಯಾವಾಗಲೂ ಸತ್ತ್ವಗುಣದಲ್ಲಿಯೇ ಇರು; ಇಲ್ಲದ್ದನ್ನು ಪಡೆಯುವ ಮತ್ತು ಇದ್ದದ್ದನ್ನು ಕಾಪಾಡಿಕೊಳ್ಳುವ ಯೋಚನೆಯನ್ನು ಹಚ್ಚಿಕೊಳ್ಳಬೇಡ; ಆತ್ಮನನ್ನು ಅರಿಯುವವನಾಗು. ಸ್ವಲ್ಪ

ನೀರಿರುವ ಬಾವಿಯಿಂದಾಗುವ ಪ್ರಯೋಜನಗಳೆಲ್ಲ ಬಹಳ ನೀರಿರುವ ಕೆರೆಯಿಂದ ಆಗಿಯೇ ಆಗುವಹಾಗೆ ಕರ್ಮದಿಂದಾಗುವ ಫಲಗಳೆಲ್ಲ ಆತ್ಮನನ್ನರಿಯುವದರಿಂದ ಆಗಿಯೇ ಆಗುವವು.ನೀನು ಕರ್ಮವನ್ನು ಮಾಡುವವನು ಮಾತ್ರ ಆಗಬೇಕು; ಎಂದಿಗೂ ಫಲವನ್ನು ಬಯಸುವವನಾಗಬಾರದು; ಕರ್ಮದ ಫಲವಾದ ಹುಟ್ಟು ಸಾವುಗಳನ್ನುಂಟುಮಾಡಿಕೊಳ್ಳಬೇಡ; ಕರ್ಮವನ್ನು ಮಾಡದೆ ಇರಲೂ ಬೇಡ. (೪೫-೪೭)

ಅರ್ಜುನ, ಮಾಡಿದ ಕೆಲಸವು ಫಲವನ್ನು ಕೊಟ್ಟರೂ ಬಿಟ್ಟರೂ ಒಂದೇ ಸಮನಾಗಿದ್ದು ಫಲದ ಕಡೆ ಕಣ್ಣಿಡದೆ ಕೆಲಸಗಳನ್ನು ಮಾಡು. ಒಂದೇಸಮನಾಗಿರುವದೇ ಯೋಗ. ಒಂದೇ ರೀತಿಯಲ್ಲಿರುವ ತಿಳಿವನ್ನು ಆಶ್ರಯಿಸು, ಫಲವನ್ನು ಬಯಸುವವರು ದೀನರು. ಒಂದೇ ರೀತಿಯಲ್ಲಿರುವ ತಿಳಿವನ್ನುಳ್ಳವನು ಬದುಕಿರುವಾಗಲೆ ಪುಣ್ಯಪಾಪಗಳನ್ನು ದೂರಮಾಡಿಕೊಳ್ಳುತ್ತಾನೆ. ಆದ್ದರಿಂದ ಒಂದೇ ರೀತಿಯಲ್ಲಿರುವ ತಿಳಿವಿಗೆ ಯತ್ನವನ್ನು ಮಾಡು. ಒಂದೇ ರೀತಿಯಲ್ಲಿರುವದೇ ಕೆಲಸಗಾರನ ಜಾಣತನ. ಒಂದೇ ರೀತಿಯಲ್ಲಿರುವ ತಿಳಿವನ್ನುಳ್ಳ ಪಂಡಿತರು ಕರ್ಮದಿಂದಾಗಬೇಕಾದ ಫಲವನ್ನು ಬಯಸದೆ ಹುಟ್ಟುವಿಕೆಯ ಕಟ್ಟನ್ನು ಕಳಚಿಕೊಂಡ ಯಾವ ತೊಡಕೂ ಇಲ್ಲದ ಪದವಿಯನ್ನು ಪಡೆಯುತ್ತಾರೆ. (೪೮-೫೧)

ನಿನ್ನ ಮನಸ್ಸು ಯಾವಾಗ ತಪ್ಪು ತಿಳಿವೆಂಬ ಹೊಲಸನ್ನು ಕಳೆದುಕೊಳ್ಳುವದೊ ಆಗ ನೀನು ನಿನ್ನ ಕಿವಿಗೆ ಬೀಳುವ ಮತ್ತು ಬಿದ್ದಿರುವ ಫಲದಾಸೆಯ ಮಾತುಗಳಲ್ಲಿ ಹುರುಳಿಲ್ಲವೆಂದು ತಿಳಿಯುತ್ತಿ. ಬೇರೆಬೇರೆ ಫಲಗಳನ್ನು ಹೇಳುವ ಮಾತನ್ನು ಕೇಳಿ ಹೊಯ್ದಾಡುತ್ತಿರುವ ನಿನ್ನ ಬುದ್ಧಿಯು ಯಾವಾಗ ವಿಷಯಗಳ ಕಡೆಗೆ ಹೋಗದೆ ಆತ್ಮನ ಕಡೆಗೆ ಬಂದು ಅಲುಗಾಡದೆ ನೆಲೆಯಾಗಿ ನಿಲ್ಲುವದೊ ಆಗ ಒಂದೇ ರೀತಿಯಾಗಿರುವ ತಿಳಿವನ್ನು ಹೊಂದುತ್ತಿ. (೫೨-೫೩)

ಈ ಉಪದೇಶವನ್ನು ಕೇಳಿದ ಅರ್ಜುನನು "ಆ ನೆಲೆಗೆ ನಿಂತ ಬುದ್ದಿಯುಳ್ಳವನಾಗಿ ಆತ್ಮನಲ್ಲಿಯೇ ನಿಂತವನ ನಡೆ, ನುಡಿ-ಮೊದಲಾದವುಗಳು ಹೇಗಿರುವುವು? ಎಂದು ಕೃಷ್ಣನನ್ನು ಕೇಳಿದನು. (೫೪)

ಆಗ ಕೃಷ್ಣನು ಹೇಳಿದ್ದು –

ಅರ್ಜುನ ಮನಸ್ಸಿನಲ್ಲಿರುವ ಬಯಕೆಗಳನೆಲ್ಲ ಬಿಟ್ಟು ತನ್ನಲ್ಲಿ ತಾನು ತೃಪ್ತನಾಗಿರುವುದೇ ನೆಲೆಗೆ ನಿಂತ ಬುದ್ಧಿಯವನ ಲಕ್ಷಣ. ನೆಲೆಗೆ ನಿಂತ ಬುದ್ಧಿಯವನು ದುಃಖ ಬಂದಾಗ ತಳಮಳಗೊಳ್ಳದೆ ಸುಖ ಬಂದಾಗ ಬಾಯಿ ನೀರುಸುರಿಸದೆ ಪ್ರೀತಿಯೂ ಹೆದರಿಕೆಯೂ ಸಿಟ್ಟೂ ಇಲ್ಲದವನಾಗಿ ಆತ್ಮನನ್ನು ಚಿಂತಿಸುವವನಾಗುತ್ತಾನೆ. ಯಾವನಿಗೆ ಯಾವುದರಲ್ಲಿಯೂ ಅತಿಮಮತೆ ಇಲ್ಲವೊ ಯಾವನು ಒಳ್ಳೆಯದಾಯಿತೆಂದು ಹಿಗ್ಗದೆ ಕೆಟ್ಟದಾಯಿತೆಂದು ತಗ್ಗದೆ ಇರುವನೋ ಅವನ ಬುದ್ಧಿಯು ಆತ್ಮನಲ್ಲಿ ನೆಲೆಯಾಗಿರುವುದು. ಆಮೆಯು ತನ್ನ ಅವಯವಗಳನ್ನು ಎಲ್ಲ ಕಡೆಯಿಂದಲೂ ಒಳಸೆಳೆದುಕೊಳ್ಳುವಂತೆ ಮನುಷ್ಯನು ಹೊರಗಣ ವಿಷಯಗಳಿಂದ ಇಂದ್ರಿಯಗಳನ್ನು ಹಿಮ್ಮೆಟ್ಟಿಸಿಕೊಂಡಾಗ ಅವನ ಬುದ್ಧಿಯು ಆತ್ಮನಲ್ಲಿ ನೆಲೆಯಾಗಿರುವುದು. (೫೫–೫೮)

ಸುಖಕ್ಕಾಗಿ ವಿಷಯಗಳನ್ನು ಬಳಸದಿದ್ದರೆ ಅವು ತಮ್ಮ ಮೇಲಿನ ಪ್ರೀತಿಯನ್ನು ಅವನಲ್ಲಿಯೇ ಉಳಿಸಿ ತಾವು ಹಿಂದುಳಿಯುವುವು. ಆ ಪ್ರೀತಿಯಾದರೋ ಆತ್ಮನ ಸ್ವರೂಪವನ್ನು ಕಂಡಮೇಲೆ ಇಂಗುವದು. ಹತ್ತು ಕಡೆಗೂ ಎಳೆಯುವ ಇಂದ್ರಿಯಗಳು ಎಷ್ಟೋ ಹೆಣಗುವ ಜ್ಞಾನನಾದವನ ಮನಸ್ಸನ್ನು ಕಣ್ಣೆದುರಿಗೇ ಹಾರಿಸಿಕೊಂಡು ಹೋಗುವುವು. ಅವುಗಳನ್ನೆಲ್ಲ ಕೈ ಬಿಟ್ಟು ನನ್ನನ್ನೇ ಗತಿಯೆಂದು ನನ್ನಲ್ಲಿ ಮನಸ್ಸನ್ನಿಡಬೇಕು. ಯಾರ ಇಂದ್ರಿಯಗಳು ಹಿಡಿತದಲ್ಲಿರುವವೊ ಅವನ ಬುದ್ಧಿಯು ಆತ್ಮನಲ್ಲಿ ನೆಲೆಯಾಗಿರುವದು. (೫೯–೬೧)

ವಿಷಯಗಳನ್ನೇ ಹಂಬಲಿಸುವವನಿಗೆ ಅದರ ಮೇಲೆಯೆ ಪ್ರೀತಿ ಹರಿಯುತ್ತ ಇದೆ. ಪ್ರೀತಿಯಿಂದ ಬಯಕೆ ಹುಟ್ಟುತ್ತದೆ. ಬಯಕೆಯು ಸಿಟ್ಟಿಗೆ ದಾರಿಯಾಗುತ್ತದೆ. ಸಿಟ್ಟಿನಿಂದ ತಪ್ಪಾದ ತಿಳಿವು ಉಂಟಾಗುತ್ತದೆ. ತಪ್ಪಾದ ತಿಳಿವಿನಿಂದ ನೆನಪು ಹಾರುತ್ತದೆ. ನೆನಪು ಹಾರುವದರಿಂದ ಬುದ್ಧಿ ಹಾಳಾಗುತ್ತ ಇದೆ. ಬುದ್ಧಿ ಹಾಳಾಗುವದರಿಂದ ಅವನು ಕೆಟ್ಟು ಹೋಗುತ್ತಾನೆ. (೬೨–೬೩)

ಮನಸ್ಸನ್ನು ಹಿಡಿತದಲ್ಲಿಟ್ಟುಕೊಂಡು ಪ್ರೀತಿಯೂ ಹಗೆತನವೂ ಇಲ್ಲದೆ ಹೇಳಿದ ಹಾಗೆ ಕೇಳುವ ಇಂದ್ರಿಯಗಳಿಂದ ವಿಷಯಗಳನ್ನು ಬಳಸುವವರ ಮನಸ್ಸು ತಿಳಿಯಾಗಿರುವದು. ಆ ತಿಳಿವಿನಿಂದ ಅವನ ದುಃಖಗಳೆಲ್ಲ ಕಳೆದು

ಹೋಗುವವು. ತಿಳಿಯಾದ ಮನಸ್ಸಿನವರ ಬುದ್ಧಿಯು ಬೇಗ ಆತ್ಮನಲ್ಲಿ ನಿಲ್ಲುತ್ತದೆ. ಮನಸ್ಸು ಒಮ್ಮುಖವಾಗದವರಿಗೆ ಆತ್ಮನನ್ನು ಹಿಡಿಯುವ ಬುದ್ಧಿ ಇಲ್ಲ. ಅಂಥವರಿಗೆ ಆತ್ಮನ ಮೇಲಿನ ಹೆಚ್ಚು ಪ್ರೀತಿಯೂ ಇಲ್ಲ. ಹೆಚ್ಚು ಪ್ರೀತಿ ಇಲ್ಲದವರಿಗೆ ಶಾಂತಿ ಇಲ್ಲ. ಶಾಂತಿ ಇಲ್ಲದವರಿಗೆ ಸುಖವೆಲ್ಲಿಯದು? (೬೪-೬೬)

ಹೊರಬೀಳುವ ಇಂದ್ರಿಯಗಳನ್ನು ಮನಸ್ಸು ಹಿಂಬಾಲಿಸಿದರೆ ಅವು, ಗಾಳಿಯು ನೀರಿನಲ್ಲಿ ಹಡಗನ್ನು ಹೇಗೋ ಹಾಗೆ, ಅವನ ಬುದ್ಧಿಯನ್ನು ಹಾರಿಸಿಕೊಂಡು ಹೋಗುತ್ತವೆ. ಅದ್ದರಿಂದ ಅರ್ಜುನ, ಯಾರ ಇಂದ್ರಿಯಗಳು ವಿಷಯಗಳನ್ನು ಬಿಟ್ಟು ಎಲ್ಲ ಕಡೆಯಿಂದಲೂ ಹಿಂದಿರುಗಿ ನಿಂತವುಗಳಾಗುತ್ತವೊ ಅವನ ಬುದ್ಧಿಯು ಆತ್ಮನಲ್ಲಿ ನೆಲೆಯಾಗುವದು. ಎಲ್ಲರಿಗೂ ಆತ್ಮನ ಸ್ವರೂಪವು ರಾತ್ರಿಯಂತೆ ಕಾಣದೆ ಇರುವುದಷ್ಟೆ. ಅದರಲ್ಲಿ ಯೋಗಿಯು ಎಚ್ಚರವಾಗಿರುವನು. ಪ್ರಪಂಚದ ವ್ಯವಹಾರದಲ್ಲಿ ಎಲ್ಲರೂ ಎಚ್ಚತ್ತಿರುವರಷ್ಟೆ. ಅದು ಆತ್ಮನ ಸ್ವರೂಪವನ್ನು ಕಾಣುತ್ತಿರುವವನಿಗೆ ರಾತ್ರಿ. (೬೭-೬೯)

ಎಲ್ಲಕಡೆಯಿಂದಲೂ ನೀರು ಬರುತ್ತಿದ್ದರೂ ಅಲ್ಲಾಡದೆ ನೆಲೆಯಾಗಿರುವ ಸಮುದ್ರದಲ್ಲಿ ಹೊರಗಣ ನೀರುಗಳು ಹೇಗೆ ಸೇರಿಹೋಗುವವೋ ಹಾಗೆ ಬಯಕೆಗಳೆಲ್ಲ ಅಡಗಿದವನು ಶಾಂತಿಯನ್ನು ಪಡೆಯುತ್ತಾನೆ. ಬಯಕೆಗಳೇಳುತ್ತಿರುವವನಿಗೆ ಶಾಂತಿ ಇಲ್ಲ. ಬಯಕೆಗಳನ್ನೆಲ್ಲ ಬಿಟ್ಟು ಯಾವುದನ್ನೂ ಮನಸ್ಸಿಗೆ ಎಳ್ಳಷ್ಟೂ ಹಚ್ಚಿಕೊಳ್ಳದೆ ನಾನು ನನ್ನದೆಂಬುದನ್ನು ತೊರೆದವನು ಶಾಂತಿಯನ್ನು ಪಡೆಯುತ್ತಾನೆ. ಅರ್ಜುನ, ಇದು ಆತ್ಮನಲ್ಲಿ ನೆಲೆಗೊಂಡ ಸ್ಥಿತಿ. ಇದನ್ನು ಪಡೆದ ಮೇಲೆ ತಪ್ಪು ತಿಳಿವಳಿಕೆಯುಂಟಾಗುವುದಿಲ್ಲ. ಸಾಯುವಾಗ ಈ ಸ್ಥಿತಿ ಉಂಟಾದರೂ ಅವನು ಬ್ರಹ್ಮರೂಪವಾದ ಮೋಕ್ಷವನ್ನು ಪಡೆಯುತ್ತಾನೆ. (೭೦-೭೨)

ಅಧ್ಯಾಯ-೩

ಕರ್ಮವು ಜ್ಞಾನಕ್ಕೆ ಸಾಧನ

ಅರ್ಜುನನಿಗೆ ಆಗ ಒಂದು ಸಂಶಯವು ಬಂತು. ಅದನ್ನು ಕಳೆದುಕೊಳ್ಳುವದಕ್ಕಾಗಿ ಅವನು ಕೃಷ್ಣನನ್ನು ಕುರಿತು "ಕೃಷ್ಣ, ಜ್ಞಾನವನ್ನು ಆತ್ಮನಲ್ಲಿ ನೆಲೆಗೊಳಿಸಿಕೊಂಡಿರುವದು ಕರ್ಮಕ್ಕಿಂತ ಹೆಚ್ಚಿನದಾದರೆ ಭಯಂಕರವಾದ ಕರ್ಮವನ್ನು ಮಾಡೆಂದೇಕೆ ಹೇಳುತ್ತಿ? ನಿನ್ನ ಮಾತಿನಲ್ಲಿ ಬೆರಕೆಯೇ ಕಾಣುತ್ತದೆ. ನೀನು ನನ್ನ ಅಂತಃಕರಣವನ್ನು ಮೋಹಗೊಳಿಸುವವನಂತೆ ಕಾಣುತ್ತಿ. ನನಗೆ ಯಾವದು ಒಳ್ಳೆಯದೋ ಆ ಒಂದನ್ನು ಗೊತ್ತು ಮಾಡಿ ಹೇಳು". (೧-೨)

ಆಗ ಕೃಷ್ಣನು ಹೇಳುತ್ತಾನೆ :-

ಅರ್ಜುನ, ಈ ಲೋಕದಲ್ಲಿ ನಾನು ಹಿಂದೆ ಎರಡು ಸ್ಥಿತಿಗಳನ್ನು ಹೇಳಿದೆನು. ಒಂದು ಜ್ಞಾನಿಗಳಿಗೆ ಜ್ಞಾನಯೋಗ; ಇನ್ನೊಂದು ಸಾಧಕರಿಗೆ ಕರ್ಮಯೋಗ, ಕರ್ಮಗಳನ್ನು ಮಾಡದೆ ಇದ್ದುಕೊಂಡು ಆತ್ಮನಿಗೆ ಕರ್ಮದ ಸಂಬಂಧವಿಲ್ಲದಿರುವಿಕೆಯನ್ನು ಅರಿಯಲಾಗುವದಿಲ್ಲ. ಕರ್ಮಗಳನ್ನು ಬಿಟ್ಟಮಾತ್ರದಿಂದಲೆ ಜ್ಞಾನಯೋಗದ ಸ್ಥಿತಿಯನ್ನು ಪಡೆಯಲಾಗುವದೂ ಇಲ್ಲ. ಕೆಲಸವನ್ನೇನೂ ಮಾಡದೆ ಯಾರೂ ಒಂದು ಗಳಿಗೆಯೂ ಇರುವದಿಲ್ಲ. ಎಲ್ಲರೂ ತಮ್ಮ ಹುಟ್ಟುಗುಣದಂತೆ ತಮಗರಿವಿಲ್ಲದೆ ಕೆಲಸಗಳನ್ನು ಮಾಡುವರು. ಯಾವನು ಕೈ, ಕಾಲು- ಮೊದಲಾದ ಇಂದ್ರಿಯಗಳನ್ನು ಬಿಗಿಹಿಡಿದುಕೊಂಡು ಮನಸ್ಸಿನಲ್ಲಿ ವಿಷಯಗಳನ್ನು ಹಂಬಲಿಸುತ್ತಿರುವನೋ ಅವನು ಬರೀ ನಟನೆಯವನು.

ಯಾವನು ಕಣ್ಣು ಮೊದಲಾದ ಜ್ಞಾನೇಂದ್ರಿಯಗಳನ್ನು ಮನಸ್ಸಿನಿಂದ ಬಿಗಿಹಿಡಿದು ಫಲದ ಬಯಕೆ ಇಲ್ಲದೆ ಕರ್ಮೇಂದ್ರಿಯಗಳಿಂದ ಕೆಲಸವನ್ನು ಮಾಡುವನೊ ಅವನು ಹೆಚ್ಚಿನವನು. (೩-೭)

ಅರ್ಜುನ, ನೀನು ಮಾಡತಕ್ಕದ್ದೆಂದು ಶಾಸ್ತ್ರದಲ್ಲಿ ಗೊತ್ತಾಗಿರುವ ಕರ್ಮವನ್ನು ಮಾಡು. ಕರ್ಮವನ್ನು ಬಿಡುವದಕ್ಕಿಂತ ಮಾಡುವದೊಳ್ಳೆಯದು. ನೀನು ಏನನ್ನೂ ಮಾಡದೆ ಹೋದರೆ ಬದುಕಿರುವುದೇ ಆಗಲಾರದು. ಈಶ್ವರನಿಗೆ ಪ್ರೀತಿಯಾಗಲೆಂದಲ್ಲದೆ ಕರ್ಮಗಳನ್ನು ಮಾಡಿದರೆ ಅದು ಅವನನ್ನು ಹುಟ್ಟು ಸಾವುಗಳ ಕಟ್ಟಿಗೊಳಪಡಿಸುವದು. ಆದ್ದರಿಂದ ನೀನು ಫಲವನ್ನು ಬಯಸದೆ ಈಶ್ವರನಿಗೆ ಪ್ರೀತಿಯಾಗಲೆಂದು ಮಾಡು. (೮-೯)

ಬ್ರಹ್ಮನು ಹಿಂದೆ ಜನರನ್ನು ಹುಟ್ಟಿಸಿದಾಗ ಈಶ್ವರನ ಆರಾಧನೆಯ ರೂಪವಾದ ಯಜ್ಞಗಳನ್ನೂ ಹುಟ್ಟಿಸಿ ಹೇಳಿರುವದೇನೆಂದರೆ :- ಮಕ್ಕಳಿರಾ, ಯಜ್ಞದಿಂದ ನೀವು ಏಳಿಗೆಯನ್ನು ಹೊಂದಿರಿ. ಯಜ್ಞವು ನಿಮಗೆ ಬಯಸಿದ್ದನೆಲ್ಲ ಕೊಡುವಂಥದ್ದಾಗಲಿ. ಯಜ್ಞದಲ್ಲಿ ನೀವು ದೇವತೆಗಳನ್ನು ಸಂತೋಷಗೊಳಿಸಿರಿ. ಆ ದೇವತೆಗಳು ಮಳೆಬೆಳೆಗಳನ್ನು ಕೊಟ್ಟು ನಿಮ್ಮನ್ನು ಸಂತೋಷಗೊಳಿಸಲಿ. ಹೀಗೆ ಒಬ್ಬರನ್ನೊಬ್ಬರು ಸಂತೋಷಗೊಳಿಸುವವರಾಗಿ ನೀವು ಹೆಚ್ಚಿನ ಶ್ರೇಯಸ್ಸನ್ನು ಪಡೆಯಿರಿ. ಯಜ್ಞಗಳಿಂದ ಸಂತೋಷಗೊಂಡ ದೇವತೆಗಳು ನಿಮಗೆ ಬಯಸಿದ ಸುಖಗಳನ್ನೆಲ್ಲ ಕೊಡುತ್ತಾರೆ. ಅವರು ಕೊಟ್ಟಿದ್ದರಿಂದ ಅವರ ಪೂಜೆಯನ್ನು ಮಾಡದೆ ಉಣ್ಣುವವರು ಕಳ್ಳರೆ ಸರಿ. ಎಲ್ಲವನ್ನೂ ಈಶ್ವರನಿಗೊಪ್ಪಿಸಿ ಆ ಪ್ರಸಾದವನ್ನುಣ್ಣುವವರು ಎಲ್ಲಪಾಪಗಳಿಂದಲೂ ಬಿಡುಗಡೆಯನ್ನು ಹೊಂದುತ್ತಾರೆ. ಯಾರು ತಮ್ಮ ಹೊಟ್ಟೆಗಾಗಿ ಬೇಯಿಸುವರೊ ಅವರು ಪಾಪವನ್ನುಣ್ಣುವವರಾಗುತ್ತಾರೆ. ಅನ್ನದಿಂದ ಪ್ರಾಣಿಗಳು ಹುಟ್ಟುತ್ತವೆ. ಮಳೆಯಿಂದ ಅನ್ನವಾಗುವ ಧಾನ್ಯಗಳು ಹುಟ್ಟುತ್ತವೆ. ಯಜ್ಞದಿಂದ ಮಳೆಯುಂಟಾಗುತ್ತದೆ.ಯಜ್ಞವು ಕರ್ಮದಿಂದ ನಡೆಯುತ್ತಿದೆ. ಕರ್ಮಕ್ಕೆ ವೇದವು ಆಧಾರ. ವೇದವು ಪರಮಾತ್ಮನಿಂದ ಹೊರಬಿದ್ದದ್ದು. ವೇದವು ಎಲ್ಲ ವಿಷಯಗಳನ್ನೂ ತಿಳಿಸಿರುವದಾದರೂ ಯಜ್ಞದ ವಿಷಯದಲ್ಲಿ ಅದಕ್ಕೆ ಆದರ ಹೆಚ್ಚು. ಹೀಗೆ ಮುಂದುವರಿಸಿರುವ ಚಕ್ರವನ್ನು ಯಾವನು ಸಾಗಿಸುವದಿಲ್ಲವೊ ಅವನ ಬಾಳು ಪಾಪದ್ದು. ಇಂದ್ರಿಯಗಳೊಡನೆ ವಿನೋದಗೊಳ್ಳುತ್ತಿರುವ ಅವನ ಬದುಕು ವ್ಯರ್ಥ. (೧೦-೧೬)

ಯಾವನು ಆತ್ಮನಲ್ಲಿಯೇ ಪ್ರೇಮವುಳ್ಳವನೊ ಯಾವನು ಆತ್ಮನಿಂದಲೆ ತೃಪ್ತನಾಗಿ ಆತ್ಮನಲ್ಲಿಯೇ ಸಂತೋಷಗೊಳ್ಳುತ್ತಿರುವನೋ ಅವನು ಮಾಡಬೇಕಾದದ್ದೇನೂ ಇಲ್ಲ. ಅವನಿಗೆ ಮಾಡಿದ್ದರಿಂದ ಪ್ರಯೋಜನವಿಲ್ಲ; ಬಿಟ್ಟಿದ್ದರಿಂದ ಹಾನಿ ಇಲ್ಲ. ಅವನಿಗೆ ಯಾವದರಲ್ಲಿಯೂ ಯಾವ ಪ್ರಯೋಜನವೂ ಇಲ್ಲ. (೧೭-೧೮)

ಆದ್ದರಿಂದ ಫಲದಾಸೆ ಇಲ್ಲದೆ ಯಾವಾಗಲೂ ಕೆಲಸವನ್ನು ಮಾಡು. ಫಲದಾಸೆ ಇಲ್ಲದೆ ಕೆಲಸವನ್ನು ಮಾಡಿದವನು ಪರಮಾತ್ಮನನ್ನು ಪಡೆಯುತ್ತಾನೆ. ಜನಕನೆ ಮೊದಲಾದವರು ಕರ್ಮದಿಂದಲೆ ಸಿದ್ಧಿಯನ್ನು ಹೊಂದಿದರು. ಜನರಿಗೆ ಮೇಲುಪಂಕ್ತಿಯಾಗಿರಬೇಕೆಂಬುದನ್ನು ಮನಸ್ಸಿಗೆ ತಂದುಕೊಂಡಾದರೂ ಕೆಲಸವನ್ನು ಮಾಡು. ದೊಡ್ಡವನೆನಿಸಿಕೊಂಡವನು ಏನೇನು ಮಾಡುತ್ತಾನೊ ಅದರಂತೆ ಉಳಿದವರು ನಡೆಯುತ್ತಾರೆ. ಅವನು ಯಾವದನ್ನು ಸರಿಯೆಂದು ತಿಳಿದು ಮಾಡುತ್ತಾನೋ ಜನರು ಅದನ್ನು ಹಿಂಬಾಲಿಸುತ್ತಾರೆ. ಅರ್ಜುನ, ನಾನು ಮಾಡಬೇಕಾದದ್ದೆಂಬುದು ಮೂರು ಲೋಕದಲ್ಲಿ ಹುಡುಕಿದರೂ ಏನೂ ಇಲ್ಲ. ನನಗೆ ಬೇಕಾದದ್ದು ಯಾವದೂ ದೊರೆತಿಲ್ಲದೆ ಇಲ್ಲ. ಆದರೂ ನಾನು ಕೆಲಸವನ್ನು ಮಾಡುತ್ತಲೆ ಇದ್ದೇನೆ. ನಾನು ಆಲಸ್ಯವಿಲ್ಲದೆ ಹೀಗೆ ಕೆಲಸವನ್ನು ಮಾಡದೆ ಇದ್ದರೆ ಜನರೆಲ್ಲರೂ ಎಲ್ಲ ಬಗೆಯಿಂದಲೂ ನನ್ನ ದಾರಿಯನ್ನೆ ಹಿಡಿಯುತ್ತಾರೆ. ನಾನು ಕೆಲಸವನ್ನು ಮಾಡದೆ ಹೋದರೆ ಲೋಕಗಳೆಲ್ಲ ಹಾಳಾದಾವು; ನಾನು ಜಾತಿಗಳನ್ನೆಲ್ಲ ಬೆರೆಸಿದವನಾದೇನು; ಈ ಜನರನ್ನೆಲ್ಲ ಕೊಂದವನಾದೇನು. ಆತ್ಮನನ್ನರಿಯದವರು ಫಲದಾಸೆಯಿಂದ ಕರ್ಮವನ್ನು ಮಾಡುವಂತೆ ಆತ್ಮನನ್ನರಿತವನು ಫಲದಾಸೆ ಇಲ್ಲದೆ ಜನರ ಮೇಲುಪಂಕ್ತಿಗಾಗಿ ಮಾಡಬೇಕು. ತಿಳಿವಳಿಕೆ ಇಲ್ಲದೆ ಫಲದಾಸೆಯಿಂದ ಕರ್ಮವನ್ನು ಮಾಡುವವರು ತಿಳಿವಳಿಕೆಯನ್ನು ಹೊಂದುವದಕ್ಕೆ ಮುಂಚೆ ಕೆಲಸವನ್ನು ಕೈ ಬಿಡುವಂತೆ ಅವರ ಬುದ್ಧಿಯನ್ನು ಒಮ್ಮೆಗೇ ಬದಲುಮಾಡಿಬಿಡಬಾರದು.ತಿಳಿದವನು ಫಲದಾಸೆ ಇಲ್ಲದೆ ಮಾಡುತ್ತ ಎಲ್ಲ ಕರ್ಮಗಳನ್ನೂ ಉಳಿದವರಿಂದ ಮಾಡಿಸಬೇಕು.

(೧೯-೨೬)

ಕರ್ಮಗಳು ಎಲ್ಲ ಬಗೆಯಿಂದಲೂ ಮಾಯೆಯ ಸತ್ತ್ವ, ರಜ, ತಮ ಎಂಬ ಗುಣಗಳಿಂದಾಗುವವು. ದೇಹ, ಇಂದ್ರಿಯ ಮೊದಲಾದವುಗಳನ್ನು ತಾನೆಂದು ತಪ್ಪು ತಿಳಿದವನು ಅದನ್ನು ಮಾಡಿದವನು ತಾನೆಂದು ತಿಳಿಯುತ್ತಾನೆ. ಗುಣಗಳ

ಮತ್ತು ಕರ್ಮಗಳ ವಿಂಗಡದ ನಿಜವನ್ನರಿತವನಾದರೂ ದೇಹೇಂದ್ರಿಯಗಳು ವಿಷಯಗಳೊಡನೆ ವ್ಯವಹರಿಸುವವೆಂದರಿತು ತಾನು ಮಾಡುವವನೆಂದು ಅಭಿಮಾನಗೊಳ್ಳುವದಿಲ್ಲ. ಮಾಯಾಶಕ್ತಿಯ ಗುಣಗಳಿಂದಾದ ದೇಹ ಮೊದಲಾದವುಗಳನ್ನು ತಾವೆಂದು ತಪ್ಪು ತಿಳಿದವರು ದೇಹ ಮೊದಲಾದವುಗಳು ಮಾಡಿದ ಕರ್ಮದಲ್ಲಿ ತಾವು ಮಾಡಿದೆವೆಂದು ಅಭಿಮಾನಗೊಳ್ಳುತ್ತಾರೆ. ಚೆನ್ನಾಗಿ ತಿಳಿದಿಲ್ಲದ ಆ ದಡ್ಡರು ಒಮ್ಮೆಗೇ ಕೆಲಸವನ್ನು ಕೈ ಬಿಡುವಂತೆ ತಿಳಿದವರು ಅವರ ಬುದ್ಧಿಯನ್ನು ಕದಲಗೊಡಬಾರದು. (೨೭-೨೯)

ಎಲ್ಲರೊಳಗೂ ನಾನು ಆತ್ಮನಾಗಿರುವೆನೆಂದರಿತು ಎಲ್ಲ ಕರ್ಮಗಳನ್ನೂ ನನಗೊಪ್ಪಿಸಿ ಬಯಕೆಯೂ ನನ್ನದೆಂಬ ಅಭಿಮಾನವೂ ಇಲ್ಲದವನಾಗಿ ಮನಸ್ಸಿನಲ್ಲಿ ತಳಮಳವಿಲ್ಲದೆ ಕಾದು ಈ ನನ್ನ ಅಭಿಪ್ರಾಯದಂತೆ ಯಾರು ಯಾವಾಗಲೂ ನನ್ನ ಮೇಲಿನ ವಿಶ್ವಾಸದಿಂದಲೂ ನನ್ನಲ್ಲಿ ಹುಳುಕನ್ನು ಹುಡುಕದವರಾಗಿಯೂ ನಡೆಸುತ್ತಾರೊ ಅವರು ಕೂಡ ಕರ್ಮಗಳ ಪುಣ್ಯಪಾಪಗಳಿಂದ ಬಿಡುಗಡೆಯನ್ನು ಹೊಂದುತ್ತಾರೆ. ಯಾರು ಈ ವಿಷಯದಲ್ಲಿ ಹುಳುಕನ್ನು ಕಂಡುಹಿಡಿಯುತ್ತ ನನ್ನ ಅಭಿಪ್ರಾಯದಂತೆ ನಡೆಸುವದಿಲ್ಲವೋ ಅವರು ಎಲ್ಲವನ್ನೂ ತಪ್ಪು ತಿಳಿದವರಾಗಿ ಅವಿವೇಕಿಗಳಾಗಿ ಹಾಳಾಗುವರೆಂದು ತಿಳಿ. ಬಲ್ಲವನು ಕೂಡ ತನ್ನ ಹುಟ್ಟು ಗುಣದಂತೆ ಕೆಲಸಮಾಡುವನು. ಎಲ್ಲ ಪ್ರಾಣಿಗಳೂ ಹುಟ್ಟುಗುಣವನ್ನು ಹಿಂಬಾಲಿಸುತ್ತವೆ. ಕರ್ಮವನ್ನು ಮಾಡುವದಿಲ್ಲವೆಂಬ ಹಠವು ಹೇಗೆ ಸಾಗೀತು! ಎಲ್ಲ ಇಂದ್ರಿಯಗಳಿಗೂ ತಮ್ಮ ತಮ್ಮ ವಿಷಯಗಳ ಮೇಲೆ ಪ್ರೀತಿಯೂ ಹಗೆತನವೂ ಇದ್ದೇ ಇರುವದು. ಅವುಗಳಿಗೆ ಅಡಿಯಾಳಾಗಬಾರದು. ಅವೇ ಇವನ ಎದುರಾಳಿಗಳು. ಮತ್ತೊಬ್ಬನ ಧರ್ಮವನ್ನು ಚೆನ್ನಾಗಿ ನಡೆಸುವದಕ್ಕಿಂತ ತನ್ನ ಧರ್ಮವು, ಗುಣದಲ್ಲಿ ಕೊರತೆಯಾದದ್ದಾದರೂ, ಮೇಲು. ತನ್ನ ಧರ್ಮದಲ್ಲಿ ಸಾವು ಬಂದರೂ ಒಳ್ಳೆಯದೆ. ಮತ್ತೊಬ್ಬರ ಧರ್ಮವು ನರಕದ ಹೆದರಿಕೆಯನ್ನುಂಟುಮಾಡುವದು. (೩೦-೩೫)

ಈ ಮಾತುಗಳನ್ನು ಕೇಳಿದ ಅರ್ಜುನನು ಕೃಷ್ಣನನ್ನು ಕುರಿತು "ಮನುಷ್ಯನು ತನಗೆ ಬೇಡವಾದರೂ ಬಲ್ಲಿದನಾದವನ ಅಪ್ಪಣೆಯನ್ನು ನಡೆಸುವವನಂತೆ ಯಾರಿಂದ ಪ್ರೇರಿತನಾಗಿ ಪಾಪವನ್ನು ಮಾಡುತ್ತಾನೆ?" ಎಂದು ಕೇಳಿದನು. (೩೬)

ಅದಕ್ಕೆ ಶ್ರೀ ಕೃಷ್ಣನು ಹೇಳಿದ್ದೇನೆಂದರೆ:- ಪಾಪವನ್ನು ಮಾಡಿಸುವದು ಬಯಕೆ. ಇದೇ ತನಗೇನಾದರೂ ಅಡ್ಡಬರುತ್ತಲೇ ಸಿಟ್ಟಿನ ರೂಪಕ್ಕೂ ತಿರುಗುವದು. ಇದು ರಜೋಗುಣದಿಂದ ಹುಟ್ಟಿದ್ದು. ಇದರ ಹೊಟ್ಟೆಗೆ ಎಷ್ಟು ಹಾಕಿದರೂ ಸಾಲದು. ಇದು ದೊಡ್ಡ ಪಾಪಿ. ಈ ಲೋಕದಲ್ಲಿ ಇದನ್ನು ಹಗೆಯೆಂದು ತಿಳಿ. ಬೆಂಕಿಯನ್ನು ಹೊಗೆಯೂ ಕನ್ನಡಿಯನ್ನು ಧೂಳೂ ಗರ್ಭವನ್ನು ಜರಾಯುವೆಂಬ ಚೀಲವೂ ಮುಚ್ಚಿಕೊಂಡಿರುವಂತೆ ಜನರನ್ನೆಲ್ಲ ಬಯಕೆಯು ಮುಚ್ಚಿಕೊಂಡಿರುವದು. ತಿಳಿದವರಿಗೆ ಇದು ಯಾವಾಗಲೂ ಹಗೆಯನಿಸಿರುವದು. ಇದರ ಹೊಟ್ಟೆಗೆ ಎಷ್ಟು ಹಾಕಿದರೂ ತುಂಬದೆ ಸಾಕೆನಿಸದಿರುವದು. ಇದು ಜ್ಞಾನವನ್ನು ಮುಚ್ಚಿ ಹಾಕಿರುವದು. ಇಂದ್ರಿಯಗಳು, ಮನಸ್ಸು, ಬುದ್ಧಿ-ಇವೇ ಅದಿರುವ ಸ್ಥಲಗಳು. ಅದು ಇವುಗಳ ಮೂಲಕ ಜೀವರ ಜ್ಞಾನವನ್ನು ಮುಸುಕಿ ಮಂಕುಬೂದಿಯನ್ನು ತಳೆಯುವದು. ಆದ್ದರಿಂದ ನೀನು ಮೊದಲು ಇಂದ್ರಿಯಗಳನ್ನು ಬಿಗಿಹಿಡಿ ಮತ್ತು ಜ್ಞಾನವನ್ನೂ ಅನುಭವವನ್ನೂ ಹಾಳುಮಾಡುವ ಈ ಪಾಪಿಯನ್ನು ಗೆಲ್ಲು. ಇಂದ್ರಿಯಗಳು ಸೂಕ್ಷ್ಮಗಳಾಗಿ ಒಳಗಿರುವ ಹೆಚ್ಚಿನ ಯೋಗ್ಯತೆಯವುಗಳೆನ್ನುವರು. ಇಂದ್ರಿಯಗಳಿಗಿಂತಲೂ ಮನಸ್ಸು ಹೆಚ್ಚಿನದು. ಮನಸ್ಸಿಗಿಂತ ಬುದ್ಧಿ ಹೆಚ್ಚಿನದು. ಒಳಗಿರುವ ಆತ್ಮನು ಬುದ್ಧಿಗಿಂತ ಸೂಕ್ಷ್ಮನು ಮತ್ತು ಒಳಗಿರುವವನು. ಇದನ್ನು ತಿಳಿದು ಪ್ರಯತ್ನದಿಂದ ಮನಸ್ಸನ್ನು ಚೆನ್ನಾಗಿ ಸಮಾಧಾನಕ್ಕೆ ತಂದುಕೊ ; ಬಹು ಕಷ್ಟದಿಂದ ಒಳಗಾಗುವ ಬಯಕೆಯೆಂಬ ಹಗೆಯನ್ನು ಕೊಲ್ಲು. (೩೭-೪೩)

ಅಧ್ಯಾಯ-೪

ಜ್ಞಾನಿಯು ಮಾಡಿದರೂ ಮಾಡಿದ ಹಾಗಲ್ಲ

ಶ್ರೀ ಕೃಷ್ಣನ ಮಾತು ಮುಂದೆ ನಡೆದದ್ದೇನೆಂದರೆ : "ಎಂದಿಗೂ ಮುಕ್ಕಾಗದ ಈ ಯೋಗವನ್ನು ನಾನು ಸೂರ್ಯನಿಗೆ ಹೇಳಿದೆನು; ಸೂರ್ಯನು ಮನುವಿಗೆ ಹೇಳಿದನು; ಮನು ಇಕ್ಷ್ವಾಕುವಿಗೆ ತಿಳಿಸಿದನು ಹೀಗೆ ಒಬ್ಬರಿಂದೊಬ್ಬರಿಗೆ ಬಂದ ಇದನ್ನು ರಾಜರ್ಷಿಗಳು ತಿಳಿದುಕೊಂಡರು. ಆ ಯೋಗವು ಈಗ ಬಹುಕಾಲದಿಂದ ಕೇಳುವವರೇ ದಿಕ್ಕಿಲ್ಲದೆ ಹೋಗಿದೆ. ಬಹು ಹಿಂದಿನಿಂದ ಬಂದ ಆ ಯೋಗವನ್ನೇ ಭಕ್ತನೂ ಗೆಳೆಯನೂ ಆದ ನಿನಗೆ ಈಗ ಹೇಳಿದೆನು. ಇದು ಬಹು ಹೆಚ್ಚಿನ ಗುಟ್ಟು." (೧-೩)

ಆಗ ಅರ್ಜುನನು ಸಂಶಯಗೊಂಡು "ನೀನಿರುವ ಈ ಕಾಲವೇ ಬೇರೆ; ಸೂರ್ಯನು ಹುಟ್ಟಿದ ಕಾಲವೇ ಬೇರೆ. ನೀನು ಇದನ್ನು ಮೊದಲು ಹೇಳಿದವನೆಂದು ನಾನು ಹೇಗೆ ತಿಳಿಯಲಿ?" ಎಂದು ಕೇಳಿದನು. (೪)

ಅದಕ್ಕೆ ಕೃಷ್ಣನ ಉತ್ತರ:-

ಅರ್ಜುನ, ನಿನಗೂ ನನಗೂ ಅನೇಕ ಜನ್ಮಗಳು ಆಗಿಹೋದವು. ಆ ಎಲ್ಲವನ್ನೂ ನಾನು ಬಲ್ಲೆನು; ನೀನು ತಿಳಿಯೆ. ನಾನು ಹುಟ್ಟುವಿಕೆ ಇಲ್ಲದವನು, ಅಚ್ಚಳಿಯದ ಜ್ಞಾನ ಉಳ್ಳವನು, ಎಲ್ಲ ಪ್ರಾಣಿಗಳನ್ನೂ ಆಳುವವನು. ಆದರೂ ನನ್ನ ಮಾಯಾಶಕ್ತಿಯ ಬಲದಿಂದ ನಾನು ಹುಟ್ಟುತ್ತೇನೆ. ಯಾವ ಯಾವ ಕಾಲದಲ್ಲಿ

ಧರ್ಮದ ಇಳುಗಡೆಯೂ ಅಧರ್ಮದ ಏರಿಕೆಯೂ ಆಗುತ್ತದೊ ಆಗ ನಾನು ನನ್ನನ್ನು ಹುಟ್ಟಿಸುತ್ತೇನೆ. ಒಳ್ಳೆಯವರನ್ನು ಕಾಪಾಡುವದಕ್ಕೂ ಕೆಟ್ಟವರನ್ನು ಹಾಳು ಮಾಡುವುದಕ್ಕೂ ಧರ್ಮವನ್ನು ನೆಲೆಗೊಳಿಸುವುದಕ್ಕೂ ಪ್ರತಿ ಯುಗದಲ್ಲಿಯೂ ಹುಟ್ಟುತ್ತೇನೆ. ನನ್ನ ಈ ಪವಿತ್ರವಾದ ಹುಟ್ಟನ್ನೂ ಕರ್ಮವನ್ನೂ ಹೀಗೆ ಯಾವನು ಇದ್ದದ್ದಿದ್ದ ಹಾಗೆ ತಿಳಿಯುತ್ತಾನೋ ಅವನು ದೇಹವನ್ನು ಬಿಟ್ಟ ಮೇಲೆ ಮತ್ತೆ ಹುಟ್ಟನ್ನು ಹೊಂದುವದಿಲ್ಲ. ಅವನು ನನ್ನನ್ನು ಪಡೆಯುತ್ತಾನೆ. (೫-೯)

ಪ್ರೀತಿ, ಹೆದರಿಕೆ, ಸಿಟ್ಟು-ಇವುಗಳಿಲ್ಲದವರಾಗಿ ನನ್ನಲ್ಲಿಯೇ ಮನಸ್ಸನ್ನಿಟ್ಟು ನನಗೆ ಶರಣು ಬಂದ ಅನೇಕರು ತಿಳಿವೆಂಬ ತಪಸ್ಸಿನಿಂದ ಶುದ್ಧರಾಗಿ ನನ್ನ ಸ್ವರೂಪವನ್ನು ಪಡೆದಿದ್ದಾರೆ. ಯಾರು ಹೇಗೆ ಶರಣೆಂದರೆ ಅವರಿಗೆ ನಾನು ಹಾಗೆಯೇ ಅನುಗ್ರಹಿಸುತ್ತೇನೆ. ಮನುಷ್ಯರು ಎಲ್ಲ ರೀತಿಯಿಂದಲೂ ನನ್ನ ದಾರಿಯನ್ನು ಹಿಂಬಾಲಿಸುವವರಾಗಿರುತ್ತಾರೆ. (೧೦-೧೧)

ಕರ್ಮಗಳ ಫಲಗಳನ್ನು ಬಯಸುವವರು ಈ ಲೋಕದಲ್ಲಿ ದೇವತೆಗಳನ್ನು ಪೂಜೆ ಮಾಡುತ್ತಾರೆ. ಏಕೆಂದರೆ : ಮನುಷ್ಯಲೋಕದಲ್ಲಿ ವರ್ಣಾಶ್ರಮದ ಕರ್ಮಗಳ ಫಲವು ಬೇಗ ಆಗುತ್ತದೆ. ಗುಣಕ್ಕೂ ಕರ್ಮಕ್ಕೂ ತಕ್ಕಂತೆ ನಾನು ನಾಲ್ಕು ವರ್ಣಗಳನ್ನು ಹುಟ್ಟಿಸಿದ್ದೇನೆ. ನಾನು ಅದನ್ನು ಮಾಡಿದವನಾದರೂ ಅದು ಮಾಯೆಯಿಂದಾಗಿರುವದಾದ್ದರಿಂದ ನನ್ನನ್ನು ಮಾಡಿದವನಲ್ಲವೆಂದೂ ಎಂದೂ ಅಳಿಯದವನೆಂದೂ ತಿಳಿ. ನನ್ನನ್ನು ಕರ್ಮಗಳು ಸೋಂಕುವದಿಲ್ಲ. ನನಗೆ ಕರ್ಮದ ಫಲದಾಸೆ ಇಲ್ಲ. ನನ್ನನ್ನು ಹೀಗೆ ಯಾವನು ತಿಳಿಯುತ್ತಾನೊ ಅವನು ಕರ್ಮದಕಟ್ಟಿಗೆ ಒಳಗಾಗುವುದಿಲ್ಲ. ಮೋಕ್ಷವನ್ನು ಬಯಸಿದ ಹಿಂದಿನವರು ಕೂಡ ಹೀಗೆ ತಿಳಿದು ಕರ್ಮವನ್ನು ಮಾಡಿದರು. ಆದ್ದರಿಂದ ಹಿಂದಿನವರೆಲ್ಲ ಮಾಡಿಕೊಂಡು ಬಂದಿರುವ ಕರ್ಮವನ್ನು ನೀನು ಮಾಡುವವನೆ ಆಗು. (೧೨-೧೫)

ಮಾಡುವದೆಂಬುದು ಯಾವುದು? ಮಾಡದಿರುವದೆಂಬುದು ಯಾವುದು?- ಎಂಬ ವಿಷಯದಲ್ಲಿ ಪಂಡಿತರು ಕೂಡ ತಪ್ಪಾಗಿ ತಿಳಿಯುತ್ತಿರುವದುಂಟು. ಯಾವದನ್ನು ತಿಳಿದರೆ ನಿನಗೆ ಪಾಪದಿಂದ ಬಿಡುಗಡೆಯಾಗುವುದೊ ಆ ಮಾಡುವದರ ವಿಷಯವನ್ನು ನಾನು ನಿನಗೆ ಹೇಳುತ್ತೇನೆ. ಮಾಡುವದರ ವಿಷಯವೂ ತಿಳಿಸತಕ್ಕದ್ದಾಗಿದೆ; ಮಾಡಬಾರದ್ದರ ವಿಷಯವೂ ತಿಳಿಸತಕ್ಕದ್ದಾಗಿದೆ; ಮಾಡದಿರುವದರ ವಿಷಯವೂ ತಿಳಿಸತಕ್ಕದ್ದಾಗಿದೆ. ಕರ್ಮಗಳ ಸ್ಥಿತಿಯನ್ನು

ತಿಳಿಯುವದು ಕಷ್ಟ. ದೇಹ ಮೊದಲಾದವುಗಳು ಮಾಡುವದನ್ನು ತಾನು ಮಾಡಿದ್ದಲ್ಲವೆಂದು ತಿಳಿಯಬೇಕು. ದೇಹ ಮೊದಲಾದವುಗಳು ಏನನ್ನೂ ಮಾಡದೆ ಹಿಡಿತಕ್ಕೆ ಸಿಕ್ಕಿ ಸುಮ್ಮನಿರುವದನ್ನು ತಾನು ಮಾಡಿದ್ದೆಂದು ತಿಳಿಯಬೇಕು. ಮನುಷ್ಯರೆಲ್ಲೆಲ್ಲ ಅವನು ಜಾಣನು; ಅವನು ಯೋಗಿ; ಅವನು ಎಲ್ಲ ಕರ್ಮಗಳನ್ನೂ ಮಾಡಿದವನು. (೧೬-೧೮)

ಅವನು ತನ್ನ ಯಾವ ಕೆಲಸಕ್ಕೂ ಫಲದಾಸೆಯನ್ನು ಮಾಡದೆ ಮತ್ತು ಅಭಿಮಾನವನ್ನು ತಾಳದೆ ಇರುವನು. ಅವನ ಕರ್ಮಗಳೆಲ್ಲ ಜ್ಞಾನವೆಂಬ ಬೆಂಕಿಯಿಂದ ಸುಟ್ಟುಹೋಗಿರುವವು. ತಿಳಿದವರು ಅವನನ್ನು ಆತ್ಮವನ್ನರಿತವನೆನ್ನುವರು. ಫಲದಾಸೆಯನ್ನು ಬಿಟ್ಟು ಯಾವಾಗಲೂ ತೃಪ್ತನಾಗಿ ಕರ್ಮದ ಸಾಧನಗಳಿಗೆ ಶರಣೆನ್ನದೆ ಕರ್ಮದಲ್ಲಿ ತೊಡಗಿದರೂ ಅವನು ಎಷ್ಟು ಮಾತ್ರವೂ ಮಾಡಿದವನೆನಿಸುವುದಿಲ್ಲ. ಬಯಕೆ ಇಲ್ಲದೆ ಮನಸ್ಸನ್ನೂ ದೇಹವನ್ನೂ ಹಿಡಿತದಲ್ಲಿಟ್ಟುಕೊಂಡು ಪರಿವಾರವನ್ನೆಲ್ಲ ಬಿಟ್ಟು ಬರೀ ಬದುಕಿರುವಷ್ಟರಮಟ್ಟಿಗೆ ಕರ್ಮವನ್ನು ಮಾಡುವವನಿಗೆ ಪಾಪವಿಲ್ಲ. ತಾನಾಗಿ ದೊರೆತದ್ದು ಸಾಕೆಂದು ಹಸಿವು, ಬಾಯಾರಿಕೆ ಮೊದಲಾದ ಜೋಡಿಗಳನ್ನು ದಾಟಿದವನಾಗಿ ಮತ್ತೊಬ್ಬರ ಏಳಿಗೆಗೆ ತಳಮಳಗೊಳ್ಳದೆ ತನ್ನ ಜೀವನಕ್ಕೇನಾದರೂ ದೊರಕಿದರೂ ದೊರಕದಿದ್ದರೂ ಕೂಡ ಒಂದೇ ರೀತಿಯಲ್ಲಿರುವವನು, ಮಾಡಿದರೂ ಅದರ ಕಟ್ಟಿಗೊಳಪಡುವದಿಲ್ಲ. ಅಭಿಮಾನವನ್ನು ತೊರೆದು ಕರ್ಮಗಳ ಕಟ್ಟನ್ನು ಕಳಚಿಕೊಂಡು ಜ್ಞಾನದಲ್ಲಿ ಮನಸ್ಸನ್ನು ನೆಲೆಗೊಳಿಸಿ ಈಶ್ವರನಿಗೆ ಪ್ರೀತಿಯಾಗಲೆಂದು ಮಾಡುವ ಕರ್ಮವೆಲ್ಲವೂ ಸಂಪೂರ್ಣವಾಗಿ ಲಯವಾಗುತ್ತವೆ. ಅವನಿಗೆ ಹೋಮದ ಪದಾರ್ಥವನ್ನು ಹಿಡಿದಿರುವ ಪಾತ್ರೆಯೂ ಬ್ರಹ್ಮವೆ; ಹೋಮಮಾಡುವ ವಸ್ತುವೂ ಬ್ರಹ್ಮವೆ. ಬ್ರಹ್ಮವೆಂಬ ಅಗ್ನಿಯಲ್ಲಿ ಬ್ರಹ್ಮ ಸ್ವರೂಪದವನಿಂದಲೆ ಹೋಮ ಮಾಡಲಾಗಿರುವದೆಂದು ತಿಳಿದು ಕರ್ಮವೆಲ್ಲ ಬ್ರಹ್ಮವೆಂಬ ಮನಸ್ಸುಳ್ಳ ಅವನು ಹೋಗಿ ಸೇರತಕ್ಕದ್ದೂ ಬ್ರಹ್ಮವೆ. (೧೯-೨೪)

ಕರ್ಮವನ್ನು ಮಾಡುವ ಕೆಲವರು ದೇವತೆಗಳ ಪ್ರೀತಿಗಾಗಿ ಯಜ್ಞವನ್ನು ಮಾಡುತ್ತಾರೆ. ಇನ್ನು ಕೆಲವರು ಬ್ರಹ್ಮವೆಂಬ ಅಗ್ನಿಯಲ್ಲಿ ಜೀವವನ್ನು ಹೋಮ ಮಾಡುವರು. ಇನ್ನು ಕೆಲವರು ಬಿಗಿ ಹಿಡಿಯುವದೆಂಬ ಅಗ್ನಿಯಲ್ಲಿ ಕಿವಿ ಮೊದಲಾದ ಇಂದ್ರಿಯಗಳನ್ನು ಹೋಮಮಾಡುತ್ತಾರೆ. ಮತ್ತೆ ಕೆಲವರು ಇಂದ್ರಿಯಗಳೆಂಬ

ಅಗ್ನಿಗಳಲ್ಲಿ ಶಬ್ದ ಮೊದಲಾದ ವಿಷಯಗಳನ್ನು ಹೋಮ ಮಾಡುತ್ತಾರೆ-ಎಂದರೆ ಶಾಸ್ತ್ರವಿರುದ್ಧವಲ್ಲದ ವಿಷಯಗಳನ್ನು ಅನುಭವಿಸುತ್ತಾರೆ. ಇನ್ನು ಕೆಲವರು ವಿವೇಕದಿಂದ ಹುರುಪುಗೊಂಡು ಆತ್ಮನಲ್ಲಿ ಒಮ್ಮುಖನಾಗಿರುವದೆಂಬ ಅಗ್ನಿಯಲ್ಲಿ ಎಲ್ಲ ಇಂದ್ರಿಯಗಳ ಕೆಲಸಗಳನ್ನೂ ಪ್ರಾಣಗಳ ಕೆಲಸವನ್ನೂ ಹೋಮ ಮಾಡುತ್ತಾರೆ-ಎಂದರೆ ಪ್ರಾಣಗಳನ್ನೂ ಇಂದ್ರಿಯಗಳನ್ನೂ ಬಿಗಿಹಿಡಿದು ಆತ್ಮಸ್ವರೂಪವನ್ನೆ ಚಿಂತಿಸುತ್ತಾರೆ. ಕಡಿದಾದ ನಿಯಮವನ್ನು ನಡೆಸುವ ಸಾಧಕರು ಈಶ್ವರನಿಗೆ ಪ್ರೀತಿಯಾಗಲೆಂದು ಹಣವನ್ನು ವೆಚ್ಚ ಮಾಡುವರು; ಉಪವಾಸ ಮೊದಲಾದದ್ದನ್ನು ನಡೆಸುವರು. ಹಾಗೆಯೇ ಇನ್ನು ಕೆಲವರು ಮನಸ್ಸನ್ನು ಬಿಗಿಹಿಡಿಯುವರು, ವೇದಾಭ್ಯಾಸವನ್ನು ಮಾಡುವರು ಮತ್ತು ಶಾಸ್ತ್ರಾರ್ಥವನ್ನು ತಿಳಿದುಕೊಳ್ಳುವರು. (೨೫-೨೮)

ಪ್ರಾಣಾಯಾಮದಲ್ಲಿ ನಿರತರಾದವರಲ್ಲಿ ಕೆಲವರು ಹೊರಗಣ ವಾಯುವನ್ನು ಒಳಗೇ ತಡೆದಿಟ್ಟುಕೊಳ್ಳುವರು; ಇನ್ನು ಕೆಲವರು ಹೊರಕ್ಕೆ ವಾಯುವನ್ನು ಬಿಟ್ಟು ಅಲ್ಲಿಯೇ ತಡೆಯುವರು; ಮತ್ತೆ ಕೆಲವರು ತೆಗೆದುಕೊಳ್ಳುವ ಮತ್ತು ಬಿಡುವ ವಾಯುಗಳ ಓಡಾಟವನ್ನು ತಡೆಯುವರು; ಬೇರೆ ಕೆಲವರು ಆಹಾರದಲ್ಲಿ ಮಿತವನ್ನು ಮಾಡಿಕೊಂಡು ನಾಗ ಮೊದಲಾದ ಉಪವಾಯುಗಳನ್ನು ಪ್ರಾಣ ಮೊದಲಾದ ವಾಯುಗಳಲ್ಲಿ ಹೋಮ ಮಾಡುತ್ತಾರೆ-ಎಂದರೆ ಉಪವಾಯುಗಳನ್ನು ಬಿಗಿ ಹಿಡಿಯುತ್ತಾರೆ. ಇವರೆಲ್ಲರೂ ಈಶ್ವರನನ್ನು ಪೂಜೆಯನ್ನು ತಿಳಿದವರು ಮತ್ತು ಈಶ್ವರನ ಪೂಜೆಯಿಂದ ತಮ್ಮ ಪಾಪಗಳನ್ನು ಕಳೆದುಕೊಂಡವರು. ಈಶ್ವರನ ಪೂಜೆಯನ್ನು ಮಾಡಿ ಉಳಿದ ಕಾಲದಲ್ಲಿ ವಿಹಿತವಾದ ಆಹಾರವೆಂಬ ಅಮೃತವನ್ನುಣ್ಣುವವರು ಅನಾದಿಯಾದ ಬ್ರಹ್ಮಸ್ವರೂಪನ್ನು ಪಡೆಯುತ್ತಾರೆ. ಈಶ್ವರನ ಪೂಜೆಯನ್ನು ಮಾಡದಿದ್ದರೆ ಮಳೆ ಬೆಳೆಗಳಾಗದೆ ಹೋಗುವದರಿಂದ ಈ ಲೋಕದ ಸುಖವೇ ಇಲ್ಲ; ಇನ್ನು ಪರಲೋಕದ ಸುಖವೆಲ್ಲಿಯದು? ಹೀಗೆ ಈಶ್ವರನ ಪೂಜೆಯ ಬಗೆಗಳು ಬಹಳವಾಗಿ ವೇದದ ಮೊದಲ ಭಾಗದಲ್ಲಿ ವಿವರವಾಗಿವೆ. ಅವೆಲ್ಲ ದೇಹ ಮೊದಲಾದವುಗಳಿಂದಾಗುವವೆಂದು ತಿಳಿ. ಹೀಗೆ ತಿಳಿದರೆ ಕರ್ಮಗಳ ಕಟ್ಟಿನಿಂದ ಬಿಡುಗಡೆಯನ್ನು ಹೊಂದುತ್ತಿ. ಹಣವನ್ನು ವೆಚ್ಚಮಾಡುವ ರೂಪವಾದ ಈಶ್ವರಪೂಜೆಗಿಂತಲೂ ಆತ್ಮನಿಗೆ ಕರ್ಮದ ಸಂಬಂಧವಿಲ್ಲವೆಂಬ ತಿಳಿವಿನ ರೂಪವಾದ ಈಶ್ವರಪೂಜೆಯು ಹೆಚ್ಚಿನದು. ಅರ್ಜುನ, ಎಲ್ಲ ಕರ್ಮಗಳೂ ಆ ತಿಳಿವಿನಲ್ಲಿ ಕೊನೆಗಾಣುತ್ತವೆ. (೨೯-೩೩)

ಇದನ್ನು ತಿಳಿ, ಆತ್ಮಸ್ವರೂಪವನ್ನು ಕಣ್ಣಾರೆ ಕಂಡವರ ಬಳಿಗೆ ಹೋಗಿ ಅವರಿಗೆ ಅಡ್ಡ ಬಿದ್ದು ಕೇಳಿ ಅವರನ್ನು ಸೇವೆ ಮಾಡಿದರೆ ಅವರು ನಿನಗೆ ಸೇವೆ ಮಾಡಿದರೆ ಅವರು ನಿನಗೆ ಆ ತಿಳಿವನ್ನು ತಿಳಿಸಿಕೊಡುತ್ತಾರೆ. ಅದನ್ನು ತಿಳಿದರೆ ಮತ್ತೆ ನಿನಗೆ ಈಗಿನಂತೆ ತಪ್ಪು ತಿಳಿವಳಿಕೆಯುಂಟಾಗುವದಿಲ್ಲ. ಆ ತಿಳಿವಳಿಕೆ ನಿನಗುಂಟಾದರೆ ನೀನು ಜಗತ್ತನ್ನೆಲ್ಲ ನಿನ್ನೊಳಗೇ ನೋಡುತ್ತಿ; ಅಷ್ಟೇ ಅಲ್ಲದೆ ನಮ್ಮಿಬ್ಬರ ಆತ್ಮವೂ ಒಂದೇ ಆದ್ದರಿಂದ ಅದನ್ನು ನನ್ನಲ್ಲಿಯೂ ನೋಡಿದವನಾಗುತ್ತಿ. ನೀನು ಪಾಪಿಗಳಲ್ಲೆಲ್ಲ ಹೆಚ್ಚಿನ ಪಾಪಿಯಾಗಿದ್ದರೂ ಆತ್ಮನು ಏನನ್ನೂ ಮಾಡುವವನಲ್ಲವೆಂಬ ತಿಳಿವಿನ ರೂಪವಾದ ಹಡಗಿನಿಂದ ಆ ಪಾಪಗಳನ್ನೆಲ್ಲ ದಾಟುತ್ತಿ. ಉರಿಗೊಳಿಸಿದ ಬೆಂಕಿಯು ಕಟ್ಟಿಗೆಗಳನ್ನು ಬೂದಿಮಾಡಿಬಿಡುವಂತೆ ಆತ್ಮನು ಏನನ್ನೂ ಮಾಡುವವನಲ್ಲವೆಂಬ ತಿಳಿವಿನ ರೂಪವಾದ ಅಗ್ನಿಯು ಕರ್ಮಗಳನ್ನೆಲ್ಲ ಬೂದಿಮಾಡಿಬಿಡುತ್ತದೆ. (೩೪-೩೭)

ಈ ತಿಳಿವಿಗೆ ಸರಿಜೋಡಿಯಾದ ಶುದ್ಧವಸ್ತು ಈ ಲೋಕದಲ್ಲಿಲ್ಲ. ಒಮ್ಮುಖದ ಮನಸ್ಸನ್ನು ನೆಲೆಗೊಳಿಸಿಕೊಂಡವನು ಆ ತಿಳಿವನ್ನು ಬಹುಕಾಲದ ಮೇಲೆ ತನ್ನಲ್ಲಿ ತಾನು ತಿಳಿಯುತ್ತಾನೆ. ಶಾಸ್ತ್ರದಲ್ಲಿಯೂ ಗುರುಗಳಲ್ಲಿಯೂ ವಿಶ್ವಾಸವುಳ್ಳವನಾಗಿ ಅವರ ಉಪದೇಶವೇ ಹೆಚ್ಚಿನದೆಂದು ತಿಳಿದು ಇಂದ್ರಿಯಗಳನ್ನು ಬಿಗಿಹಿಡಿದವನಿಗೆ ಆ ತಿಳಿವು ಉಂಟಾಗುತ್ತದೆ. ಆ ತಿಳಿವು ಬರುತ್ತಲೆ ಅವನು ತಡವಿಲ್ಲದೆ ಬಹುಹೆಚ್ಚಿನ ಶಾಂತಿಯನ್ನು ಹೊಂದುತ್ತಾನೆ. ಆತ್ಮನ ಆ ಸ್ವರೂಪವನ್ನರಿಯದವನೂ ಗುರುಗಳ ಮತ್ತು ಶಾಸ್ತ್ರದ ಮಾತಿನಲ್ಲಿ ವಿಶ್ವಾಸವಿಲ್ಲದವನೂ ಸಂಶಯಪಡುತ್ತಲೇ ಇರುವವನೂ ಹಾಳಾಗುವರು. ಸಂಶಯಪಡುತ್ತಲೆ ಇರುವವನಿಗೆ ಈ ಲೋಕವೂ ಇಲ್ಲ; ಪರಲೋಕವೂ ಇಲ್ಲ. ಆತ್ಮಸ್ವರೂಪದ ಅರಿವಿನಲ್ಲಿ ಜಾಗರೂಕನಾಗಿಯೂ ಆತ್ಮನು ಏನನ್ನೂ ಮಾಡುವವನಲ್ಲವೆಂಬ ತಿಳಿವಿನಿಂದ ಸಂಶಯವನ್ನು ಕಳೆದುಕೊಂಡವನಾಗಿಯೂ ಫಲದಾಸೆ ಇಲ್ಲದ್ದರಿಂದ ಕರ್ಮಗಳನ್ನು ಮಾಡದವನಾಗಿಯೂ ಇರುವವನನ್ನು ಕರ್ಮಗಳು ಕಟ್ಟಿಹಾಕುವದಿಲ್ಲ. ಆದ್ದರಿಂದ ಅರ್ಜುನ, 'ಯುದ್ಧವನ್ನು ಮಾಡುವದು ಮೇಲೊ? ಬಿಡುವುದು ಮೇಲೊ?' ಎಂಬ ಸಂಶಯವು ಅವಿವೇಕದಿಂದ ಹುಟ್ಟಿ ನಿನ್ನ ಬುದ್ಧಿಯನ್ನು ಮನೆಮಾಡಿಕೊಂಡಿರುವುದು. ಅದನ್ನು ತಿಳಿವಳಿಕೆಯೆಂಬ ಕತ್ತಿಯಿಂದ ಕತ್ತರಿಸಿ ಫಲದಾಸೆಯನ್ನು ಬಿಟ್ಟು ಕರ್ಮವನ್ನು ಮಾಡು; ಏಳು. (೩೮-೪೨)

ಅಧ್ಯಾಯ-೫

ಕರ್ಮವನ್ನು ಬಿಡುವದರ ವಿಚಾರ

ಆಗ ಅರ್ಜುನನು ಕೃಷ್ಣನನ್ನು ಕುರಿತು "ಕೃಷ್ಣ, ಕರ್ಮಗಳನ್ನು ಬಿಡಬೇಕೆಂದೊಮ್ಮೆ ಹೇಳುತ್ತಿ; ಫಲದಾಸೆ ಇಲ್ಲದೆ ಮಾಡಬೇಕೆಂದೊಮ್ಮೆ ಹೇಳುತ್ತಿ; ಇವೆರಡರಲ್ಲಿ ಯಾವದು ಮೇಲೂ ಆ ಒಂದನ್ನು ನನಗೆ ಗೊತ್ತು ಮಾಡಿಹೇಳು" ಎಂದು ಕೇಳಿದನು. (೧)

ಆಗ ಕೃಷ್ಣನು ಹೇಳಿದ್ದು :

ಮನಸ್ಸಿನಿಂದ ಸಾಧಿಸಬೇಕೆಂದು ಕರ್ಮಗಳನ್ನು ಬಿಡುವದೂ ಫಲದಾಸೆ ಇಲ್ಲದೆ ಮಾಡುವದೂ ಎರಡೂ ಮೋಕ್ಷಕ್ಕೆ ಸಾಧನಗಳೇ. ಅವೆರಡರಲ್ಲಿ ಕರ್ಮಗಳನ್ನು ಬಿಡುವದಕ್ಕಿಂತ ಫಲದಾಸೆ ಇಲ್ಲದೆ ಮಾಡುವದು ಒಳ್ಳೆಯದು. ಯಾರಿಗೆ ಕರ್ಮಗಳ ಮೇಲೆ ಹಗೆತನವೂ ಫಲದಾಸೆಯೂ ಇಲ್ಲವೋ ಅವನು ಯಾವಾಗಲೂ ಕರ್ಮಗಳನ್ನು ಬಿಟ್ಟವನೆಂದು ತಿಳಿಯಬೇಕು. ಅರ್ಜುನ, ಹಗೆತನ, ಪ್ರೇಮ-ಮೊದಲಾದ ಜೋಡಿಗಳಿಗೊಳಗಾಗದವನು ಕರ್ಮದ ಕಟ್ಟಿನಿಂದ ಆಯಾಸವಿಲ್ಲದೆ ಬಿಡುಗಡೆಯನ್ನು ಹೊಂದುತ್ತಾನೆ. ಕರ್ಮಗಳನ್ನು ಬಿಡುವದೆಂಬ ಸಾಧನವೂ ಫಲದಾಸೆ ಇಲ್ಲದೆ ಮಾಡುವದೆಂಬ ಸಾಧನವೂ ಬೇರೆಬೇರೆ ಎಂಬುದು ತಿಳಿಯದವರ ಮಾತೇ ಹೊರತು ತಿಳಿದವರ ಮಾತಲ್ಲ. ಯಾವ ಒಂದನ್ನು ಚೆನ್ನಾಗಿ ನಡೆಸಿದರೂ ಅವನು ಎರಡರ ಫಲವನ್ನೂ ಪಡೆಯುತ್ತಾನೆ. ಕರ್ಮವನ್ನು ಬಿಟ್ಟು ಸಾಧಿಸುವವರು ಯಾವ ಫಲವನ್ನು ಪಡೆಯುತ್ತಾರೊ

ಅದನ್ನು ಫಲದಾಸೆ ಇಲ್ಲದೆ ಮಾಡುವವರೂ ಪಡೆಯುತ್ತಾರೆ. ಕರ್ಮಗಳನ್ನು ಬಿಟ್ಟು ಸಾಧಿಸುವದನ್ನೂ ಫಲದಾಸೆ ಇಲ್ಲದೆ ಮಾಡುವದನ್ನೂ ಒಂದೆಂದು ಯಾವನು ಕಾಣುವನೊ ಅವನು ನಿಜವನ್ನು ಕಂಡವನು. (೨-೫)

ಅರ್ಜುನ, ಕರ್ಮಗಳನ್ನು ಬಿಡುವದೆಂಬುದು ಫಲದಾಸೆ ಇಲ್ಲದೆ ಮಾಡುವ ಕರ್ಮದ ನೆರವಿಲ್ಲದೆ ಮೈಗೂಡುವದು ಕಷ್ಟ. ಫಲದಾಸೆ ಇಲ್ಲದೆ ಮಾಡುವ ಮುನಿಯು ತಡವಿಲ್ಲದೆ ಆತ್ಮನನ್ನರಿಯುತ್ತಾನೆ. ಮನಸ್ಸನ್ನು ಒಂದೇ ರೀತಿಯಲ್ಲಿಟ್ಟುಕೊಂಡು ಶುದ್ಧವಾದ ಮನಸ್ಸಿನವನಾಗಿ ದೇಹವನ್ನು ಹಿಡಿತದಲ್ಲಿಟ್ಟುಕೊಂಡು ಇಂದ್ರಿಯಗಳನ್ನು ಬಿಗಿಹಿಡಿದು ತನ್ನ ಆತ್ಮವು ಎಲ್ಲ ವಸ್ತುಗಳಿಗೂ ಆತ್ಮವೆಂದು ತಿಳಿದಿರುವವನು ಮಾಡಿದರೂ ಅದರ ಕಟ್ಟಿಗೊಳಗಾಗುವದಿಲ್ಲ. ಆತ್ಮ ಸ್ವರೂಪವನ್ನು ತಿಳಿದು ಮನಸ್ಸನ್ನು ಒಂದೇ ರೀತಿಯಲ್ಲಿಟ್ಟುಕೊಂಡಿರುವವನು ನೋಡಿದರೂ ಕೇಳಿದರೂ ಮುಟ್ಟಿದರೂ ಮೂಸಿದರೂ ತಿಂದರೂ ಹೋದರೂ ನಿದ್ರೆ ಮಾಡಿದರೂ ಉಸಿರುಬಿಟ್ಟರೂ ತಾನು ಏನನ್ನೂ ಮಾಡುವವನಲ್ಲವೆಂದು ತಿಳಿಯುವನು. ಮಾತಾಡಿದರೂ ಮಲಮೂತ್ರಗಳನ್ನು ಬಿಟ್ಟರೂ ಏನನ್ನಾದರೂ ತೆಗೆದುಕೊಂಡರೂ ಕಣ್ಣು ಮುಚ್ಚಿದರೂ ಬಿಟ್ಟರೂ ಇಂದ್ರಿಯಗಳು ವಿಷಯಗಳೊಡನೆ ವ್ಯವಹರಿಸುವವೆಂದು ಮನಸ್ಸಿನಲ್ಲಿ ಎಣಿಸುತ್ತ ತಾನು ಏನನ್ನೂ ಮಾಡುವವನಲ್ಲವೆಂದು ಅವನು ತಿಳಿಯುವನು. ಯಾವನು ಕರ್ಮಗಳನ್ನೆಲ್ಲ ಈಶ್ವರನಿಗೊಪ್ಪಿಸಿ ಫಲದಾಸೆಯನ್ನು ಬಿಟ್ಟು ಮಾಡುವನೋ ಅವನು ನೀರನ್ನು ತಾವರೆಯೆಲೆ ಅಂಟಿಸಿ ಕೊಳ್ಳದಿರುವಂತೆ ಪಾಪಗಳನ್ನು ಅಂಟಿಸಿಕೊಳ್ಳುವದಿಲ್ಲ. (೬-೧೦)

ಫಲದಾಸೆ ಇಲ್ಲದೆ ಮಾಡುವವರು ಅಭಿಮಾನವಿಲ್ಲದೆ ಬರೀ ಶರೀರ, ಮನಸ್ಸು, ಬುದ್ಧಿ ಮತ್ತು ಇಂದ್ರಿಯಗಳು – ಇವುಗಳಿಂದ ತಮ್ಮ ಮನಸ್ಸಿನ ಶುದ್ಧಿಗಾಗಿ ಕರ್ಮವನ್ನು ಮಾಡುತ್ತಾರೆ. ಈಶ್ವರನ ಪ್ರೀತಿಗಾಗಿ ಮಾಡುವವನು ಫಲದಾಸೆಯನ್ನು ತೊರೆದು ಆತ್ಮನಲ್ಲಿಯೇ ಮನಸ್ಸಿರುವ ಶಾಂತಿಯನ್ನು ಪಡೆಯುತ್ತಾನೆ. ಬಯಕೆಗಳಿಗೆ ಒಳಗಾಗಿ ಫಲದಾಸೆಯುಳ್ಳವನು ಕಟ್ಟಿಗೊಳಗಾಗುವನು. ದೇಹದಿಂದ ಕೂಡಿದ ಜ್ಞಾನಿಯು ದೇಹೇಂದ್ರಿಯಗಳನ್ನು ಹಿಡಿತದಲ್ಲಿಟ್ಟುಕೊಂಡು ತಾನು ಮಾಡುವವನಲ್ಲವೆಂಬ ತಿಳಿವಿರುವ ಮನಸ್ಸಿನಿಂದ ಎಲ್ಲ ಕರ್ಮಗಳನ್ನೂ ತೊರೆದು ಏನನ್ನೂ ಮಾಡದೆ ಒಂಬತ್ತು ಬಾಗಿಲುಳ್ಳ

ದೇಹವೆಂಬ ಪಟ್ಟಣದಲ್ಲಿ ಹಾಯಾಗಿರುವನು. ಜಗತ್ತಿನಲ್ಲಿ ತಾನು ಮಾಡುವವನೆಂಬ ಅಭಿಮಾನವನ್ನೂ ಕರ್ಮಗಳನ್ನೂ ಕರ್ಮದ ಫಲವು ಗಂಟುಬೀಳುವದನ್ನೂ ಆತ್ಮನು ಹುಟ್ಟಿಸುವದಿಲ್ಲ. ಆತ್ಮನನ್ನರಿಯದಿರುವ ಅಜ್ಞಾನವೆ ಇವಕ್ಕೆ ಕಾರಣ. ಈಶ್ವರನು ಯಾರ ಪಾಪವನ್ನೂ ಪುಣ್ಯವನ್ನೂ ತೆಗೆದುಕೊಳ್ಳುವದಿಲ್ಲ. ಜ್ಞಾನವನ್ನು ಮುಚ್ಚಿಕೊಂಡಿರುವ ತಮೋಗುಣದ ಮುಸುಕಿನಿಂದ ಪ್ರಾಣಿಗಳೆಲ್ಲ ಹೀಗೆ ತಪ್ಪು ತಿಳಿಯುತ್ತಾರೆ. (೧೧-೧೫)

ಯಾರ ತಮೋಗುಣದ ಮುಸುಕು ಆ ತಿಳಿವಿನಿಂದ ಹಾರಿಹೋಗಿದೆಯೊ ಅವರ ಆ ತಿಳಿವು ಸೂರ್ಯನಂತೆ ಪರಮಾತ್ಮನನ್ನು ಬೆಳಗುವದು. ಪರಮಾತ್ಮನಲ್ಲಿಯೇ ತಮ್ಮ ಬುದ್ಧಿಯನ್ನಿಟ್ಟು ಅವನನ್ನೇ ತಮ್ಮ ಆತ್ಮವೆಂದು ತಿಳಿದು ಅವನಲ್ಲಿಯೇ ಮುಳುಗಿರುವವರಾಗಿ ಅವನನ್ನೇ ಗತಿಯೆನ್ನುವವರು ತಮ್ಮ ತಿಳಿವಿನಿಂದ ಪಾಪಗಳನ್ನು ಕಳೆದುಕೊಂಡು ಮತ್ತೆ ಹುಟ್ಟದಿರುವ ಸ್ಥಿತಿಯನ್ನು ಪಡೆಯುತ್ತಾರೆ. ಆ ತಿಳಿವು ಉಳ್ಳವರು ವಿದ್ಯೆಯೂ ವಿನಯವೂ ಉಳ್ಳ ಬ್ರಾಹ್ಮಣನಲ್ಲಿಯೂ ಆಕಳಲ್ಲಿಯೂ ಆನೆಯಲ್ಲಿಯೂ ನಾಯಿಯಲ್ಲಿಯೂ ಹೊಲೆಯನಲ್ಲಿಯೂ ಒಬ್ಬ ಆತ್ಮನೇ ಇರುವನೆಂದು ಕಾಣುತ್ತಾರೆ. ಯಾರ ಮನಸ್ಸು ಎಲ್ಲೆಲ್ಲಿಯೂ ಒಂದೇ ರೀತಿಯಲ್ಲಿರುವ ಬ್ರಹ್ಮನಲ್ಲಿರುವದೊ ಅವರು ಇಲ್ಲಿಯೇ ಹುಟ್ಟನ್ನು ಗೆದ್ದವರಾಗುವರು. ಎಲ್ಲರಲ್ಲಿಯೂ ಏಕರೂಪವಾಗಿರುವ ಬ್ರಹ್ಮವು ಯಾವ ದೋಷವೂ ಇಲ್ಲದ್ದು. ಆದ್ದರಿಂದ ಅವರು ಬ್ರಹ್ಮಸ್ವರೂಪದಲ್ಲಿಯೇ ಇರುವವರಾಗಿದ್ದಾರೆ. (೧೬-೧೯)

ನೆಲೆಗೊಂಡ ಬುದ್ಧಿಯುಳ್ಳವನ್ನೂ ತಪ್ಪು ತಿಳಿಯದವನೂ ಬ್ರಹ್ಮವನ್ನು ತಿಳಿದವನೂ ಬ್ರಹ್ಮದಲ್ಲಿಯೇ ಮನಸ್ಸುಳ್ಳವನೂ ಆದವನು ತನಗೆ ಬೇಕೆನಿಸಿದ್ದು ದೊರೆಯಿತೆಂದು ಉಬ್ಬುವುದೂ ಇಲ್ಲ; ಬೇಡವೆನಿಸಿದ್ದು ಬಂದು ಗಂಟುಬಿತ್ತೆಂದು ತಳಮಳಿಸುವುದೂ ಇಲ್ಲ. ಹೊರಗಣ ವಿಷಯಗಳಿಗೆ ಮನಸ್ಸನ್ನು ಹಾಕದವನು ತನ್ನ ಆತ್ಮನಲ್ಲಿ ದೊರೆಯುವ ಸುಖವನ್ನು ಪಡೆಯುತ್ತಾನೆ. ಬ್ರಹ್ಮದೊಡನೆ ಸಂಬಂಧಗೊಂಡ ಮನಸ್ಸುಳ್ಳ ಅವನು ಎಂದಿಗೂ ಕಡಿಮೆಯಾಗದ ಆನಂದವನ್ನು ಪಡೆಯುತ್ತಾನೆ. ವಿಷಯಗಳ ಸಂಬಂಧದಿಂದುಂಟಾಗುವ ಸುಖಗಳೆಲ್ಲ ದುಃಖಕ್ಕೆ ಮೂಲವಾದವುಗಳೆ ಆಗಿವೆ. ಅವು ಮೊದಲೂ ಕೊನೆಯೂ ಉಳ್ಳವು. ವಿವೇಕಿಯು ಅವುಗಳಲ್ಲಿ ಪ್ರೀತಿಯನ್ನಿಡುವುದಿಲ್ಲ. ಯಾವನು ಸಾಯುವ ಮುಂಚೆಯೇ

ಬಯಕೆ, ಸಿಟ್ಟು – ಮೊದಲಾದವುಗಳ ಸೆಳೆತವನ್ನು ಈ ಲೋಕದಲ್ಲಿಯೇ ತಡೆಯಬಲ್ಲವನಾಗುತ್ತಾನೋ ಅವನು ಯೋಗಿ ಮತ್ತು ಸುಖಿ. (೨೦-೨೩)

ಯಾವನು ಒಳಗೇ ಆನಂದಗೊಳ್ಳುತ್ತ, ಒಳಗೇ ವಿನೋದಗೊಳ್ಳುತ್ತ, ಹಾಗೆಯೇ ಒಳಗಣ ಬೆಳಕಾಗಿಯೇ ಇರುವನೋ ಆ ಯೋಗಿಯು ಬ್ರಹ್ಮಸ್ವರೂಪನಾಗಿ ಬ್ರಹ್ಮರೂಪವಾದ ಮೋಕ್ಷವನ್ನು ಹೊಂದುತ್ತಾನೆ.ಪಾಪಗಳನ್ನು ಕಳೆದುಕೊಂಡವರಾಗಿಯೂ ಬ್ರಹ್ಮವಿಷಯಕವಾದ ಸ್ಫೂರ್ತಿಯುಳ್ಳವರಾಗಿಯೂ ಸಂಶಯಗಳನ್ನು ಕಳೆದುಕೊಂಡವರಾಗಿಯೂ ದೇಹವನ್ನೂ ಇಂದ್ರಿಯಗಳನ್ನೂ ಹರಿಯಗೊಡದವರಾಗಿಯೂ ಎಲ್ಲ ಪ್ರಾಣಿಗಳಿಗೂ ಅನುಕೂಲವನ್ನು ಮಾಡುವುದರಲ್ಲಿ ಆಸಕ್ತರಾಗಿಯೂ ಇರುವವರು ಬ್ರಹ್ಮರೂಪವಾದ ಮೋಕ್ಷವನ್ನು ಪಡೆಯುತ್ತಾರೆ. ಬಯಕೆಯೂ ಸಿಟ್ಟೂ ಇಲ್ಲದವರಾಗಿ ಮನಸ್ಸನ್ನು ಬಿಗಿಹಿಡಿದವರಾಗಿ ಕರ್ಮಗಳನ್ನು ಬಿಟ್ಟಿರುವವರಿಗೆ ಬದುಕಿರುವಾಗಲೂ ಸತ್ತಮೇಲೆಯೂ ಕೂಡ ಬ್ರಹ್ಮರೂಪವಾದ ಮೋಕ್ಷವು ಇದ್ದೇ ಇರುವುದು. (೨೪-೨೬)

ಹೊರಗಣ ವಿಷಯಗಳನ್ನು ಹೊರಗುಮಾಡಿ ನೋಟವನ್ನು ಹುಬ್ಬುಗಳ ನಡುವೆಯೇ ಇಟ್ಟು ಮೂಗಿನೊಳಗೆ ಓಡಾಡುವ ಉಸಿರನ್ನು ಬಿಗಿ ಹಿಡಿದು ಇಂದ್ರಿಯ, ಮನಸ್ಸು, ಬುದ್ಧಿ ಇವುಗಳನ್ನು ಹಿಡಿತದಲ್ಲಿಟ್ಟುಕೊಂಡು ಪರಮಾತ್ಮತತ್ತ್ವವನ್ನೇ ಚಿಂತಿಸುತ್ತ ಮೋಕ್ಷವೇ ಹೆಚ್ಚಿನ ಗತಿಯೆಂದು ಯಾವನು ಇರುವನೋ ಅವನು ಯಾವಾಗಲೂ ಮುಕ್ತನೆ ಆಗಿರುತ್ತಾನೆ. ಮಾಡುವವನ ರೂಪದಿಂದ ಅಥವಾ ಇಂದ್ರನೇ ಮೊದಲಾದ ದೇವತಾರೂಪದಿಂದ ನಾನು ಯಜ್ಞದ ಮತ್ತು ತಪಸ್ಸಿನ ಫಲವನ್ನುಣ್ಣುವವನೆಂದೂ ಎಲ್ಲ ಲೋಕಗಳಿಗೂ ದೊಡ್ಡ ಒಡೆಯನೆಂದು ಎಲ್ಲ ಪ್ರಾಣಿಗಳಿಗೂ ಗೆಳೆಯನೆಂದೂ ತಿಳಿದವನಿಗೆ ಶಾಂತಿಯುಂಟಾಗುತ್ತದೆ. (೨೭-೨೯)

ಅಧ್ಯಾಯ-೬

ಧ್ಯಾನದ ಬಗೆ

ಶ್ರೀ ಕೃಷ್ಣನು ಹೇಳಿದ್ದು :-

ಯಾವನು ಕರ್ಮದ ಫಲವನ್ನು ಮನಸ್ಸಿಗೆ ತಂದುಕೊಳ್ಳದೆ ತಾನು ಮಾಡಬೇಕಾದ ಕರ್ಮವನ್ನು ಮಾಡುತ್ತಾನೋ ಅವನು ಕರ್ಮವನ್ನು ಬಿಟ್ಟವನೂ ಅಹುದು; ಮಾಡುವವನೂ ಅಹುದು. ಅಗ್ನಿಹೋತ್ರ ಮೊದಲಾದ ಕರ್ಮಗಳನ್ನು ಸುಮ್ಮನೆ ಬಿಟ್ಟವನೂ ಮತ್ತು ಯಾವ ಕರ್ಮಗಳನ್ನೂ ಮಾಡದವನೂ ಆಗಿರುವ ಮನುಷ್ಯನು ಬಿಟ್ಟವನೂ ಅಲ್ಲ; ಮಾಡದವನೂ ಅಲ್ಲ. ಯಾವ ಸ್ಥಿತಿಯನ್ನು ಬಿಟ್ಟಿರುವಿಕೆಯೆಂದು ಹೇಳುತ್ತಾರೊ ಅದನ್ನು ಮಾಡುವಿಕೆಯೆಂದು ತಿಳಿ. ಫಲದ ಬಯಕೆಯನ್ನು ಬಿಡದೆ ಯಾವನೂ ಮನಸ್ಸನ್ನು ಹಿಡಿದು ನಿಲ್ಲಿಸಿಕೊಂಡವನಾಗುವುದಿಲ್ಲ. ಧ್ಯಾನವೆಂಬ ಮೆಟ್ಟಿಲನ್ನು ಹತ್ತಬೇಕೆಂಬ ಹಂಬಲು ಉಳ್ಳವನಿಗೆ ಕರ್ಮವನ್ನು ಮಾಡುವುದು ಸಾಧನ. ಧ್ಯಾನವೆಂಬ ಮೆಟ್ಟಿಲನ್ನು ಹತ್ತಿದಮೇಲೆ ಅವನು ಕರ್ಮವನ್ನು ಬಿಟ್ಟಿರುವುದು ಸಾಧನ. ಯಾವಾಗ ವಿಷಯಗಳ ಮೇಲೆಯೂ ಕರ್ಮಗಳ ಮೇಲೆಯೂ ಪ್ರೀತಿಯನ್ನು ಮಾಡುವದಿಲ್ಲವೊ ಆಗ ಅವನು ಎಲ್ಲ ಬಯಕೆಗಳನ್ನೂ ಬಿಟ್ಟವನಾಗಿ ಧ್ಯಾನದ ಮೆಟ್ಟಲನ್ನು ಹತ್ತಿದವನೆನಿಸುವನು. (೧-೪)

ತನ್ನನ್ನು ತಾನೆ ಮೇಲಕ್ಕೇರಿಸಬೇಕು; ತನ್ನನ್ನು ಜಾರಗೊಡಬಾರದು. ತಾನೆ ತನಗೆ ನಂಟ; ತಾನೆ ತನಗೆ ಹಗೆ. ಯಾವನು ತನ್ನ ಪ್ರಯತ್ನದಿಂದ ದೇಹ

ಮೊದಲಾದವುಗಳನ್ನು ಗೆಲ್ಲುವನೋ ಅವನು ತನಗೆ ತಾನೆ ನಂಟ; ಅವುಗಳನ್ನು ಗೆಲ್ಲಲಾರದವನು ತನಗೆ ತಾನೆ ಹಗೆ, ಶೀತ, ಉಷ್ಣ, ಸುಖ, ದುಃಖ, ಮಾನ, ಅಪಮಾನ–ಇವುಗಳಲ್ಲಿ ದೇಹ ಮೊದಲಾದವನ್ನು ಹಿಡಿತದಲ್ಲಿಟ್ಟು ಕೊಂಡು ತಿಳಿಮನಸ್ಸಿನವನಾಗಿರುವವನ ಒಳಗಿರುವ ಆತ್ಮನು ಆನಂದದಿಂದಿರುವನು. ಶಾಸ್ತ್ರದ ತಿಳಿವಿನಿಂದಲೂ ಅನುಭವದಿಂದಲೂ ತೃಪ್ತನಾಗಿ ಯಾವಾಗಲೂ ಒಂದೇ ರೀತಿಯಲ್ಲಿರುತ್ತಾ ಇಂದ್ರಿಯಗಳನ್ನು ಗೆದ್ದಿರುವವನು ಮಣ್ಣಿನ ಹೆಂಟೆಯನ್ನೂ ಬಂಗಾರವನ್ನೂ ಸರಿಜೋಡಿಯಾಗಿ ಕಾಣುತ್ತ ಮನಸ್ಸನ್ನು ಒಮ್ಮುಖವಾಗಿ ಮಾಡಿಕೊಂಡಿರುವನು. ಒಳ್ಳೆಯ ಮನಸ್ಸಿನವರು, ಗೆಳೆಯರು, ಹಗೆಗಳು, ಯಾವ ಪಕ್ಷವನ್ನೂ ಹಿಡಿಯದವರು, ಎರಡು ಪಕ್ಷಗಳ ಹಿತವನ್ನೂ ಬಯಸುವವರು, ಹಗೆತನಕ್ಕೆ ತಕ್ಕವರು, ನಂಟರು, ಒಳ್ಳೆಯ ಕೆಲಸಗಳನ್ನು ಮಾಡುವವರು, ಕೆಟ್ಟ ಕೆಲಸಗಳನ್ನು ಮಾಡುವವರು–ಇವರೆಲ್ಲರನ್ನೂ ಒಂದೇ ರೀತಿಯಲ್ಲಿ ಕಾಣುವವನು ಹೆಚ್ಚಿನವನು. (೫–೯)

ಧ್ಯಾನವನ್ನು ಮಾಡಬೇಕೆನ್ನುವವನು ಗುಟ್ಟಾದ ಕಡೆ ಒಂಟಿಯಾಗಿದ್ದು ದೇಹವನ್ನೂ ಮನಸ್ಸನ್ನೂ ಬಿಗಿಹಿಡಿದು ಬಯಕೆಯೂ ಉಪಕರಣಗಳೂ ಇಲ್ಲದವನಾಗಿ ಯಾವಾಗಲೂ ಮನಸ್ಸನ್ನು ಪರಮಾತ್ಮನಲ್ಲಿಟ್ಟು ಕೊಂಡಿರಬೇಕು. ಶುದ್ಧವಾದ ಕಡೆ ಹೆಚ್ಚು ಉಬ್ಬೂ ಹೆಚ್ಚು ತಗ್ಗೂ ಆಗದಂತೆ ಕೆಳಗೆ ದರ್ಭೆ, ಅದರ ಮೇಲೆ ಜಿಂಕೆಯ ಚರ್ಮ, ಅದರ ಮೇಲೆ ಬಟ್ಟೆ – ಹೀಗೆ ತಾನೆ ಉಪಯೋಗಿಸುವ ತನ್ನ ಪೀಠವನ್ನು ಚೆನ್ನಾಗಿ ಮಾಡಿಕೊಳ್ಳಬೇಕು. ಅಲ್ಲಿ ಅ ಪೀಠದ ಮೇಲೆ ಕುಳಿತು ಮನಸ್ಸಿನ ಮತ್ತು ಇಂದ್ರಿಯಗಳ ಕೆಲಸವನ್ನು ಬಿಗಿಹಿಡಿದು ಮನಸ್ಸನ್ನು ಒಮ್ಮುಖವಾಗಿ ಮಾಡಿ ಮನಸ್ಸಿನ ಶುದ್ಧಿಗಾಗಿ ಅಭ್ಯಾಸಮಾಡಬೇಕು. (೧೦–೧೨)

ಮೈ, ತಲೆ, ಕೊರಳು–ಇವು ನೆಟ್ಟಗೆ ಅಲ್ಲಾಡದೆ ನೆಲೆಯಾಗಿ ಇರಬೇಕು. ದೃಷ್ಟಿ ಮೂಗಿನ ತುದಿಯ ಕಡೆ ಇರಬೇಕು. ಯಾವ ದಿಕ್ಕನ್ನೂ ನೋಡಬಾರದು. ಮನಸ್ಸು ತಿಳಿಯಾಗಿರಬೇಕು. ಕರ್ಮಗಳನ್ನು ಬಿಟ್ಟೆನೆಂಬ ದಿಗಿಲು ಇರಬಾರದು. ಆಗ ಗುರುಸೇವೆ ಮೊದಲಾದವುಗಳನ್ನು ಮಾಡುವವನಾಗಿರಬೇಕು. ಮನಸ್ಸು ಹಿಡಿತಕ್ಕೆ ಒಳಪಟ್ಟು ಪರಮಾತ್ಮನಲ್ಲಿಯೇ ಇರಬೇಕು. ಪರಮಾತ್ಮನೇ ಹೆಚ್ಚಿನ ಗತಿಯೆಂದು ತಿಳಿದು ಧ್ಯಾನಮಾಡಬೇಕು. ಹೀಗೆ ಯಾವಾಗಲೂ ಮನಸ್ಸನ್ನು

ಬಿಗಿಹಿಡಿದು ಧ್ಯಾನ ಮಾಡುವವನು ನನ್ನಲ್ಲಿ ನೆಲೆಗೊಂಡದ್ದರಿಂದುಂಟಾದ ಹೆಚ್ಚಿನ ಮೋಕ್ಷದ ರೂಪವಾದ ಶಾಂತಿಯನ್ನು ಹೊಂದುತ್ತಾನೆ. (೧೩-೧೫)

ಅಳತೆಗೆಟ್ಟು ತಿನ್ನುವವನಿಗೂ ಎಷ್ಟು ಮಾತ್ರವೂ ಉಣ್ಣದೆ ಇರುವವನಿಗೂ ಬಹಳ-ನಿದ್ದೆ ಮಾಡುವವನಿಗೂ ಬಹಳ ಎಚ್ಚತ್ತಿರುವವನಿಗೂ ಧ್ಯಾನವು ಮೈಗೂಡುವುದಿಲ್ಲ. ಊಟ, ಓಡಾಟ, ಕೆಲಸ, ನಿದ್ದೆ, ಎಚ್ಚರ, ಇವುಗಳಲ್ಲೆಲ್ಲ ಮಿತವಾಗಿರುವವನಿಗೆ ಧ್ಯಾನವು ಅಡಚಣೆ ಇಲ್ಲದೆ ಸಾಗುವದು. ಒಮ್ಮುಖವಾದ ಮನಸ್ಸು ಆತ್ಮನಲ್ಲಿಯೇ ನೆಲೆಗೊಂಡಾಗ ಅವನು ಏನನ್ನೂ ಬಯಸದೆ ಧ್ಯಾನದಲ್ಲಿರುವವನೆನಿಸುವನು. ಧ್ಯಾನವನ್ನು ಸಾಧಿಸುವದಕ್ಕಾಗಿ ಬಿಗಿಹಿಡಿದ ಮನಸ್ಸು ಗಾಳಿ ಇಲ್ಲದ ಕಡೆಯ ದೀಪದಂತೆ ಅಲುಗದೆ ಇರುವದೆಂದು ದೊಡ್ಡವರು ಹೋಲಿಕೆಯನ್ನು ಹೇಳುವರು. ಬಿಗಿ ಹಿಡಿದ ಮನಸ್ಸು ಧ್ಯಾನದ ಅಭ್ಯಾಸದಿಂದ ಶಾಂತವಾಗಿ ನಿಂತಾಗ ಅವನು ತನ್ನ ಮನಸ್ಸಿನಲ್ಲಿ ತನ್ನ ಸ್ವರೂಪವನ್ನು ಕಂಡು ತನ್ನಲ್ಲಿ ತಾನು ಸಂತೋಷಗೊಳ್ಳುತ್ತಾನೆ. (೧೬-೨೦)

ಇಂದ್ರಿಯಗಳಿಗೆ ನಿಲುಕದೆ ಬುದ್ಧಿಗೆ ನಿಲುಕುವಂಥ ಸುಖವು ಎಂದಿಗೂ ಹೋಗತಕ್ಕದ್ದಲ್ಲ. ಅದನ್ನು ಅನುಭವಿಸುವ ಸ್ಥಿತಿಯಲ್ಲಿರುವವನು ಅಲ್ಲಿಂದ ಕದಲುವದು ಕೂಡ ಇಲ್ಲ. ಆ ಸ್ಥಿತಿಯನ್ನು ಪಡೆದ ಮೇಲೆ ಅವನು ಅದಕ್ಕಿಂತ ಹೆಚ್ಚಿನದೊಂದುಂಟೆಂದು ತಿಳಿಯುವದಿಲ್ಲ. ಆ ಸ್ಥಿತಿಯಲ್ಲಿರುವವನಿಗೆ ಎಷ್ಟು ಹೆಚ್ಚಿನ ದುಃಖವು ಬಂದರೂ ಅವನು ಅಲುಗುವದಿಲ್ಲ. ದುಃಖದ ಸೋಂಕನ್ನು ದೂರಮಾಡುವ ಆ ಸ್ಥಿತಿಯೇ ಯೋಗ, ನಿರಾಶನಾಗದೆ ಮನಸ್ಸನ್ನು ಗಟ್ಟಿ ಮಾಡಿಕೊಂಡು ಅದನ್ನು ಸಾಧಿಸಬೇಕು. ಮನಸ್ಸಿನಲ್ಲಿ ಹುಟ್ಟುವ ಬಯಕೆಗಳನ್ನೆಲ್ಲ ತೀರ ಬಿಟ್ಟು ಮನಸ್ಸಿನಿಂದಲೆ ಇಂದ್ರಿಯಗಳನ್ನೆಲ್ಲ ಚೆನ್ನಾಗಿ ಬಿಗಿಹಿಡಿದು ಇದನ್ನು ಸಾಧಿಸಿಯೇ ತೀರುತ್ತೇನೆಂಬ ಬುದ್ಧಿಯಿಂದ ಮೆಲ್ಲಮೆಲ್ಲನೆ ಮನದ ಹರಿದಾಟವನ್ನು ನಿಲ್ಲಿಸಬೇಕು. ಆ ಮನಸ್ಸನ್ನು ಆತ್ಮನಲ್ಲಿ ನಿಲ್ಲಿಸಿ ಆಮೇಲೆ ಯಾವ ಯೋಚನೆಯನ್ನೂ ಹಚ್ಚಿಕೊಳ್ಳದೆ ಇರಬೇಕು. ಆ ಮನಸ್ಸು ಅಲ್ಲಿನಿಲ್ಲದೆ ಅತ್ತಿತ್ತ ಹೊರಟಹಾಗೆಲ್ಲ ಅದನ್ನು ಹಿಮ್ಮೆಟ್ಟಿಸಿ ತಂದು ಆತ್ಮಸ್ವರೂಪವನ್ನೆ ಹಿಡಿದುಕೊಂಡಿರುವಂತೆ ಮಾಡಬೇಕು. (೨೧-೨೬)

ಮನಸ್ಸು ಶಾಂತವಾಗಿ ರಜೋಗುಣವಿಲ್ಲದ್ದಾಗಿ ಆತ್ಮಸ್ವರೂಪದಲ್ಲಿ ನಿಂತು ಪಾಪವನ್ನೆಲ್ಲ ಕಳೆದುಕೊಂಡದ್ದಾಗಿರುವವನಿಗೆ ಹೆಚ್ಚಿನ ಸುಖವು ಉಂಟಾಗುವದು.

ಪಾಪವನ್ನು ಕಳೆದುಕೊಂಡ ಯೋಗಿಯು ಹೀಗೆ ಯಾವಾಗಲೂ ಧ್ಯಾನದಲ್ಲಿದ್ದು ಆಯಾಸವಿಲ್ಲದೆ ಬ್ರಹ್ಮದೊಡನೆ ಕೂಡಿದ್ದರಿಂದಾದ ಬಹು ಹೆಚ್ಚಿನ ಸುಖವನ್ನು ಅನುಭವಿಸುವನು. ಹೀಗೆ ಧ್ಯಾನಮಾಡುವವನು ತಾನು ಎಲ್ಲ ಪ್ರಾಣಿಗಳಲ್ಲಿಯೂ ಇರುವವನೆಂದೂ ಎಲ್ಲ ಪ್ರಾಣಿಗಳೂ ತನ್ನಲ್ಲಿ ಅಡಕವಾಗಿರುವವೆಂದೂ ಎಲ್ಲರನ್ನೂ ಒಂದೇ ರೀತಿಯಲ್ಲಿ ಕಾಣುತ್ತಿರುವನು. ಯಾವನು ನನ್ನನ್ನು ಎಲ್ಲೆಲ್ಲಿಯೂ ಕಾಣುತ್ತಾನೋ ಮತ್ತು ಎಲ್ಲವನ್ನೂ ನನ್ನಲ್ಲಿ ಕಾಣುತ್ತಾನೋ ಅವನ ಭಾಗಕ್ಕೆ ನಾನು ದೂರನಲ್ಲ; ಅವನು ಕೂಡ ನನ್ನ ಭಾಗಕ್ಕೆ ದೂರನಲ್ಲ. ನನ್ನಲ್ಲಿ ಒಂದಾಗಿ ಎಲ್ಲ ಪ್ರಾಣಿಗಳಲ್ಲಿಯೂ ಇರುವ ನನ್ನನ್ನು ಭಜಿಸುವವನು ಹೇಗೆ ಹೇಗೆ ಇದ್ದರೂ ನನ್ನಲ್ಲಿರುವವನಾಗುವನು. ಸುಖದಲ್ಲಾಗಲಿ ದುಃಖದಲ್ಲಾಗಲಿ ಎಲ್ಲ ಪ್ರಾಣಿಗಳನ್ನೂ ತನ್ನಂತೆ ನೋಡುವವನು ಬಹಳ ಮೇಲಾದವನೆಂದು ನನ್ನ ಅಭಿಪ್ರಾಯ.

(೨೭-೩೨)

ಇದನ್ನೆಲ್ಲ ಕೇಳಿದ ಅರ್ಜುನನು, ಮನಸ್ಸಿನ ಸ್ವಭಾವವು ಚಂಚಲವಾದ್ದರಿಂದ ಅದು ಒಂದುಕಡೆ ನಿಲ್ಲಲಾರದೆಂದೂ ಮನಸ್ಸು ಹರಿದಾಡುವಂಥದ್ದಾಗಿಯೂ ದೇಹವನ್ನೂ ಇಂದ್ರಿಯಗಳನ್ನೂ ವಶಮಾಡಿಕೊಂಡು ಕುಣಿಸುವಂಥದ್ದಾಗಿಯೂ ಬಲಿಷ್ಠವಾದದ್ದಾಗಿಯೂ ಹಿಡಿದ ಪಟ್ಟನ್ನು ಬಿಡದಂಥದ್ದಾಗಿಯೂ ಇರುವದರಿಂದ ಗಾಳಿಯನ್ನು ಕಟ್ಟಿ ನಿಲ್ಲಿಸುವದು ಹೇಗೆ ಅಸಾಧ್ಯವೊ ಹಾಗೆ ಅದನ್ನು ಬಿಗಿಹಿಡಿಯುವದು ತೀರ ಅಸಾಧ್ಯವೆಂದೂ ತನ್ನ ಸಂಶಯವನ್ನು ಕೃಷ್ಣನ ಮುಂದಿಟ್ಟನು. ಮನಸ್ಸು ತಡೆಯುವದಕ್ಕೆ ಆಗದೆಂಬ ಮತ್ತು ಹರಿದಾಟದ್ದೆಂಬ ಮಾತು ನಿಜವಾದರೂ ಪ್ರಯತ್ನದಿಂದಲೂ ವೈರಾಗ್ಯದಿಂದಲೂ ಅದನ್ನು ಬಿಗಿ ಹಿಡಿಯಬಹುದೆಂದೂ ಬಿಗಿಹಿಡಿಯಲಾರದವನಿಗೆ ಧ್ಯಾನವು ದಕ್ಕುವ ಮಾತಲ್ಲವೆಂದೂ ಪ್ರಯತ್ನಮಾಡಿದರೆ ಉಪಾಯದಿಂದ ಅದನ್ನು ಬಿಗಿಹಿಡಿಯಲಾಗುವದೆಂದೂ ಕೃಷ್ಣನು ಅರ್ಜುನನಿಗೆ ಸಮಾಧಾನವನ್ನು ಹೇಳಿದನು. ಆಗ ಅರ್ಜುನನು ಇನ್ನೊಂದು ಸಂಶಯವನ್ನು ತೆಗೆದದ್ದೇನೆಂದರೆ: ಕೃಷ್ಣ, ಶಾಸ್ತ್ರದಲ್ಲಿಯೂ ಗುರುವಿನಲ್ಲಿಯೂ ಶ್ರದ್ಧೆಯುಳ್ಳ ಒಬ್ಬನು ಸಾಧಿಸಲಾರದೆ ಧ್ಯಾನದಿಂದ ಜಾರಿದರೆ ಅವನಿಗೆ ಧ್ಯಾನದ ಸಿದ್ಧಿಯಂತು ಆಗುವದಿಲ್ಲವಷ್ಟೆ. ಅವನಿಗೆ ಮುಂದಿನ ಗತಿ ಏನು? ಕರ್ಮವನ್ನು ಬಿಟ್ಟು ಬ್ರಹ್ಮವನ್ನು ಪಡೆಯವದಕ್ಕಾಗಿ ಹೊರಟ ಅವನು ಅದರಲ್ಲಿಯೂ ಕೊನೆಮುಟ್ಟದೆ ಚೂರು ಚೂರಾಗುವ ಮೋಡದಂತೆ ಹಾಳಾಗಿ ಹೋಗುತಾನೋ ಹೇಗೆ? ಈ ಸಂಶಯವನ್ನೆಲ್ಲ ನೀನು ಕಳೆಯಬೇಕು. ಇದನ್ನು ಕಳೆಯುವವರು ನಿನ್ನ ಹೊರತು ಬೇರೆ ಯಾರೂ ಇಲ್ಲ. (೩೩-೩೯)

ಇದಕ್ಕೆ ಕೃಷ್ಣನ ಉತ್ತರವೇನೆಂದರೆ :-

ಅರ್ಜುನ, ಅವನಿಗೆ ಈ ಲೋಕದಲ್ಲಾಗಲಿ ಪರಲೋಕದಲ್ಲಾಗಲಿ ನಾಶವೆಂಬುದಿಲ್ಲ. ಏಕೆಂದರೆ: ಒಳ್ಳೆಯದನ್ನು ಮಾಡಿದ ಯಾರಿಗೂ ಕೆಟ್ಟಗತಿಯಾಗುವದಿಲ್ಲ. ಧ್ಯಾನವನ್ನು ಅಭ್ಯಾಸಮಾಡುತ್ತ ಕೊನೆಮುಟ್ಟದೆ ಸತ್ತವನು ದೊಡ್ಡಪುಣ್ಯಗಳನ್ನು ಮಾಡಿದವರು ಪಡೆಯುವ ಲೋಕಗಳನ್ನು ಪಡೆದು ಅಲ್ಲಿ ಬಹುವರ್ಷಗಳಿದ್ದು ಧರ್ಮಶ್ರದ್ಧೆಯುಳ್ಳ ಭಾಗ್ಯವಂತರ ಮನೆಯಲ್ಲಿ ಹುಟ್ಟುತ್ತಾನೆ; ಅಥವಾ ಬುದ್ಧಿಶಾಲಿಗಳಾಗಿ ಧ್ಯಾನವನ್ನು ಮಾಡಿಕೊಂಡಿರುವವರ ಕುಲದಲ್ಲಿ ಹುಟ್ಟುತ್ತಾನೆ. ಜಗತ್ತಿನಲ್ಲಿ ಈ ಬಗೆಯ ಹುಟ್ಟು ದೊರೆಯುವದು ಬಹು ಕಡಿಮೆ. ಅವನಿಗೆ ಅಲ್ಲಿ ಹಿಂದಿನ ಜನ್ಮದ ಬುದ್ಧಿಯೇ ಉಂಟಾಗುತ್ತದೆ. ಅವನು ಅಲ್ಲಿ ತನ್ನ ಪ್ರಯತ್ನವನ್ನು ಮುಂದುವರಿಸುತ್ತಾನೆ. ಅವನು ತನಗರಿವಿಲ್ಲದೆ ತನ್ನ ಹಿಂದಿನ ಜನ್ಮದ ಅಭ್ಯಾಸದ ಕಡೆಗೆ ಕೊಚ್ಚಿಕೊಂಡು ಹೋಗುತ್ತಾನೆ. ಧ್ಯಾನದ ಸ್ವರೂಪವನ್ನು ತಿಳಿಯಬೇಕೆನ್ನುವವನು ಕೂಡ ಎಲ್ಲ ಕರ್ಮಗಳ ಫಲಕ್ಕಿಂತ ಮುಂದೆ ಹೋಗಿರುತ್ತಾನೆ. (೪೦-೪೪)

ಪ್ರಯತ್ನದಿಂದ ಧ್ಯಾನದಲ್ಲಿ ಮುಂದಾದವನ ಪಾಪಗಳೆಲ್ಲ ಅಳಿದುಹೋಗುತ್ತವೆ. ಅವನು ಹಿಂದಿನ ಜನ್ಮಗಳ ಒಳ್ಳೆಯ ಸಂಸ್ಕಾರಗಳ ಬಲವನ್ನು ಹೊಂದಿ ಮೋಕ್ಷವನ್ನು ಹೊಂದುತ್ತಾನೆ. ಉಪವಾಸ ಮೊದಲಾದದ್ದನ್ನು ಮಾಡುವವರಿಗಿಂತ ಧ್ಯಾನ ಮಾಡುವವನು ಮೇಲು. ಆವನು ಬರೀ ಶಬ್ದಾರ್ಥಗಳನ್ನು ತಿಳಿದವರಿಗಿಂತ ಕೂಡ ಮೇಲು ಮತ್ತು ಕರ್ಮಠರಿಗಿಂತ ಕೂಡ ಹೆಚ್ಚಿನವನು. ಆದ್ದರಿಂದ ಅರ್ಜುನ, ನೀನು ಧ್ಯಾನದ ಅಭ್ಯಾಸವನ್ನು ಮಾಡು. ಧ್ಯಾನವನ್ನು ಮಾಡುವವರೆಲ್ಲ ನನ್ನಲ್ಲಿ ಮನಸ್ಸಿಟ್ಟು ನನ್ನನ್ನು ಪರಮೇಶ್ವರನೆಂದು ನಂಬಿ ಧ್ಯಾನಿಸುವವನು ಬಹಳ ದೊಡ್ಡವನೆಂದು ನನ್ನ ಅಭಿಪ್ರಾಯ. (೪೫-೪೭)

ಅಧ್ಯಾಯ–೭

ಭಗವತ್ಸ್ವರೂಪದ ಅನುಭವ

ಕೃಷ್ಣನು ಇನ್ನೂ ಹೇಳಿದ್ದೇನೆಂದರೆ–

ಅರ್ಜುನ, ನನ್ನಲ್ಲಿ ಆಸಕ್ತಿಯುಳ್ಳ ಮನಸ್ಸಿನವನಾಗಿ ನನ್ನನ್ನೇ ಶರಣೆಂದು ಧ್ಯಾನವನ್ನು ಮುಂದುವರಿಸಿದರೆ ನೀನು ಯಾವ ಸಂಶಯವೂ ಇಲ್ಲದಂತೆ ನನ್ನನ್ನು ಪೂರ್ಣವಾಗಿ ಹೇಗೆ ತಿಳಿಯುತ್ತೀಯೆಂಬುದನ್ನು ಹೇಳುತ್ತೇನೆ; ಕೇಳು. ಅನುಭವದಿಂದ ಕೂಡಿದ ಈ ತಿಳಿವಳಿಕೆಯನ್ನು ನಾನು ನಿನಗೆ ಪೂರ್ತಿಯಾಗಿ ಹೇಳುತ್ತೇನೆ. ಇದನ್ನು ತಿಳಿದರೆ ಈ ಜಗತ್ತಿನಲ್ಲಿ ತಿಳಿಯತಕ್ಕದ್ದೆಂಬ ಇನ್ನೊಂದು ಯಾವುದೂ ಉಳಿಯುವುದಿಲ್ಲ. ಮನುಷ್ಯರಲ್ಲಿ ಸಾವಿರದಲ್ಲಿ ಯಾವನೋ ಒಬ್ಬನು ಇದನ್ನು ಪಡೆಯುವ ಯತ್ನವನ್ನು ಮಾಡುತ್ತಾನೆ. ಹಾಗೆ ಯತ್ನವನ್ನು ಮಾಡುವ ಹೆಚ್ಚುಗಾರಿಕೆಯವರಲ್ಲಿಯೂ ಯಾವನೋ ಒಬ್ಬನು ತನ್ನ ನಿಜಸ್ಥಿತಿಯನ್ನು ತಿಳಿಯುತ್ತಾನೆ. (೧–೩)

ನೆಲ, ನೀರು, ಬೆಂಕಿ, ಗಾಳಿ, ಆಕಾಶ, ಮನಸ್ಸು, ಬುದ್ಧಿ, ಅಹಂಕಾರ – ಹೀಗೆ ನನ್ನ ಮಾಯಾಶಕ್ತಿಯು ಎಂಟು ಬಗೆಯಾಗಿರುವದು. ನನ್ನ ಮಾಯಾಶಕ್ತಿಯಲ್ಲಿ ಇದಕ್ಕಿಂತ ಹೆಚ್ಚಿನದಿನ್ನೊಂದಿದೆ. ಅದು ಈ ಜಗತ್ತನ್ನು ಹಿಡಿದುನಿಲ್ಲಿಸಿ ಕೊಂಡಿರುವ ಜೀವರೂಪವು. ಜಗತ್ತಿನಲ್ಲಿರುವುದೆಲ್ಲ ಈ ಎರಡರಿಂದ ಎದ್ದುಕೊಂಡಿರುವದು. ಎಲ್ಲಾ ಜಗತ್ತೂ ನನ್ನಲ್ಲಿ ಹುಟ್ಟುವದು, ನನ್ನಲ್ಲಿ ಅಡಗುವದು. ನನ್ನ

ಹೊರತು ಇನ್ನೊಂದೆಂಬುದೆಷ್ಟು ಮಾತ್ರವೂ ಇಲ್ಲ. ದಾರದಲ್ಲಿ ಮಣಿಗಳು ಪೋಣಿಸಿದವುಗಳಾಗಿರುವಂತೆ ನನ್ನಲ್ಲಿ ಈ ಜಗತ್ತೆಲ್ಲ ಪೋಣಿಸಲಾಗಿರುವದು. (೪-೭)

ನಾನು ನೀರಿನಲ್ಲಿ ರಸವು: ಚಂದ್ರ ಸೂರ್ಯರಲ್ಲಿ ಪ್ರಭೆಯು; ವೇದಗಳಲ್ಲೆಲ್ಲ ಓಂಕಾರವು; ಆಕಾಶದಲ್ಲಿ ಸದ್ದು; ಪುರುಷರಲ್ಲಿ ಉದ್ಯೋಗವು; ಭೂಮಿಯಲ್ಲಿ ಒಳ್ಳೆಯ ವಾಸನೆಯು; ಅಗ್ನಿಯಲ್ಲಿ ಬೆಳಕು; ಎಲ್ಲ ಪ್ರಾಣಿಗಳಲ್ಲಿಯೂ ಬದುಕಿರುವ ಶಕ್ತಿ ಮತ್ತು ತಪಸ್ಸನ್ನು ಮಾಡುವವರ ತಪಸ್ಸು. ನಾನು ಬಹುಕಾಲದಿಂದ ಇರುವ ಎಲ್ಲ ವಸ್ತುಗಳ ಬೀಜ. ನಾನು ಬುದ್ಧಿವಂತರ ವಿವೇಕ ಶಕ್ತಿ. ನಾನು ಆತ್ಮಶಕ್ತಿಯುಳ್ಳವರ ಆತ್ಮಶಕ್ತಿ, ಸಾಮರ್ಥ್ಯವಂತರಲ್ಲಿ ಬಯಕೆಯೂ ಅತಿ ಪ್ರೀತಿಯೂ ಇಲ್ಲದ ಸಾಮರ್ಥ್ಯವು ನಾನು. ಜನರಲ್ಲಿ ಧರ್ಮಕ್ಕೆ ವಿರುದ್ಧವಲ್ಲದ ಬಯಕೆಯು ನಾನು. ಹೀಗೆ ಜಗತ್ತಿನಲ್ಲಿ ಸಾತ್ತ್ವಿಕವಾದ, ರಾಜಸವಾದ ಮತ್ತು ತಾಮಸವಾದವು ಏನೇನಿವೆಯೊ ಅವೆಲ್ಲ ನನ್ನಿಂದಲೆ ಹೊರಬಿದ್ದವುಗಳು ನಾನು ಅವುಗಳೊಳಗೆ ಅಡಕವಾಗಿಲ್ಲ; ಅವು ನನ್ನ ಬಲದ ಮೇಲೆ ಇವೆ. (೮-೧೨)

ಈ ಎಲ್ಲ ಜಗತ್ತೂ ಈ ಮೂರು ಬಗೆಯ ಗುಣಗಳಿಂದಾದ ಹರ್ಷ, ದರ್ಪ - ಮೊದಲಾದಭಾವಗಳಿಂದಮರುಳಾಗಿ ಹೋಗಿದೆ. ಆದ್ದರಿಂದ ನಾನು ಈ ಎಲ್ಲಕ್ಕಿಂತ ಬೇರೆ ಹೆಚ್ಚಿನವನಾಗಿ ನಾಶವಾಗದವನಾಗಿದ್ದೇನೆ. ನನ್ನನ್ನು ಯಾರೂ ಚೆನ್ನಾಗಿ ತಿಳಿಯರು. ನನ್ನ ಮಾಯಾಶಕ್ತಿಯು ದೈವಿಕವಾದದ್ದು ಮತ್ತು ಮೂರು ಗುಣಗಳಿಂದ ಕೂಡಿದ್ದು. ಅದನ್ನು ಯಾರೂ ದಾಟುವದಕ್ಕಾಗುವದಿಲ್ಲ. ನನಗೇ ಯಾರು ಶರಣು ಬರುತ್ತಾರೊ ಅವರು ಈ ಮಾಯೆಯನ್ನು ದಾಟುತ್ತಾರೆ. ಮಾಯೆಗೆ ತಮ್ಮ ಜ್ಞಾನವನ್ನು ಸೂರೆಗೊಟ್ಟು ಕಳೆದುಕೊಂಡವರಾಗಿ ಅಸುರರ ಸ್ವಭಾವವಾದ ಡಂಭ. ದರ್ಪ ಮೊದಲಾದವುಗಳನ್ನು ಅವಲಂಬಿಸಿ ತಪ್ಪು ತಿಳಿಯುತ್ತಾ ಪಾಪವನ್ನು ಮಾಡುವ ಕೀಳು ಜನರು ನನಗೆ ಶರಣು ಬರುವುದಿಲ್ಲ. ಪುಣ್ಯಶಾಲಿಗಳಲ್ಲಿ ರೋಗಿಯೂ ನನ್ನನ್ನು ತಿಳಿಯಬೇಕೆನ್ನುವವನೂ ಸುಖಸಾಧನಗಳನ್ನು ಬಯಸುವವನೂ ನನ್ನನ್ನು ತಿಳಿದವನೂ ಈ ನಾಲ್ವರು ನನ್ನನ್ನು ಭಜಿಸುತ್ತಾರೆ. ಅವರಲ್ಲಿ ಯಾವಾಗಲೂ ನನ್ನನ್ನೇ ಹೊಂದಿಕೊಂಡು ನನ್ನನ್ನೇ ಪ್ರೀತಿಸುತ್ತ ನನ್ನನ್ನು ತಿಳಿದಿರುವವನು ಹೆಚ್ಚಿನವನು. ಏಕೆಂದರೆ : ನಾನು ಆ ತಿಳಿದವನಿಗೆ ಬಹಳ ಬೇಕಾದವನು; ಅವನು ನನಗೂ ಬೇಕಾದವನು. ಈ

ಎಲ್ಲರೂ ಮೇಲಾದವರೆ. ಅದರೂ ತಿಳಿದವನು ನನ್ನ ಸ್ವರೂಪವೇ ಎಂದು ನನ್ನ ಅಭಿಪ್ರಾಯ. ಏಕೆಂದರೆ; ಅವನು ಮನಸ್ಸನ್ನು ಒಂದೇ ರೀತಿಯಲ್ಲಿಟ್ಟುಕೊಂಡು ಬಹು ಮೇಲಾದ ಗತಿಯ ರೂಪವಾದ ನನ್ನನ್ನು ಪಡೆದೇ ಇರುವನು.

(೧೩-೧೮)

ಅನೇಕ ಜನ್ಮಗಳಲ್ಲಿ ನನ್ನನ್ನು ಅರಿಯುವ ಯತ್ನವನ್ನು ಮಾಡಿ ಕೊನೆಗೆ ಎಲ್ಲವೂ ಶ್ರೀಮನ್ನಾರಾಯಣನೆಂದು ತಿಳಿದವನು ನನ್ನನ್ನು ಪಡೆಯುವನು. ಆ ದೊಡ್ಡ ಮನಸ್ಸಿನವನು ಬಹು ಕಡಿಮೆ. ಬೇರೆ ಬೇರೆ ಬಯಕೆಗಳಿಂದ ವಿವೇಕವನ್ನು ಹಾಳುಮಾಡಿಕೊಂಡು ತಮ್ಮ ತಮ್ಮ ಹುಟ್ಟು ಗುಣಕ್ಕೆ ಒಳಗಾದವರಾಗಿ ಬೇರೆಬೇರೆ ನಿಯಮಗಳನ್ನು ಹಿಡಿದು ಬೇರೆ ಬೇರೆ ದೇವತೆಗಳಿಗೆ ಶರಣು ಹೋಗುತ್ತಾರೆ. ಯಾವಯಾವನು ಯಾವ ಯಾವ ದೇವತೆಯನ್ನು ಪ್ರೀತಿಯಿಂದ ಪೂಜಿಸಬೇಕೆಂದು ಹೋಗುತ್ತಾನೋ ಅವನವನಿಗೆ ನಾನು ಆಯಾ ದೇವತೆಯ ಮೇಲಿನ ವಿಶ್ವಾಸವನ್ನೇ ಉಂಟುಮಾಡುವೆನು. ಅವನು ಆ ವಿಶ್ವಾಸದಿಂದ ಕೂಡಿ ಆ ದೇವತೆಯನ್ನು ಪೂಜೆ ಮಾಡುತ್ತಾನೆ. ಅದಕ್ಕೆ ನಾನೆ ಗೊತ್ತು ಮಾಡಿರುವಂತೆ ಆ ದೇವತೆಯಿಂದ ಅವನು ತನ್ನ ಬಯಕೆಯ ಫಲವನ್ನು ಪಡೆದೂ ಪಡೆಯುತ್ತಾನೆ. ದಡ್ಡರಾದ ಅವರಿಗೆ ದೊರೆಯುವ ಆ ಫಲವು ನಾಶವಾಗುವಂಥದ್ದು. ದೇವತೆಗಳನ್ನು ಪೂಜಿಸುವವರು ದೇವತೆಗಳನ್ನು ಪಡೆಯುತ್ತಾರೆ; ನನ್ನ ಭಕ್ತರು ನನ್ನ ಸ್ವರೂಪವನ್ನು ಪಡೆಯುತ್ತಾರೆ. (೧೯-೨೩)

ನಾನು ಕಣ್ಣಿಗೆ ಕಾಣುವವನಲ್ಲ ಮತ್ತು ನಾಶವಾಗುವವನಲ್ಲ. ನಾನು ಇಂಥ ಶ್ರೇಷ್ಠವಾದ ಪರಮಾತ್ಮ ಸ್ವರೂಪನೆಂದು ತಿಳಿಯದ ದಡ್ಡರು ನನ್ನನ್ನು ಕಣ್ಣಿಗೆ ಕಾಣುವ ರೂಪದವನೆಂದು ತಿಳಿಯುತ್ತಾರೆ. ಮೂರು ಗುಣಗಳ ಸೇರಿಕೆಯ ರೂಪವಾದ ಮಾಯೆಯು ನನ್ನನ್ನು ಮರೆಮಾಡಿದೆ. ಆದ್ದರಿಂದ ಯಾರೂ ನನ್ನನ್ನು ಕಾಣರು. ಹುಟ್ಟೂ ಸಾವೂ ಇಲ್ಲದ ನನ್ನನ್ನು ಈ ಲೋಕದ ದಡ್ಡರು ಚೆನ್ನಾಗಿ ತಿಳಿಯಲಾರರು. ನಾನು ಹಿಂದಿನ, ಈಗಿನ ಮತ್ತು ಮುಂದಿನ ಎಲ್ಲ ಪ್ರಾಣಿಗಳನ್ನೂ ತಿಳಿದಿದ್ದೇನೆ. ನನ್ನನ್ನು ಯಾರೂ ಅರಿಯರು. ಎಲ್ಲ ಪ್ರಾಣಿಗಳೂ ಹುಟ್ಟುವಾಗಲೇ ಬೇಕು, ಬೇಡ-ಎಂಬ ಭಾವನೆಗಳಿಂದ ಹುಟ್ಟಿದ ಸುಖ, ದುಃಖ-ಎಂಬ ಬೇಡಿಗಳಿಗೊಳಗಾಗಿ ಮುಂದುಗಾಣದವರಾಗಿರುತ್ತಾರೆ.ಪುಣ್ಯಗಳನ್ನು ಮಾಡಿ ಪಾಪಗಳನ್ನು ಕಳೆದುಕೊಂಡವರು ಆ ಬೇಡಿಗಳನ್ನು ಕಳಚಿಕೊಂಡು

ಕಟ್ಟುನಿಟ್ಟಾದ ವ್ರತವನ್ನು ಹಿಡಿದು ನನ್ನನ್ನು ಭಜಿಸುತ್ತಾರೆ. ಮುಪ್ಪನ್ನೂ ಸಾವನ್ನೂ ಬಿಡಿಸಿಕೊಳ್ಳಬೇಕೆಂದು ನನಗೆ ಶರಣು ಬಂದು ಯತ್ನವನ್ನು ಮಾಡುವವರು ಆ ಪರಬ್ರಹ್ಮ ಸ್ವರೂಪವನ್ನೂ ಈ ದೇಹದಲ್ಲಿರುವ ಆತ್ಮನ ವಿಷಯವನ್ನೂ ಎಲ್ಲ ಕರ್ಮಗಳನ್ನೂ ಚೆನ್ನಾಗಿ ತಿಳಿಯುವರು. ನನ್ನನ್ನು ಅಧಿಭೂತ, ಅಧಿದೈವ, ಅಧಿಯಜ್ಞ-ಇವುಗಳಿಂದ ಕೂಡಿದವನೆಂದು ತಿಳಿದು ನನ್ನಲ್ಲಿ ಮನಸ್ಸಿಟ್ಟವರು ಸಾಯುವಾಗಲೂ ನನ್ನನ್ನೆ ತಿಳಿಯುತ್ತಾರೆ. (೨೯-೩೦)

ಅಧ್ಯಾಯ-೮

ಓಂಕಾರದ ಧ್ಯಾನ

ಆಗ ಅರ್ಜುನನು ಕೃಷ್ಣನನ್ನು ಕುರಿತು, "ಕೃಷ್ಣ, ಆ ಬ್ರಹ್ಮವೆಂಬುದು ಯಾವದು? ದೇಹದಲ್ಲಿರುವ ಆತ್ಮನು ಯಾರು? ಕರ್ಮವು ಯಾವದು? ಆಧಿಭೂತವು ಯಾವದು? ಅಧಿದೈವವೆಂದು ಯಾವದಕ್ಕೆ ಹೆಸರು? ಈ ದೇಹದಿಂದ ನಡೆಯುವ ಯಜ್ಞಗಳ ಅಭಿಮಾನಿದೇವತೆ ಯಾರು? ಮನಸ್ಸನ್ನು ಬಿಗಿಹಿಡಿದವರು ಸಾಯುವಾಗ ನಿನ್ನನ್ನು ಹೇಗೆ ತಿಳಿಯಲಾಗುವದು? ಎಂದು ಕೇಳಿದನು. (೧-೨)

ಶ್ರೀ ಕೃಷ್ಣನು ಹೇಳಿದ್ದು :-

ನಾಶವಿಲ್ಲದ್ದು ಪರಬ್ರಹ್ಮ. ಅವನೆ ಈ ದೇಹದ ಆತ್ಮ. ಎಲ್ಲ ಪ್ರಾಣಿಗಳ ಹುಟ್ಟುವಿಕೆಗೆ ಕಾರಣವಾದ ಹೋಮ ಮೊದಲಾದವು ಕರ್ಮ, ನಾಶವಾಗುವ ವಸ್ತುಗಳೆಲ್ಲ ಪ್ರಾಣಿಗಳಿಗಾಗಿ ಹುಟ್ಟಿದವುಗಳಾದ್ದರಿಂದ ಅಧಿಭೂತ. ಸೂರ್ಯ ಬಿಂಬದಲ್ಲಿರುವ ಹಿರಣ್ಯಗರ್ಭನೆಂಬ ಪುರುಷನು ಅಧಿದೈವ. ಈ ದೇಹದಿಂದ ನಡೆಯುವ ಯಜ್ಞದ ಅಭಿಮಾನಿ ದೇವತೆಯು ನಾನೆ. ಸಾಯುವಾಗ ನನ್ನನ್ನೆ ನೆನೆಯುತ್ತ ದೇಹವನ್ನು ಬಿಟ್ಟವನು ನನ್ನ ಸ್ವರೂಪವನ್ನು ಪಡೆಯುತ್ತಾನೆ. ಈ ವಿಷಯದಲ್ಲಿ ಸಂದೇಹವಿಲ್ಲ. (೩-೫)

ಎಡೆಬಿಡದೆ ನೆನೆಯುತ್ತಿದ್ದ ಸಂಸ್ಕಾರದಬಲದಿಂದ ಸಾಯುವಾಗ ಯಾವ ಯಾವ ಸ್ವರೂಪವನ್ನು ನೆನೆಯುತ್ತ ದೇಹವನ್ನು ಬಿಡುತ್ತಾನೋ ಆವನು

ಆಯಾ ದೇವತೆಯನ್ನೇ ಪಡೆಯುತ್ತಾನೆ. ಆದ್ದರಿಂದ ಯಾವಾಗಲೂ ನನ್ನನ್ನು ನೆನೆ; ಯುದ್ಧವನ್ನೂ ಮಾಡು. ನೀನು ಮನಸ್ಸನ್ನೂ ಬುದ್ಧಿಯನ್ನೂ ನನಗೆ ಒಪ್ಪಿಸಿದರೆ ನನ್ನನ್ನೆ ಪಡೆಯುತ್ತಿ. ಈ ಮಾತಿಗೆರಡಿಲ್ಲ. ಇನ್ನೊಂದನ್ನು ಹಚ್ಚಿಕೊಳ್ಳದೆ ನನ್ನಲ್ಲಿಯೇ ಮನಸ್ಸಿಡುವ ಅಭ್ಯಾಸದವನಾಗಿ ನನ್ನನ್ನು ನೆನೆಯುವವನು ಸೂರ್ಯ ಮಂಡಲದಲ್ಲಿರುವ ಪುರುಷನನ್ನು ಹೊಂದುತ್ತಾನೆ. ಆ ಪುರುಷನು ಎಲ್ಲವನ್ನೂ ತಿಳಿದಿರುವವನು, ಬಹು ಹಿಂದಿನವನು, ಜಗತ್ತನ್ನೆಲ್ಲ ಆಳುವವನು, ಬಹುಸೂಕ್ಷ್ಮನಾದವನು, ಎಲ್ಲರಿಗೂ ಫಲಗಳನ್ನು ಹಂಚುವವನು, ಮನಸ್ಸಿಗೆ ನಿಲುಕದ ರೂಪವುಳ್ಳವನು, ಸೂರ್ಯನಂತೆ ಬೆಳಗುವವನು ಮತ್ತು ಅಜ್ಞಾನವೆಂಬ ಕತ್ತಲೆಯ ಆಚೆಯವನು. ಆವನನ್ನು ನೆನೆಯುವವನು ಸಾಯುವಾಗ ಮನಸ್ಸನ್ನು ಕದಲಗೊಡದವನಾಗಿ ಪ್ರೇಮದಿಂದಲೂ ಮನಸ್ಸನ್ನು ಬಿಗಿಹಿಡಿದ ಬಲದಿಂದಲೂ ಎರಡು ಹುಬ್ಬುಗಳ ನಡುವೆ ಪ್ರಾಣವಾಯುವನ್ನು ಚೆನ್ನಾಗಿ ನಿಲ್ಲಿಸಿ ಆ ದಿವ್ಯನಾದ ಪರಮ ಪುರುಷನನ್ನು ಪಡೆಯುತ್ತಾನೆ. (೬-೧೦)

ವೇದಗಳನ್ನರಿತವರು ಅವನಿಗೆ ನಾಶವಿಲ್ಲವೆನ್ನುವರು. ಬೇಕುಬೇಡೆಂಬುದನ್ನು ಬಿಟ್ಟು ಸಾಧಿಸುವವರು ಅವನನ್ನು ಸೇರುತ್ತಾರೆ. ಅವನನ್ನು ಬಯಸುವವರು ಗುರುಸೇವೆ ಮೊದಲಾದವುಗಳನ್ನು ಮಾಡುತ್ತಾರೆ. ಆವನ ವಿಷಯವನ್ನು ನಿನಗೆ ಸೂಕ್ಷ್ಮವಾಗಿ ಹೇಳುತ್ತೇನೆ. ಸಾಯುವಾಗ ದೇಹದ ಎಲ್ಲ ಬಾಗಿಲುಗಳನ್ನೂ ಹಿಡಿತದಲ್ಲಿಟ್ಟುಕೊಳ್ಳಬೇಕು; ಮನಸ್ಸನ್ನು ಹೃದಯದಲ್ಲಿ ತಡೆದು ನಿಲ್ಲಿಸಬೇಕು; ಪ್ರಾಣವಾಯುವನ್ನು ನಡುನೆತ್ತಿಗೇರಿಸಬೇಕು; ಬ್ರಹ್ಮದ ಹೆಸರಾದ ಓಂ ಎಂಬುದನ್ನು ಬಾಯಲ್ಲಿ ಹೇಳಬೇಕು; ನನ್ನನ್ನು ಮನಸ್ಸಿನಲ್ಲಿ ನೆನೆಯಬೇಕು-ಹೀಗೆ ದೇಹವನ್ನು ಬಿಟ್ಟವನು ಬಹು ಹೆಚ್ಚಿನ ಗತಿಯನ್ನು ಹೊಂದುತ್ತಾನೆ ಇನ್ನೊಂದು ಕಡೆ ಮನಸ್ಸನ್ನು ಹಾಕದೆ ಯಾವಾಗಲೂ ಎಡೆಬಿಡದೆ ನನ್ನನ್ನು ನೆನೆಯುವವನಿಗೆ ನಾನು ಅನಾಯಾಸವಾಗಿ ಕೈಸೇರುವೆನು. ನನ್ನನ್ನು ಸೇರಿದ ಮೇಲೆ ಆವರು ಬಹು ಹೆಚ್ಚಿನ ಮೋಕ್ಷವನ್ನು ಪಡೆದವರಾಗುವರು. ದುಃಖಗಳ ತೌರುಮನೆಯೂ ಮೂರು ದಿನದ ಬಾಳೂ ಆದ ಹುಟ್ಟನ್ನು ಆ ದೊಡ್ಡ ಮನಸ್ಸಿನವರು ಮತ್ತೆ ಪಡೆಯುವದಿಲ್ಲ. ಬ್ರಹ್ಮಲೋಕವನ್ನು ಮೊದಲು ಮಾಡಿಕೊಂಡು ಯಾವ ಲೋಕಕ್ಕೆ ಹೋದರೂ ಮತ್ತೆ ಹುಟ್ಟುವುದು ತಪ್ಪಿದ್ದಲ್ಲ. ನನ್ನನ್ನು ಪಡೆದರೆ ಮತ್ತೆ ಹುಟ್ಟುವಿಕೆ ಇಲ್ಲ. (೧೧-೧೬)

ಕಾಲ ಪರಿಮಾಣವನ್ನರಿತವರು ಬ್ರಹ್ಮನಿಗೆ ನಮ್ಮ ಸಾವಿರ ಯುಗಗಳು ಒಂದು ಹಗಲೆಂದು ಸಾವಿರ ಯುಗಗಳು ಒಂದು ಇರುಳೆಂದೂ ತಿಳಿಯುವರು. ಬ್ರಹ್ಮನಿಗೆ ಹಗಲು ಬರುವಾಗ ಅವನ ನಿದ್ರೆಯ ಸ್ಥಿತಿಯಿಂದ ಈ ಕಾಣಬರುವವುಗಳೆಲ್ಲ ಹುಟ್ಟುತ್ತವೆ. ಅವನಿಗೆ ಇರುಳಾದಾಗ ಅವು ಅವನ ನಿದ್ರಾವಸ್ಥೆಯಲ್ಲಿಯೇ ಅಡಗುತ್ತವೆ. ಹಿಂದಿನ ಕಲ್ಪದಲ್ಲಿದ್ದ ಈ ಕದಲುವವುಗಳೂ ಮತ್ತು ಕದಲದವುಗಳೂ ಹಗಲಾಗುತ್ತಲೆ ಹುಟ್ಟಿಹುಟ್ಟಿ ಇರುಳಾಗುತ್ತಲೆ ತಮಗರಿವಿಲ್ಲದೆ ಅಡಗುತ್ತವೆ. ಈ ಸೂಕ್ಷ್ಮವಾದ ಜಗತ್ತಿನ ಬೀಜಕ್ಕಿಂತ ಪರಬ್ರಹ್ಮನು ಬೇರೆಯಾಗಿರುವನು. ಅವನು ಇಂದ್ರಿಯಗಳಿಗೆ ಕಾಣಬರುವವನಲ್ಲ. ಅವನು ಬಹು ಹಿಂದಿನಿಂದ ಇರುವವನು. ಎಲ್ಲಕ್ಕೂ ನಾಶವಾದರೂ ಅವನಿಗೆ ನಾಶವಿಲ್ಲ. ಅವನೆ ಹೆಚ್ಚಿನ ಗತಿ. ಅವನನ್ನು ಪಡೆದರೆ ಮತ್ತೆ ಹುಟ್ಟು ಸಾವುಗಳಿಗೆ ಹಿಂದಿರುಗುವುದಿಲ್ಲ. ಅದೇ ನನ್ನ ಮುಖ್ಯಸ್ಥಾನ. ಆ ಪರಬ್ರಹ್ಮನಿಗೆ 'ನೀನೇ ಗತಿ'ಯೆಂದು ಶರಣುಹೋದರೆ ಜಗತ್ತನ್ನೆಲ್ಲ ಹೊಟ್ಟೆಯೊಳಗೆ ಇಟ್ಟುಕೊಂಡಿರುವವನಾಗಿಯೂ ಎಲ್ಲ ವಸ್ತುಗಳಲ್ಲಿಯೂ ತುಂಬಿಕೊಂಡಿರುವವನಾಗಿಯೂ ಇರುವ ಅವನು ದೊರೆಯುವನು.(೧೭-೨೨)

ನನ್ನನ್ನು ಪಡೆಯುವ ಯತ್ನವನ್ನು ಮಾಡುತ್ತ ಸತ್ತವರಲ್ಲಿ ಯಾವ ದೇವತೆಗಳಿರುವ ದಾರಿಯನ್ನು ಹಿಡಿದವರು ಹಿಂದಿರುಗುವದಿಲ್ಲವೊ ಯಾವ ದೇವತೆಗಳಿರುವ ದಾರಿಯನ್ನು ಹಿಡಿದವರು ಹಿಂದಿರುಗುತ್ತಾರೋ ಆ ದಾರಿಯನ್ನು ಹೇಳುತ್ತೇನೆ. ಬ್ರಹ್ಮವನ್ನು ಉಪಾಸನೆ ಮಾಡಿದವರು ಅಗ್ನಿ, ಜ್ಯೋತಿ, ಹಗಲು, ಶುಕ್ಲಪಕ್ಷ, ಉತ್ತರಾಯಣದ ಆರು ತಿಂಗಳು ಈ ದೇವತೆಗಳ ದಾರಿಯನ್ನು ಹಿಡಿದು ಬ್ರಹ್ಮವನ್ನು ಪಡೆಯುತ್ತಾರೆ. ಕರ್ಮಿಠರು ಮೊದಲಾದವರು ಸಂಜೆಯ, ಇರುಳಿನ, ಕೃಷ್ಣಪಕ್ಷದ ಮತ್ತು ದಕ್ಷಿಣಾಯನದ ಆರು ತಿಂಗಳ ದೇವತೆಗಳ ದಾರಿಯನ್ನು ಹಿಡಿದು ಚಂದ್ರನ ಬೆಳಕುಳ್ಳ ಸ್ವರ್ಗವನ್ನು ಹೊಂದಿ ಮತ್ತೆ ಹಿಂದಿರುಗುತ್ತಾರೆ. ಬೆಳಕಿನ ಮತ್ತು ಕತ್ತಲೆಯ ಈ ಎರಡು ದಾರಿಗಳು ಜಗತ್ತಿನಲ್ಲಿ ಯಾವಾಗಲೂ ಇರುವವು. ಒಂದನ್ನು ಹಿಡಿದವನು ಹಿಂದಿರುಗುವದಿಲ್ಲ; ಇನ್ನೊಂದನ್ನು ಹಿಡಿದವನು ಹಿಂದಿರುಗುತ್ತಾನೆ. ಸಾಧಕನು ಈ ಎರಡು ದಾರಿಗಳನ್ನು ತಿಳಿದ ಮೇಲೆ ಭ್ರಾಂತನಾಗುವದಿಲ್ಲ. ಆದ್ದರಿಂದ ಯಾವಾಗಲೂ ಧ್ಯಾನವನ್ನು ಸಾಧಿಸು. ಇದೆಲ್ಲವನ್ನೂ ತಿಳಿದು ಧ್ಯಾನವನ್ನು ಮಾಡುವವನು ವೇದಗಳನ್ನು ಓದಿದವನಿಗೂ ಯಜ್ಞಗಳನ್ನು ಮಾಡಿದವನಿಗೂ ಉಪವಾಸ ಮೊದಲಾದವನ್ನು ನಡೆಸಿದವನಿಗೂ ದಾನವನ್ನು ಕೊಟ್ಟವನಿಗೂ ದೊರೆಯುವ ಫಲಕ್ಕಿಂತ ಹೆಚ್ಚಿನದಾಗಿ ಎಲ್ಲಕ್ಕೂ ತಾಯಿಬೇರಾದ ಈಶ್ವರನ ಸ್ಥಾನವನ್ನು ಪಡೆಯುತ್ತಾನೆ.

ಅಧ್ಯಾಯ-೯

ಹೆಚ್ಚಿನ ತಿಳಿವಳಿಕೆ

ಶ್ರೀ ಕೃಷ್ಣನು ಹೇಳಿದ್ದು :-

ಹೊಟ್ಟೇಕಿಚ್ಚಿಲ್ಲದ ನಿನಗೆ ಅನುಭವದಿಂದ ಕೂಡಿದ ತಿಳಿವಳಿಕೆಯನ್ನು ಕೊಡುತ್ತೇನೆ. ಇದು ಬಹು ಗುಟ್ಟಾದದ್ದು. ಇದನ್ನು ತಿಳಿದರೆ ನಿನಗೆ ಎಲ್ಲ ಅಮಂಗಲಗಳೂ ಹೋಗುತ್ತವೆ. ತಿಳಿವಳಿಕೆಗಳಲ್ಲೆಲ್ಲ ಇದು ಹೆಚ್ಚಿನದು, ಎಲ್ಲಕ್ಕಿಂತ ಗುಟ್ಟಾದದ್ದು, ಪಾಪವನ್ನು ಕಳೆಯತಕ್ಕದ್ದು, ಮೇಲಾದದ್ದು, ಈಗಲೆ ಅನುಭವಕ್ಕೆ ಬರತಕ್ಕದ್ದು; ಮತ್ತು ಎಲ್ಲರಿಗೂ ತಮ್ಮ ಧರ್ಮವಾದದ್ದು. ಇದನ್ನು ಮಾಡುವದು ಸುಲಭ; ಆದರೂ ನಾಶವಾಗತಕ್ಕದ್ದಲ್ಲ. ಈ ಧರ್ಮದಲ್ಲಿ ವಿಶ್ವಾಸವಿಲ್ಲದವರು ನನ್ನನ್ನು ಪಡೆಯದೆ ಸಾವಿನಿಂದ ಕೂಡಿದ ಸಂಸಾರದ ದಾರಿಯಲ್ಲಿ ಹಿಂದಿರುಗುವರು. (೧-೩)

ನಾನು ಇಂದ್ರಿಯಗಳಿಗೆ ಕಾಣಬರದವನು. ನಾನು ಈ ಜಗತ್ತಿನಲ್ಲೆಲ್ಲ ತುಂಬಿಕೊಂಡಿದ್ದೇನೆ. ಎಲ್ಲ ವಸ್ತುಗಳೂ ನನ್ನೊಳಗಿವೆ; ನಾನು ಅವುಗಳೊಳಗೆ ಅಡಕವಾಗಿಲ್ಲ. ಯಾವ ವಸ್ತುವೂ ನನ್ನಲ್ಲಿಲ್ಲವೋ ಇಲ್ಲ:ನನ್ನ ಆಳ್ವಿಕೆಯ ಮಹಿಮೆಯನ್ನು ನೋಡು. ನಾನು ಎಲ್ಲವನ್ನೂ ಎತ್ತಿ ಹಿಡಿದು ಕೊಂಡಿರುವವನು. ನಾನು ಅವುಗಳೊಳಗೆ ಅಡಕವಾಗಿಲ್ಲ. ನನ್ನ ಆತ್ಮವು ಎಲ್ಲವನ್ನೂ ಕಾಪಾಡುವದು. ಯಾವಾಗಲೂ ಎಲ್ಲೆಲ್ಲಿಯೂ ಇರುತ್ತಾ ದೊಡ್ಡದೆನಿಸಿರುವ ಗಾಳಿಯು ಆಕಾಶದಲ್ಲಿರುವಂತೆ ಎಲ್ಲ ವಸ್ತುಗಳೂ ನನ್ನಲ್ಲಿರುವವೆಂದು ತಿಳಿ. (೪-೬)

ಅರ್ಜುನ, ಒಂದು ಕಲ್ಪವು ಮುಗಿಯುವಾಗ ಎಲ್ಲವೂ ನನ್ನ ಮಾಯೆಯೊಳಗೆ ಅಡಗುತ್ತವೆ. ಇನ್ನೊಂದು ಕಲ್ಪದ ಮೊದಲಲ್ಲಿ ಅವುಗಳನ್ನು ಮತ್ತೆ ನಾನು ಹೊರಗೆಡಹುತ್ತೇನೆ. ನನ್ನ ಮಾಯಾಶಕ್ತಿಯ ಮೂಲಕ ಈ ಎಲ್ಲ ಪ್ರಾಣಿಗಳನ್ನೂ ಅವುಗಳಿಗೆ ಅರಿವಿಲ್ಲದಂತೆ ಅವುಗಳ ಹುಟ್ಟು ಗುಣಕ್ಕನುಗುಣವಾಗಿ ಮತ್ತೆ ಮತ್ತೆ ಹೊರಗೆಡಹುತ್ತೇನೆ. ನಾನು ಉದಾಸೀನನಂತೆ ಇರುವದರಿಂದಲೂ ನನಗೆ ಆ ಕರ್ಮಗಳಲ್ಲಿ ಆಸಕ್ತಿ ಇಲ್ಲದ್ದರಿಂದಲೂ ಆ ಕರ್ಮಗಳು ನನ್ನನ್ನು ಕಟ್ಟಿಗೊಳಪಡಿಸುವುದಿಲ್ಲ. ಸುಮ್ಮನೆ ನೋಡುತ್ತಿರುವ ನನ್ನ ಬಲದಿಂದ ಮಾಯಾಶಕ್ತಿಯು ಚರಾಚರವಾದ ಜಗತ್ತನ್ನು ಹಡೆಯತ್ತದೆ. ಅದರಿಂದಲೆ ಜಗತ್ತು ಬಗೆಬಗೆಯಾಗಿ ರೂಪುಗೊಳ್ಳುತ್ತಿರುವದು. (೭-೧೦)

ನಾನು ಎಲ್ಲಕ್ಕೂ ಹೆಚ್ಚಿನ ಒಡೆಯನು. ನನ್ನ ಈ ಹೆಚ್ಚಿನ ಸ್ವರೂಪವನ್ನು ತಿಳಿಯದೆ ಅವಿವೇಕಿಗಳು ನನ್ನನ್ನು ಮನುಷ್ಯನ ದೇಹವನ್ನು ಹೊಂದಿರುವವನೆಂದು ತಪ್ಪು ತಿಳಿಯುತ್ತಾರೆ. ಅವರ ಬಯಕೆಗಳು ವ್ಯರ್ಥವಾದವುಗಳು; ಅವರ ಕೆಲಸಗಳು ವ್ಯರ್ಥವಾದವು. ಅವರ ತಿಳಿವಳಿಕೆಯು ವ್ಯರ್ಥವಾದದ್ದು. ಅವರು ಬುದ್ಧಿ ಇಲ್ಲದವರು. ಅವರು ರಾಕ್ಷಸರ ಮತ್ತು ಅಸುರರ ಹುಟ್ಟು ಗುಣವನ್ನೂ ತಪ್ಪು ತಿಳಿವಳಿಕೆಯ ಹುಟ್ಟು ಗುಣವನ್ನೂ ಉಳ್ಳವರಾಗಿರುತ್ತಾರೆ. ದೊಡ್ಡಮನಸ್ಸಿನವರೆನಿಸಿ ಕೊಳ್ಳುವವರಿಗೆ ದೇವತೆಗಳ ಹುಟ್ಟುಗುಣವಿರುತ್ತದೆ. ಅದರಿಂದ ಅವರು ನನ್ನನ್ನು ಜಗತ್ತಿನ ತಾಯಿಬೇರೆಂದೂ ನಾಶವಿಲ್ಲದವನೆಂದೂ ತಿಳಿದು ಬೇರೆಕಡೆ ಮನಸ್ಸು ಹಾಕದೆ ಭಜಿಸುತ್ತಾರೆ. ಅವರು ಯಾವಾಗಲೂ ನನ್ನನ್ನು ಹೊಗಳುತ್ತ ಕಟ್ಟುನಿಟ್ಟಾದ ನಿಯಮಗಳನ್ನು ಸಾಧಿಸುತ್ತ ಮತ್ತು ಪ್ರೀತಿಯಿಂದ ಎರಗುತ್ತ ಯಾವಾಗಲೂ ಒಮ್ಮುಖವಾದ ಮನಸ್ಸಿನಿಂದ ಉಪಾಸನೆ ಮಾಡುತ್ತಾರೆ. ಇನ್ನು ಕೆಲವರು ನನ್ನನ್ನು ಬೇರೆ ಬೇರೆ ರೂಪದಲ್ಲಿ ಬೆಳಗುತ್ತಿರುವವನೆಂಬ ದೃಷ್ಟಿಯಿಂದಲೂ ಮೂಲರೂಪದಲ್ಲಿ ನಿಜವಾಗಿ ಒಬ್ಬನೇ ಆಗಿರುವವನೆಂಬ ದೃಷ್ಟಿಯಿಂದಲೂ ನೋಡುತ್ತ ಬಹುಬಗೆಯಾಗಿ ಎಲ್ಲ ರೂಪಗಳೂ ಆಗಿರುವ ನನ್ನನ್ನು ತಿಳಿವಳಿಕೆಯೆಂಬ ಯಜ್ಞದಿಂದ ಪೂಜಿಸುವವರಾಗಿ ಉಪಾಸನೆ ಮಾಡುತ್ತಾರೆ. (೧೧-೧೫)

ಕ್ರತುವೆಂಬ ಕರ್ಮವು ನಾನು. ಯಜ್ಞವೆಂಬ ಕರ್ಮವು ನಾನು. ಪಿತೃಗಳಿಗೆ ಕೊಡುವ ಅನ್ನವು ನಾನು. ಎಲ್ಲರೂ ಉಣ್ಣುವ ಅನ್ನವು ನಾನು. ಮಂತ್ರವು

ನಾನು. ತುಪ್ಪವು ನಾನು. ಅಗ್ನಿಯು ನಾನು. ಹೋಮವೆಂಬ ಕರ್ಮವು ನಾನು. ನಾನು ಜಗತ್ತಿನ ತಂದೆ ಮತ್ತು ತಾಯಿ. ಕರ್ಮಫಲವನ್ನು ಹಂಚುವವನು ನಾನು. ಅಜ್ಜನು ನಾನು. ತಿಳಿಯಬೇಕಾದವನು ನಾನು. ಶುದ್ಧ ವಸ್ತುಗಳು ನಾನು. ಓಂಕಾರವು ನಾನು. ಋಕ್, ಸಾಮ ಮತ್ತು ಯಜುಸ್ ಎಂಬ ವೇದಗಳು ನಾನು. ಸ್ವರ್ಗ ಮೊದಲಾದುವುಗಳು ನಾನು. ಒಡೆಯನು ನಾನು. ಎಲ್ಲ ಕರ್ಮವನ್ನೂ ನೋಡುವವನು ನಾನು. ಎಲ್ಲಕ್ಕೂ ಆಧಾರನು ನಾನು. ಮರೆಹೊಕ್ಕವರನ್ನು ಕಾಯುವವನು ನಾನು. ಉಪಕಾರದ ಸ್ವರೂಪನು ನಾನು. ಜಗತ್ತಿನ ಹುಟ್ಟು, ಇರುವಿಕೆ, ಲಯ–ಎಲ್ಲ ನಾನು. ನಾನು ಅನೇಕ ವಸ್ತುಗಳ ಗಣಿ ಮತ್ತು ಎಂದಿಗೂ ನಾಶವಾಗದ ಜಗತ್ತಿನ ಬೀಜ. ನಾನು ಕಾವನ್ನುಂಟುಮಾಡುತ್ತೇನೆ; ಮಳೆಯನ್ನು ಬಿಗಿಹಿಡಿಯುತ್ತೇನೆ ಮತ್ತು ಬಿಡುತ್ತೇನೆ. ನಾನು ಸಾವಿಲ್ಲದಿರುವಿಕೆಯೂ ಮತ್ತು ಸಾವೂ ಆಗಿದ್ದೇನೆ. ಸ್ಥೂಲವಾದ ಮತ್ತು ಸೂಕ್ಷ್ಮವಾದ ಎಲ್ಲವೂ ನಾನು. (೧೬–೧೯)

ಮೂರು ವೇದಗಳನ್ನೂ ತಿಳಿದವರು ನನ್ನನ್ನು ಯಜ್ಞಗಳಿಂದ ಪೂಜಿಸಿ ಸೋಮವೆಂಬ ಬಳ್ಳಿಯ ರಸವನ್ನು ಕುಡಿದು ಪಾಪಗಳನ್ನು ತೊಳೆದುಕೊಂಡು ಸ್ವರ್ಗವನ್ನು ಬಯಸುತ್ತಾರೆ. ಅವರು ಹೆಚ್ಚಿನ ಸುಖವನ್ನು ಕೊಡುವ ಇಂದ್ರಲೋಕಕ್ಕೆ ಹೋಗಿ ಸ್ವರ್ಗದಲ್ಲಿ ದೇವತೆಗಳ ದಿವ್ಯವಾದ ಸುಖಗಳನ್ನು ಅನುಭವಿಸುತ್ತಾರೆ. ಅವರು ಆ ದೊಡ್ಡ ಸ್ವರ್ಗಲೋಕವನ್ನು ಅನುಭವಿಸಿ ಪುಣ್ಯವು ಮುಗಿಯುತ್ತಲೆ ಭೂಮಿಗೆ ಬರುವರು. ವೇದದಲ್ಲಿ ಹೇಳಿರುವ ಕರ್ಮಮಾರ್ಗವನ್ನು ಹಿಡಿದು ಬಯಸುವವರೆಲ್ಲ ಹೀಗೆ ಹೋಗುವ ಮತ್ತು ಬರುವ ಓಡಾಟವನ್ನು ಪಡೆಯುತ್ತಾರೆ. ಇನ್ನೊಂದನ್ನು ಮನಸ್ಸಿಗೆ ಹಚ್ಚಿಕೊಳ್ಳದೆ ಯಾವಾಗಲೂ ನನ್ನಲ್ಲಿಯೇ ಮನಸ್ಸಿಟ್ಟು ನನ್ನನ್ನು ಉಪಾಸನೆ ಮಾಡುವವರಿಗೆ ಬೇಕಾದದ್ದನ್ನು ದೊರಕಿಸುವ ಮತ್ತು ಇದ್ದದ್ದನ್ನು ಕಾಪಾಡುವ ಹೊರೆಯನ್ನು ನಾನು ಹೊರುತ್ತೇನೆ. (೨೦–೨೨)

ಯಾರು ಬೇರೆ ದೇವತೆಗಳ ಭಕ್ತರಾಗಿ ಶ್ರದ್ಧೆಯಿಂದ ಪೂಜಿಸುತ್ತಾರೋ ಅವರು ಕೂಡ ತಮಗೆ ತಿಳಿಯದೆ ನನ್ನನ್ನೇ ಪೂಜಿಸುತ್ತಾರೆ. ನಾನು ಎಲ್ಲ ಯಜ್ಞಗಳಲ್ಲಿಯೂ ಹೋಮ ಮಾಡಿದ್ದನ್ನು ಉಣ್ಣುವವನು ಮತ್ತು ಫಲವನ್ನು ಕೊಡುವವನು. ಅವರು ನನ್ನನ್ನು ಇದ್ದದ್ದಿದ್ದ ಹಾಗೆ ತಿಳಿಯುವದಿಲ್ಲ. ಆದ್ದರಿಂದ ಅವರು ಜಾರಿ ಬೀಳುತ್ತಾರೆ. ದೇವತೆಗಳನ್ನು ಪೂಜಿಸುವವರು ದೇವತೆಗಳನ್ನು

ಪಡೆಯುತ್ತಾರೆ; ಪಿತೃಗಳನ್ನು ಪೂಜಿಸುವವರು ಪಿತೃಗಳನ್ನು ಪಡೆಯುತ್ತಾರೆ, ಯಕ್ಷ ಮೊದಲಾದ ಭೂತಗಳನ್ನು ಪೂಜಿಸುವವರು ಆ ಭೂತಗಳನ್ನು ಪಡೆಯುತ್ತಾರೆ, ನನ್ನನ್ನು ಪೂಜಿಸುವವರು ನನ್ನನ್ನು ಪಡೆಯುತ್ತಾರೆ. (೨೩–೨೫)

ಕಾಡೆಲೆ, ಹೂ, ಹಣ್ಣು, ನೀರು–ಇವುಗಳನ್ನಾದರೂ ಯಾವನು ನನಗೆ ಪ್ರೇಮದಿಂದ ಕೊಡುತ್ತಾನೆ ಆ ಸಾಧಕನು ಭಕ್ತಿಯಿಂದ ತಂದ ಅವುಗಳನ್ನು ನಾನು ತೆಗೆದುಕೊಳ್ಳುತ್ತೇನೆ. ಅರ್ಜುನ, ಏನನ್ನು ಮಾಡುತ್ತೀಯೊ ಏನನ್ನು ಉಣ್ಣುತ್ತೀಯೋ ಏನನ್ನು ಹೋಮಮಾಡುತ್ತೀಯೊ ಏನನ್ನು ದಾನಮಾಡುತ್ತೀಯೊ ಮತ್ತು ಯಾವತಪಸ್ಸನ್ನು ಮಾಡುತ್ತೀಯೊ ಅದನ್ನು ನನಗೆ ಒಪ್ಪಿಸಿಬಿಡು. ಹೀಗೆ ಮಾಡಿದರೆ ಪಾಪದ ಮತ್ತು ಪುಣ್ಯದ ಫಲಗಳೆಂಬ ಕಟ್ಟುಗಳಿಂದ ಬಿಡುಗಡೆಯನ್ನು ಹೊಂದುತ್ತಿ. ಆಗ ನೀನು ಕರ್ಮವನ್ನು ಬಿಟ್ಟಂತೆಯೂ ಮತ್ತು ಮಾಡಿದಂತೆಯೂ ಆಗಿ ಮೋಕ್ಷವನ್ನು ಹೊಂದಿ ನನ್ನನ್ನು ಪಡೆಯುತ್ತಿ. ನನಗೆ ಎಲ್ಲರೂ ಒಂದೆ ನನಗೆ ಬೇಕಾದವನೂ ಇಲ್ಲ; ಬೇಡವಾದವನೂ ಇಲ್ಲ. ನನ್ನನ್ನು ಪ್ರೇಮದಿಂದ ಆಶ್ರಯಿಸುವವರು ನನ್ನಲ್ಲಿರುತ್ತಾರೆ. ನಾನು ಅವರಲ್ಲಿರುವೆನು. (೨೬–೨೯)

ಎಂಥ ಕೆಟ್ಟ ನಡೆವಳಿಕೆಯವನಾದರೂ ನನ್ನನ್ನು "ನೀನೇ ಗತಿ" ಎಂದು ಉಪಾಸನೆ ಮಾಡಿದರೆ ಅವನು ಒಳ್ಳೆಯ ನಡೆವಳಿಕೆಯವನೇ ಎಂದು ತಿಳಿಯಬೇಕು. ಏಕೆಂದರೆ ಅವನು ಒಳ್ಳೆಯದಾರಿಯಲ್ಲಿ ಹೊರಟಿರುವನು. ಅವನು ಬೇಗ ಧಾರ್ಮಿಕವಾದ ಮನಸ್ಸಿನವನಾಗುವನು. ಅವನಿಗೆ ಎಂದಿಗೂ ಹೋಗದಂಥ ಸಮಾಧಾನವು ದೊರೆಯುವದು. ಅರ್ಜುನ, ನನ್ನ ಭಕ್ತನು ಕೆಡುವದಿಲ್ಲವೆಂದು ಆಣೆ ಮಾಡಿಹೇಳು. ಪಾಪದಿಂದ ಹುಟ್ಟಿದವರೂ ಹೆಂಗಸರೂ ವೈಶ್ಯರೂ ಶೂದ್ರರೂ ಕೂಡ ನನಗೆ ಮರೆಹೊಕ್ಕು ಉತ್ತಮವಾದ ಮೋಕ್ಷವನ್ನು ಪಡೆಯುತ್ತಾರೆ. ಇನ್ನು ಒಳ್ಳೆಯದಾರಿಯಲ್ಲಿರುವ ಬ್ರಾಹ್ಮಣರ ಮತ್ತು ರಾಜರ್ಷಿಗಳ ಮಾತಿನ್ನೇನು! ಮೂರು ಗಳಿಗೆಯ ಬಾಳಿನದಾಗಿ ಸುಖವಿಲ್ಲದ ಈ ಲೋಕದಲ್ಲಿ ಹುಟ್ಟಿರುವ ನೀನು ನನ್ನನ್ನು ಸೇವಿಸು; ನನ್ನಲ್ಲಿ ಮನಸ್ಸಿಡು; ನನ್ನ ಭಕ್ತನಾಗು; ನನ್ನನ್ನು ಪೂಜಿಸು, ನನ್ನ ಕಾಲಿಗೆ ಬೀಳು. ಹೀಗೆ ನೀನು ನನ್ನನ್ನೇ ಗತಿಯೆಂದು ತಿಳಿದು ಉಪಾಸನೆ ಮಾಡಿದರೆ ನನ್ನನ್ನೇ ಪಡೆಯುತ್ತಿ. (೩೦–೩೪)

ಅಧ್ಯಾಯ-೧೦

ಭಗವಂತನ ಮಹಿಮೆಯುಳ್ಳವುಗಳು

ಶ್ರೀ ಕೃಷ್ಣನು ಹೇಳಿದ್ದು :-

ಅರ್ಜುನ, ನನ್ನ ಉತ್ಕೃಷ್ಟವಾದ ಮಾತನ್ನು ಇನ್ನೂ ಕೇಳು. ಉತ್ಸಾಹದಿಂದ ಕೇಳುತ್ತಿರುವ ನಿನಗೆ ಹಿತವಾಗಲೆಂದು ನಾನು ಹೇಳುತ್ತೇನೆ. ನನ್ನ ಹುಟ್ಟನ್ನು ದೇವತೆಗಳೂ ತಿಳಿಯರು; ಮಹರ್ಷಿಗಳೂ ತಿಳಿಯರು. ಏಕೆಂದರೆ ಎಲ್ಲ ಬಗೆಯಿಂದಲೂ ಅವರಿಗಿಂತ ನಾನು ಮೊದಲನೆಯವನು. ನನಗೆ ಹುಟ್ಟಿಲ್ಲವೆಂದೂ ನಾನು ಇನ್ನೊಂದರಿಂದಾದವನಲ್ಲವೆಂದೂ ಜಗತ್ತಿಗೆಲ್ಲ ದೊಡ್ಡ ಒಡೆಯನೆಂದೂ ತಿಳಿಯುವವನು ತಪ್ಪು ತಿಳಿಯದವನಾಗಿ ಎಲ್ಲ ಪಾಪಗಳಿಂದಲೂ ಬಿಡುಗಡೆಯನ್ನು ಹೊಂದುತ್ತಾನೆ. (೧-೩)

ತಿಳಿಯುವ ಸಾಮರ್ಥ್ಯ, ತಿಳಿವಳಿಕೆ, ತಪ್ಪು ತಿಳಿಯದಿರುವುದು, ಸೈರಣೆ ನಿಜವನ್ನಾಡುವದು, ಇಂದ್ರಿಯಗಳನ್ನು ಬಿಗಿಹಿಡಿಯುವುದು, ಮನಸ್ಸಿನ ಸಮಾಧಾನ, ಆನಂದ, ದುಃಖ, ಹುಟ್ಟು, ಸಾವು, ಹೆದರಿಕೆ, ಧೈರ್ಯ, ಪೀಡಿಸದಿರುವದು, ಒಂದೇ ರೀತಿ ಇರುವದು, ಸಂತೋಷ, ಶರೀರವನ್ನು ಸೊರಗಿಸುವದು, ಕೊಡುವದು, ಒಳ್ಳೆಯ ಹೆಸರು, ಕೆಟ್ಟ ಹೆಸರು-ಈ ಎಲ್ಲ ಭಾವಗಳೂ ನನ್ನಿಂದಲೆ ಬೇರೆ ಬೇರೆ ಹುಟ್ಟುತ್ತವೆ. ಈ ಪ್ರಜೆಗಳನ್ನೆಲ್ಲ ಹುಟ್ಟಿಸಿರುವ ಮರೀಚಿ ಮೊದಲಾದ ಏಳು ಜನ ಮಹರ್ಷಿಗಳೂ ಅದರಂತೆ ಬಹು ಹಿಂದಿನವರೆಂದು ಹೆಸರುಗೊಂಡಿರುವ ಸನಕ ಮೊದಲಾದ ನಾಲ್ವರು ಮುನಿಗಳೂ ನನ್ನಲ್ಲಿ ಮನಸ್ಸುಳ್ಳವರಾಗಿ ನನ್ನ ಮನಸ್ಸಿನಿಂದಲೆ

ಹುಟ್ಟಿದವರು. ಈ ನನ್ನ ಮಹಿಮಾ ವಿಶೇಷವನ್ನೂ ಸಾಮರ್ಥ್ಯವನ್ನೂ ಇದ್ದದ್ದಿದ್ದ ಹಾಗೆ ಯಾವನು ತಿಳಿಯುತ್ತಾನೊ ಅವನ ಮನಸ್ಸು ಕದಲದೆ ಒಂದೇ ಕಡೆ ಇರುವದು. ಈ ವಿಷಯದಲ್ಲಿ ಸಂದೇಹವಿಲ್ಲ, (೪-೭)

ಎಲ್ಲರ ಹುಟ್ಟು ನನ್ನಿಂದ. ಜಗತ್ತಿನಲ್ಲಿ ಎಲ್ಲವೂ ನಡೆಯುವದು ನನ್ನಿಂದ. ಹೀಗೆಂದು ತಿಳಿದು ಜ್ಞಾನಿಗಳು ಪ್ರೇಮದಿಂದ ನನ್ನನ್ನು ಭಜಿಸುತ್ತಾರೆ. ಮನಸ್ಸನ್ನೂ ಇಂದ್ರಿಯಗಳನ್ನೂ ನನ್ನಲ್ಲಿಟ್ಟವರು ಯಾವಾಗಲೂ ಒಬ್ಬರಿಗೊಬ್ಬರು ತಮಗೆ ತಿಳಿದದ್ದನ್ನು ತಿಳಿಸುತ್ತಾ ನನ್ನ ವಿಷಯವನ್ನು ಹೇಳುತ್ತಾ ಸಂತೋಷಗೊಳ್ಳುವರು ಮತ್ತು ಸುಖವನ್ನನುಭವಿಸುವರು. ಯಾವಾಗಲೂ ನನ್ನಲ್ಲಿ ಮನಸ್ಸನ್ನಿಟ್ಟು ಪ್ರೀತಿಯಿಂದ ಭಜಿಸುವವರಿಗೆ ಅವರು ನನ್ನನ್ನು ತಮ್ಮ ಆತ್ಮನೆಂದು ತಿಳಿಯುವಂಥ ಜ್ಞಾನವನ್ನು ನಾನು ಕೊಡುತ್ತೇನೆ. ಅವರ ಮೇಲಿನ ಕನಿಕರದಿಂದಲೆ ನಾನು ಹೊಳೆಯುವ ಜ್ಞಾನವೆಂಬ ದೀಪದ ರೂಪವಾಗಿ ಅವರ ಮನಸ್ಸಿನಲ್ಲಿದ್ದು ಅವರ ಅವಿವೇಕದಿಂದಾದ ತಪ್ಪು ತಿಳಿವಳಿಕೆಯೆಂಬ ಕತ್ತಲೆಯನ್ನು ಹೋಗಲಾಡಿಸುತ್ತೇನೆ. (೮-೧೧)

ಆಗ ಅರ್ಜುನನು ಕೃಷ್ಣನನ್ನು ಕುರಿತು "ಕೃಷ್ಣ" ನೀನು ನಾಲ್ಕು ಮುಖದ ಬ್ರಹ್ಮನಿಗಿಂತ ಹೆಚ್ಚಿನ ಬ್ರಹ್ಮನು. ನೀನು ಬಹು ಉತ್ಕೃಷ್ಟವಾದ ಸ್ಥಾನ. ನೀನು ಪರಮಪಾವನವಾದ ವಸ್ತು. ನೀನು ಜಗತ್ತಿಗೆಲ್ಲ ಮೂಲನೆಂದೂ ಎಂದೆಂದಿಗೂ ಇರುವವನೆಂದೂ ತನ್ನ ಬೆಳಕಿನಿಂದ ಬೆಳಗುವವನೆಂದೂ ದೇವತೆಗಳಿಗೆಲ್ಲ ಮೊದಲನೆಯವನೆಂದೂ ಹುಟ್ಟಿಲ್ಲದವನೆಂದೂ ಎಲ್ಲೆಲ್ಲಿಯೂ ತುಂಬಿರುವವನೆಂದೂ ಎಲ್ಲ ಋಷಿಗಳೂ ದೇವತೆಗಳಲ್ಲಿ ಋಷಿಗಳಾದ ನಾರದರೂ ಹಾಗೆಯೇ ಅಸಿತನೂ ದೇವಲನೂ ವ್ಯಾಸರೂ ಹೇಳುವರು. ನೀನೂ ನನಗೆ ಅದನ್ನೇ ಹೇಳುತ್ತಿ. ನೀನು ನನಗೆ ಹೇಳುವದೆಲ್ಲ ನಿಜವೆಂದು ತಿಳಿಯುತ್ತೇನೆ. ನಿನ್ನ ಸ್ವರೂಪವನ್ನು ದೇವತೆಗಳೂ ತಿಳಿಯರು; ರಾಕ್ಷಸರೂ ತಿಳಿಯರು. ನಿನ್ನ ಸ್ವರೂಪವನ್ನು ನೀನೇ ಬಲ್ಲೆ. ನೀನು ನಿನ್ನ ಮಹಿಮಾವಿಶೇಷವುಳ್ಳ ಯಾವ ವಸ್ತುಗಳಿಂದ ಈ ಲೋಕಗಳನ್ನು ತುಂಬಿಕೊಂಡಿದ್ದೀಯೊ ಆ ದಿವ್ಯವಾದವುಗಳನ್ನು ಒಂದನ್ನೂ ಬಿಡದೆ ಹೇಳಬೇಕು. ನಾನು ನಿನ್ನನ್ನು ಯಾವಾಗಲೂ ಹೇಗೆ ಧ್ಯಾನಿಸುತ್ತ ತಿಳಿದೇನು? ಯಾವ ಯಾವ ವಸ್ತುಗಳಲ್ಲಿ ನಾನು ನಿನ್ನನ್ನು ಧ್ಯಾನಿಸಬೇಕು. ನಿನ್ನ ಸಾಮರ್ಥ್ಯ ವಿಶೇಷವನ್ನೂ

ಮಹಿಮಾ ವಿಶೇಷಗಳಿರುವ ವಸ್ತುಗಳನ್ನೂ ವಿವರವಾಗಿ ಮತ್ತೆ ಹೇಳು. ಏಕೆಂದರೆ ನಿನ್ನ ಅಮೃತದಂಥ ಮಾತನ್ನು ಕೇಳುವ ನನಗೆ ಸಾಕೆನಿಸುವುದಿಲ್ಲ." ಎಂದು ಕೇಳಿದನು. (೧೭-೧೮)

ಶ್ರೀ ಕೃಷ್ಣನು ಹೇಳಿದ್ದು:-

ಅರ್ಜುನ, ಈಗ ನನ್ನ ದಿವ್ಯವಾದಮಹಿಮಾ ವಿಶೇಷ ಉಳ್ಳವುಗಳಲ್ಲಿ ಮುಖ್ಯವಾದವುಗಳನ್ನು ಆರಿಸಿ ನಿನಗೆ ಹೇಳುತ್ತೇನೆ. ಏಕೆಂದರೆ ನನ್ನ ಅಂಥಪದಾರ್ಥಗಳಿಗೆ ಕೊನೆಇಲ್ಲ. ನಾನು ಎಲ್ಲ ಪ್ರಾಣಿಗಳ ಹೃದಯದಲ್ಲಿರುವ ಆತ್ಮನು. ಎಲ್ಲ ಪ್ರಾಣಿಗಳಿಗೂ ಮೊದಲೂ ನಡುವೆಯೂ ಕೊನೆಯೂ ನಾನೆ. ನಾನು ಆದಿತ್ಯರಲ್ಲಿ ವಿಷ್ಣು, ಬೆಳೆಗುವ ವಸ್ತುಗಳಲ್ಲಿ ಕಿರಣಗಳುಳ್ಳ ಸೂರ್ಯ, ಮರುತ್ತುಗಳಲ್ಲಿ ಮರೀಚಿ, ನಕ್ಷತ್ರಗಳಲ್ಲಿ ಚಂದ್ರ, ವೇದಗಳಲ್ಲಿ ಸಾಮವೇದ, ದೇವತೆಗಳಲ್ಲಿ ಇಂದ್ರ. ಇಂದ್ರಿಯಗಳಲ್ಲಿ ಮನಸ್ಸು, ಪ್ರಾಣಿಗಳಲ್ಲಿ ಚೈತನ್ಯ, ರುದ್ರರಲ್ಲಿ ಶಂಕರ, ಯಕ್ಷರಲ್ಲಿಯೂ ರಾಕ್ಷಸರಲ್ಲಿಯೂ ಕುಬೇರ, ವಸುಗಳಲ್ಲಿ ಅಗ್ನಿ, ಪರ್ವತಗಳಲ್ಲಿ ಮೇರು ಪುರೋಹಿತರಲ್ಲಿ ಶ್ರೇಷ್ಠನಾದಬೃಹಸ್ಪತಿ; ಸೇನಾಪತಿಗಳಲ್ಲಿ ಕುಮಾರಸ್ವಾಮಿ, ಸರೋವರಗಳಲ್ಲಿ ಸಾಗರ, ಮಹರ್ಷಿಗಳಲ್ಲಿ ಭೃಗು, ಮಾತುಗಳಲ್ಲಿ ಒಂದಕ್ಷರವಾದ ಓಂಕಾರ, ಯಜ್ಞಗಳಲ್ಲಿ ಜಪಯಜ್ಞ, ಅಲ್ಲಾಡದವಸ್ತುಗಳಲ್ಲಿ ಹಿಮಾಲಯ, ಮರಗಳಲ್ಲಿ ಅರಳೀಮರ, ದೇವರ್ಷಿಗಳಲ್ಲಿ ನಾರದ, ಗಂಧರ್ವರಲ್ಲಿ ಚಿತ್ರರಥ, ಸಿದ್ಧರಲ್ಲಿ ಕಪಿಲ ಮುನಿ, ಕುದುರೆಗಳಲ್ಲಿ ಹಾಲಿನ ಕಡಲಿನಲ್ಲಿ ಹುಟ್ಟಿದ ಉಚ್ಚೈಶ್ರವ, ಆನೆಗಳಲ್ಲಿ ಐರಾವತ, ಮನುಷ್ಯರಲ್ಲಿ ಅರಸ, ಆಯುಧಗಳಲ್ಲಿ ವಜ್ರಾಯುಧ, ಆಕಳುಗಳಲ್ಲಿ ಕಾಮಧೇನು, ಸಂತತಿಯನ್ನುಂಟುಮಾಡುವ ಕಾಮ, ಸರ್ಪಗಳಲ್ಲಿ ವಾಸುಕಿ, ವಿಷವುಳ್ಳ ಹಾವುಗಳಲ್ಲಿ ಅನಂತ, ನೀರಿನಲ್ಲಿರುವ ಪ್ರಾಣಿಗಳಲ್ಲಿ ವರುಣ, ಪಿತೃದೇವತೆಗಳಲ್ಲಿ ಆರ್ಯಮ, ಆಜ್ಞೆ ಮಾಡುವವರಲ್ಲಿ ಯಮ, ದೈತ್ಯರಲ್ಲಿ ಪ್ರಹ್ಲಾದ, ಲೆಕ್ಕ ಮಾಡುವವರಲ್ಲಿ ಕಾಲ, ಮೃಗಗಳಲ್ಲಿ ಸಿಂಹ, ಹಕ್ಕಿಗಳಲ್ಲಿ ಗರುಡ, ವೇಗವುಳ್ಳವುಗಳಲ್ಲಿ ವಾಯು, ಶಸ್ತ್ರವನ್ನು ಹಿಡಿದವರಲ್ಲಿ ರಾಮಚಂದ್ರ, ಮೀನುಗಳಲ್ಲಿ ಮೊಸಳೆ, ಹರಿಯುವನೀರುಗಳಲ್ಲಿ ಗಂಗಾನದಿ. (೧೯-೩೧)

ಅರ್ಜುನ, ನಾನು ಎಲ್ಲ ಸೃಷ್ಟಿಗಳ ಮೊದಲು, ನಡುವೆ ಮತ್ತು ಕೊನೆ. ನಾನು ವಿದ್ಯೆಗಳಲ್ಲಿ ಅಧ್ಯಾತ್ಮವಿದ್ಯೆ, ವಾದ ಮಾಡುವವರಲ್ಲಿ ಉತ್ತರ ಪ್ರತ್ಯುತ್ತರ, ಅಕ್ಷರಗಳಲ್ಲಿ ಅಕಾರ, ಸಮಾಸಗಳಲ್ಲಿ ದ್ವಂದ್ವ. ನಾನು ಎಂದಿಗೂ ನಾಶವಾಗದ ಕಾಲ. ನಾನು ಎಲ್ಲ

ಕಡೆಗೂ ನೋಡುವವನಾಗಿ ಎಲ್ಲರ ಕರ್ಮಫಲಗಳನ್ನು ಹಂಚುವವನು. ನಾನು ಎಲ್ಲವನ್ನೂ ಕಸಿದುಕೊಳ್ಳುವ ಮೃತ್ಯು. ನಾನು ಮುಂದೆ ಏಳಿಗೆಗೆ ಬರುವವರಲ್ಲಿ ಏಳಿಗೆ. ಸ್ತ್ರೀಯರಲ್ಲಿ ಹೆಸರುವಾಸಿ, ಕಾಂತಿ, ಮಾತು–ಇವುಗಳು ನಾನು. ನಾನು ನೆನಪು, ಅರ್ಥವನ್ನು ತಿಳಿಯುವ ಶಕ್ತಿ, ಇಂದ್ರಿಯಗಳನ್ನು ಬಿಗಿಹಿಡಿಯುವ ಶಕ್ತಿ ಮತ್ತು ಸೈರಣೆ. ನಾನು ಸಾಮಗಳಲ್ಲಿ ಬೃಹತ್ಸಾಮ, ಛಂದಸ್ಸುಗಳಲ್ಲಿ ಗಾಯತ್ರಿ, ತಿಂಗಳುಗಳಲ್ಲಿ ಮಾರ್ಗಶೀರ್ಷ, ಋತುಗಳಲ್ಲಿ ವಸಂತ, ಮೋಸಮಾಡುವುಗಳಲ್ಲಿ ಜೂಜು, ಆಳ್ವಿಕೆಯನ್ನು ನಡೆಸುವವರಲ್ಲಿ ಆಜ್ಞೆ, ನಾನು ಗೆಲುವು, ಉದ್ಯೋಗ ಮತ್ತು ಸಾತ್ತ್ವಿಕರ ಸತ್ತ್ವಗುಣ. ನಾನು ಯಾದವರಲ್ಲಿ ಕೃಷ್ಣ, ಪಾಂಡವರಲ್ಲಿ ಅರ್ಜುನ, ಮುನಿಗಳಲ್ಲಿ ವ್ಯಾಸ, ಕವಿಗಳಲ್ಲಿ ಶುಕ್ರಾಚಾರ್ಯ, ಬಗ್ಗಿ ನಡೆದುಕೊಳ್ಳುವಂತೆ ಮಾಡುವವರಲ್ಲಿ ಹೊಡೆತ, ಗೆಲ್ಲಬೇಕೆನ್ನುವವರಲ್ಲಿ ನೀತಿ, ಗುಟ್ಟಾಗಿಡುವವುಗಳಲ್ಲಿ ಮಾತಾಡದಿರುವಿಕೆ, ಜ್ಞಾನವುಳ್ಳವರಲ್ಲಿ ಆತ್ಮ ಜ್ಞಾನ. (೩೨–೩೮)

ಅರ್ಜುನ, ಓಡಾಡುವ ಮತ್ತು ಕದಲದಿರುವ ಎಲ್ಲಕ್ಕೂ ಕಾರಣವಾದ ಬೀಜವು ನಾನು. ಓಡಾಡುವವುಗಳಲ್ಲಿಯೂ ಕದಲದಿರುವವುಗಳಲ್ಲಿಯೂ ನನ್ನ ಹೊರತು ಬೇರೆ ಯಾವುದೂ ಇಲ್ಲ. ನನ್ನ ದಿವ್ಯವಾದ ಮಹಿಮೆಯುಳ್ಳವುಗಳಿಗೆ ಕೊನೆ ಇಲ್ಲ. ಮಹಿಮೆಯುಳ್ಳವುಗಳನ್ನು ವಿಸ್ತಾರವಾಗಿ ಇದುವರೆಗೆ ಹೇಳಿದ್ದು ಪ್ರಯತ್ನದಿಂದ ನೆನೆಸಿಕೊಂಡು ಹೇಳಿದ್ದಾಗಿರುವದು. ಯಾವದರಲ್ಲಿ ಹೆಚ್ಚುಗಾರಿಕೆ ಇದೆಯೊ ಯಾವದರಲ್ಲಿ ಕಾಂತಿಯ ವಿಶೇಷವಿದೆಯೊ ಯಾವದರಲ್ಲಿ ಹೆಚ್ಚು ಬಲವಿದೆಯೊ ಅದೆಲ್ಲ ನನ್ನ ಮಹಿಮೆಯ ಅಂಶದಿಂದಾದದ್ದೆಂದು ತಿಳಿ. ಇನ್ನೊಂದು ಮಾತನ್ನು ಕೇಳು. ಅನೇಕವಾಗಿರುವ ಈ ತಿಳಿವಳಿಕೆಯಿಂದ ನಿನಗಾಗುವದೇನು? ನಾನು ಈ ಜಗತ್ತನ್ನು ನನ್ನದೊಂದಂಶದಿಂದ ವ್ಯಾಪಿಸಿಕೊಂಡಿರುವೆನು. (೩೯–೪೨)

ಅಧ್ಯಾಯ-೧೧

ವಿಶ್ವರೂಪ

ಇದಿಷ್ಟನ್ನೂ ಕೇಳಿದ ಅರ್ಜುನನು ಶ್ರೀ ಕೃಷ್ಣನನ್ನು ಕುರಿತು "ಕೃಷ್ಣ ಬಹು ಗುಟ್ಟಾಗಿಡತಕ್ಕದ್ದಾದ ಆತ್ಮವಿಚಾರವನ್ನು ನೀನು ನನಗೆ ಒಳ್ಳೆಯದಾಗಲೆಂದು ಹೇಳಿದೆ. ಇದರಿಂದ ನನ್ನ ತಪ್ಪುತಿಳಿವಳಿಕೆಯು ಚೆನ್ನಾಗಿ ಬಿಟ್ಟು ಹೋಯಿತು. ಎಲ್ಲ ವಸ್ತುಗಳ ಆಗುಹೋಗುಗಳನ್ನೂ ಅಚ್ಚಳಿಯದ ನಿನ್ನ ಹೆಚ್ಚುಗಾರಿಕೆಯುಳ್ಳವುಗಳನ್ನೂ ನಿನ್ನಿಂದ ನಾನು ವಿವರವಾಗಿ ಕೇಳಿದೆನು. ನೀನು ನಿನ್ನ ವಿಷಯದಲ್ಲಿ ಹೇಳಿದ್ದೆಲ್ಲಾ ಸರಿ. ನಿನ್ನ ಈಶ್ವರತ್ವದ ರೂಪವನ್ನು ನೋಡಬೇಕೆಂದು ನನಗೆ ಆಸೆಯುಂಟಾಗಿದೆ. ನಾನು ಅದನ್ನು ನೋಡಲಾಗುವದೆಂದು ನಿನಗೆ ತೋರಿದರೆ ನೀನು ನನಗೆ ನಿನ್ನ, ಆ ಎಂದಿಗೂ ಹೋಗದ, ರೂಪವನ್ನು ತೋರಿಸು." ಎಂದು ಕೇಳಿದನು. (೧-೪)

ಆಗ ಶ್ರೀ ಕೃಷ್ಣನು ಅರ್ಜುನನನ್ನು ಕುರಿತು "ಅರ್ಜುನ, ನೂರುಗಟ್ಟಲೆ ಸಾವಿರಗಟ್ಟಲೆ ಅನೇಕ ಬಗೆಯಾಗಿಯೂ ತೇಜೋಮಯಗಳಾಗಿಯೂ ಅನೇಕ ಬಣ್ಣಗಳೂ ಆಕಾರಗಳೂ ಉಳ್ಳವುಗಳಾಗಿಯೂ ಇರುವ ನನ್ನ ರೂಪವನ್ನು ನೋಡು. ಆದಿತ್ಯರನ್ನೂ ವಸುಗಳನ್ನೂ ರುದ್ರರನ್ನೂ ಅಶ್ವಿನೀ ಕುಮಾರರನ್ನೂ ಮರುತರನ್ನೂ ನೋಡು. ಹಾಗೆಯೇ ನೀನು ಎಂದೂ ಕಾಣದ ಅನೇಕ ಅದ್ಭುತ ರೂಪಗಳನ್ನೂ ನೋಡು. ನನ್ನ ದೇಹದಲ್ಲಿ ಒಂದೇ ಕಡೆ ಸೇರಿರುವ ಎಲ್ಲ ಚರಾಚರ ಜಗತ್ತನ್ನೂ ಮತ್ತು ಬೇರೆ ಏನೇನನ್ನು ನೋಡಬೇಕೆಂದು

ಬಯಸುತ್ತೀಯೊ ಅದನ್ನೆಲ್ಲ ಈಗನೋಡು. ಈ ಕಣ್ಣಿನಿಂದ ನೀನು ನನ್ನನ್ನು ನೋಡಲಾರೆ. ನಿನಗೆ ದಿವ್ಯವಾದ ಕಣ್ಣನ್ನು ಕೊಡುತ್ತೇನೆ. ನನ್ನ ಸರ್ವೇಶ್ವರತ್ವವನ್ನು ತೋರಿಸುವ ಮಹಿಮಾ ವಿಶೇಷವನ್ನು ನೋಡು." ಎಂದು ಹೇಳಿದನು. (೫-೮)

ಆಗ ಸಂಜಯನು ಧೃತರಾಷ್ಟ್ರನನ್ನು ಕುರಿತು "ಧೃತರಾಷ್ಟ್ರ, ಆ ಮೇಲೆ ಮಹಾಮಹಿಮನಾದ ಶ್ರೀ ಕೃಷ್ಣನು ಅರ್ಜುನನಿಗೆ ತನ್ನ ಈಶ್ವರತ್ವವನ್ನು ಸೂಚಿಸುವ ಉತ್ಕೃಷ್ಟವಾದ ರೂಪವನ್ನು ತೋರಿಸಿದನು. ಅದಕ್ಕೆ ಲೆಕ್ಕವಿಲ್ಲದಷ್ಟು ಮುಖಗಳು ಮತ್ತು ಕಣ್ಣುಗಳು! ಲೆಕ್ಕವಿಲ್ಲದಷ್ಟು ಬೆರಗುಮಾಡುವ ನೋಟಗಳು! ಲೆಕ್ಕವಿಲ್ಲದಷ್ಟು ಝುಗಝುಗಿಸುವ ಒಡವೆಗಳು! ಲೆಕ್ಕವಿಲ್ಲದಷ್ಟು, ಎತ್ತಿ ಹಿಡಿದಿರುವ ದಿವ್ಯವಾದ ಆಯುಧಗಳು! ಉತ್ಕೃಷ್ಟವಾದ ಮಾಲೆಗಳು ಮತ್ತು ವಸ್ತ್ರಗಳು! ದಿವ್ಯವಾದ ಗಂಧದ ಲೇಪನ! ಹೀಗೆ ಶ್ರೀ ಕೃಷ್ಣನು ಎಲ್ಲ ಬಗೆಯ ಆಶ್ಚರ್ಯಗಳಿಂದ ತುಂಬಿರುವದಾಗಿಯೂ ಪ್ರಕಾಶರೂಪವಾಗಿಯೂ ಕೊನೆ ಮೊದಲಿಲ್ಲದ್ದಾಗಿಯೂ ಎಲ್ಲ ಕಡೆಗೂ ಮುಖಗಳುಳ್ಳದ್ದಾಗಿಯೂ ಇರುವ ರೂಪವನ್ನು ತಾಳುತ್ತಲೆ, ಆ ವಿಶ್ವರೂಪನ ಬೆಳಕು, ಆಕಾಶದಲ್ಲಿ ಸಾವಿರಾರು ಸೂರ್ಯರ ಬೆಳಕು ಒಂದೇಸಲಕ್ಕೆ ಹೊರಹೊಮ್ಮಿದಷ್ಟಾಯಿತು. ಆ ಕೃಷ್ಣನ ದೇಹದಲ್ಲಿ ಅನೇಕ ಬಗೆಯಾಗಿ ಬಿಡಿಬಿಡಿಯಾಗಿ ಒಂದೇ ಕಡೆ ಇರುವ ಎಲ್ಲ ಜಗತ್ತನ್ನೂ ನೋಡಿದಾಗ ಅರ್ಜುನನು ಬೆರಗಾದನು. ಅವನ ಮೈ ಮೇಲಿನ ಕೂದಲುಗಳು ನೆಟ್ಟಗಾದವು. ಅವನು ತನ್ನ ತಲೆಯನ್ನು ಕೃಷ್ಣನ ಕಾಲಮೇಲಿಟ್ಟು ಕೈಮುಗಿದುಕೊಂಡು ತನಗೆ ತೋರಿದ್ದನ್ನು ಹೇಳುವದಕ್ಕೆ ಮೊದಲು ಮಾಡಿದನು." ಎಂದು ಹೇಳಿದನು. (೯-೧೪)

ಆಗ ಅರ್ಜುನನು : "ಕೃಷ್ಣ, ನಿನ್ನ ಶರೀರದಲ್ಲಿ ದೇವತೆಗಳನ್ನೂ ಮತ್ತು ಎಲ್ಲ ಚರಾಚರಗಳ ಗುಂಪನ್ನೂ ಎಲ್ಲರನ್ನೂ ಆಳುವವನಾಗಿ ಪೃಥ್ವಿ ಎಂಬ ಕಮಲದ ನಡುವಣ ಮೇರುವೆಂಬ ಕರ್ಣಿಕೆಯ ಪೀಠದ ಮೇಲಿರುವ ನಾಲ್ಕು ಮುಖಗಳ ಬ್ರಹ್ಮನನ್ನೂ ಎಲ್ಲ ಋಷಿಗಳನ್ನೂ ದೇವಲೋಕದ ವಾಸುಕಿ ಮೊದಲಾದವರನ್ನೂ ನಾನು ನೋಡುತ್ತಿದ್ದೇನೆ. ಎಲ್ಲ ಕಡೆಗೂ ಹರಡಿಕೊಂಡಿರುವ ಲೆಕ್ಕವಿಲ್ಲದಷ್ಟು ರೂಪಗಳುಳ್ಳದ್ದಾಗಿ ಲೆಕ್ಕವಿಲ್ಲದಷ್ಟು ತೋಳುಗಳೂ ಹೊಟ್ಟೆಗಳೂ ಮುಖಗಳೂ ಕಣ್ಣುಗಳೂ ಉಳ್ಳ ನಿನ್ನನ್ನು ನೋಡುತ್ತಿದ್ದೇನೆ. ಹೇ, ಸ್ವಾಮಿ, ವಿಶ್ವರೂಪ, ನಿನ್ನ ಕೊನೆಯನ್ನೂ ನಡುವನ್ನೂ ಮೊದಲನ್ನೂ ಕಾಣೆನು. ನೀನು

ಕಿರೀಟವನ್ನಿಟ್ಟಿದ್ದಿ; ಗದೆಯನ್ನು ಹಿಡಿದಿದ್ದಿ; ಚಕ್ರವನ್ನು ತಿರುಗಿಸುತ್ತಿದ್ದಿ; ನೀನು ಎಲ್ಲ ಕಡೆಯಲ್ಲಿಯೂ ಬೆಳಗುವ ತೇಜಸ್ಸುಗಳ ಗುಂಪಾಗಿದ್ದಿ. ನಿನ್ನ ಕಾಂತಿಯು ಎಲ್ಲ ಕಡೆಯಲ್ಲಿಯೂ ಪುಷ್ಟಿಗೊಂಡಿರುವ ಬೆಂಕಿಯಂತೆ ಮತ್ತು ಸೂರ್ಯನಂತೆ ಇರುವದು. ಅದನ್ನು ಇಷ್ಟೇ ಸರಿಯೆಂದು ತಿಳಿಯುವದಕ್ಕಾಗುವದಿಲ್ಲ. ನೀನು ಇಂದ್ರಿಯಗಳಿಗೊಳಗಾಗುವವನಲ್ಲ. ನೀನು ನಾಶವಿಲ್ಲದವನು, ತಿಳಿಯಬೇಕಾದ ಪರಬ್ರಹ್ಮವು ನೀನೆ. ನೀನು ಈ ಜಗತ್ತಿಗೆಲ್ಲ ಹೆಚ್ಚಿನ ಆಧಾರ. ನೀನು ಹೆಚ್ಚು ಕಡಿಮೆಗಳಾಗದವನು ಮತ್ತು ಎಂದೆಂದಿಗೂ ಇರುವಂತೆ ಧರ್ಮವನ್ನು ಕಾಪಾಡುವವನು. ನೀನು ಬಹು ಹಿಂದಿನವನೆಂದು ನನ್ನ ಅಭಿಪ್ರಾಯ. ನಿನಗೆ ಮೊದಲೂ ನಡುವೆಯೂ ಕೊನೆಯೂ ಇಲ್ಲ. ನಿನ್ನ ಪರಾಕ್ರಮಕ್ಕೆ ತಡೆ ಇಲ್ಲ. ನಿನ್ನ ತೋಳುಗಳು ಲೆಕ್ಕಕ್ಕೆ ಹತ್ತುವದಿಲ್ಲ. ಚಂದ್ರನೂ ಸೂರ್ಯನೂ ನಿನ್ನ ಕಣ್ಣುಗಳು. ನಿನ್ನ ಮುಖವು ಅಗ್ನಿಯಂತೆ ಧಗಧಗಿಸುತ್ತಿದೆ. ಹೀಗೆ ನಿನ್ನ ಬೆಳಕು ಜಗತ್ತನ್ನೆಲ್ಲ ಕಾಯಿಸುತ್ತಿದೆ. ಇಂಥ ನಿನ್ನನ್ನು ನಾನು ನೋಡುತ್ತಿದ್ದೇನೆ. ಭೂಮಿಗೂ ಆಕಾಶಕ್ಕೂ ನಡುವೆ ಇರುವ ಈ ಬಯಲೆಲ್ಲ ನಿನ್ನೊಬ್ಬನಿಂದ ತುಂಬಿಹೋಗಿರುವದು. ಭಯಂಕರವಾದ ಮತ್ತು ಆಶ್ಚರ್ಯಕರವಾದ ಈ ನಿನ್ನ ರೂಪವನ್ನು ನೋಡಿ ಮೂರು ಲೋಕಗಳೂ ತಲ್ಲಣಿಸುತ್ತಿರುವವು. ಈ ರಾಜರ ರೂಪದ ದೇವತೆಗಳೆಲ್ಲ ನಿನ್ನೊಳಕ್ಕೆ ಹೋಗುತ್ತಿದ್ದಾರೆ. ಕೆಲವರು ಹೆದರಿ ಕೈ ಜೋಡಿಸಿಕೊಂಡು ನಿನ್ನನ್ನು ಕೊಂಡಾಡುತ್ತಿದ್ದಾರೆ. ಮಹರ್ಷಿಗಳೂ ಸಿದ್ಧರೂ ಎಲ್ಲರೂ ಜಗತ್ತಿಗೆ ಮೇಲಾಗಲೆಂದು ಹರಕೆಯನ್ನು ಹೊತ್ತು ನಿನ್ನನ್ನು ಬೇಕಾದಷ್ಟು ಸ್ತೋತ್ರಗಳಿಂದ ಹೊಗಳುತ್ತಿದ್ದಾರೆ. ರುದ್ರರೂ ಸೂರ್ಯರೂ ವಸುಗಳೂ ಸಾಧ್ಯರೂ ವಿಶ್ವೇದೇವತೆಗಳೂ ಅಶ್ವಿನೀಕುಮಾರರೂ ವಾಯುಗಳೂ ಪಿತೃದೇವತೆಗಳೂ ಗಂಧರ್ವರೂ ಯಕ್ಷರೂ ಅಸುರರೂ, ಸಿದ್ಧರೂ ಈ ಎಲ್ಲರೂ ಬೆರಗಾಗಿ ನಿನ್ನನ್ನು ನೋಡುತ್ತಿದ್ದಾರೆ. ಆನೇಕ ಬಾಯಿಗಳೂ ಕಣ್ಣುಗಳೂ ತೋಳುಗಳೂ ತೊಡೆಗಳೂ ಹೆಜ್ಜೆಗಳೂ ಹೊಟ್ಟೆಗಳೂ ಕೋರೆದಾಡೆಗಳೂ ಉಳ್ಳ ನಿನ್ನ ಈ ದೊಡ್ಡ ರೂಪವನ್ನು ನೋಡಿ ಎಲ್ಲ ಲೋಕಗಳವರೂ ಬಹಳ ಕಳವಳಗೊಂಡಿರುವರು. ನನಗೂ ಹಾಗೆಯೇ ಆಗಿರುವದು. ಮುಗಿಲುಮುಟ್ಟಿ ಝುಗಝುಗಿಸುತ್ತಿರುವ ಬಗೆಬಗೆಯ ಬಣ್ಣಗಳುಳ್ಳದ್ದಾಗಿ ಅಗಲಿರುವ ಬಾಯಿಯೂ ಧಗಧಗಿಸುವ ಆಗಲವಾದ ಕಣ್ಣುಗಳೂ ಬೆಳಗುವ ನಿನ್ನನ್ನು ನೋಡಿ ನಾನು ತಲ್ಲಣಿಸಿದ್ದೇನೆ. ನಾನು ದೈನ್ಯವನ್ನೂ ಸಮಾಧಾನವನ್ನೂ ಕಳೆದುಕೊಂಡಿದ್ದೇನೆ.

ಪ್ರಲಯಕಾಲದ ಬೆಂಕಿಯಂತಿರುವ ಕೋರೆದಾಡೆಗಳಿಂದ ಭಯಂಕರವಾಗಿರುವ ನಿನ್ನ ಮುಖವನ್ನು ನೋಡಿದ ಮಾತ್ರದಿಂದಲೆ ದಿಕ್ಕು ಕಾಣದವನಾಗಿರುವೆನು. ನನಗೆ ಸುಖವೂ ಇಲ್ಲ. ದೇವ, ಪ್ರಸನ್ನನಾಗು. ಈ ಎಲ್ಲ ರಾಜರ ಗುಂಪಿನಿಂದ ಕೂಡಿದ ಎಲ್ಲ ಕೌರವರೂ ಭೀಷ್ಮರೂ ದ್ರೋಣರೂ ಈ ಕರ್ಣನೂ ನಮ್ಮ ಕಡೆಯ ಮುಂದಾಳುಗಳೂ ಭಯಂಕರವಾದ ಕೋರೆದಾಡೆಗಳಿಂದ ವಿಕಾರವಾಗಿರುವ ನಿನ್ನ ಬಾಯೊಳಕ್ಕೆ ಬೇಗಬೇಗ ನುಗ್ಗುತ್ತಿದ್ದಾರೆ. ಕೆಲವರು ಹಲ್ಲುಗಳ ಸಂದಿಗಳಲ್ಲಿ ಸಿಕ್ಕಿಕೊಂಡು ತಲೆಗಳನ್ನು ಪುಡಿಪುಡಿ ಮಾಡಿಕೊಂಡವರಾಗಿ ಕಾಣುತ್ತಾರೆ. ನದಿಗಳ ಅನೇಕ ವೇಗಗಳು ಸಮುದ್ರದ ಕಡೆಗೆ ಹರಿಯುವ ಹಾಗೆ ಈ ಭೂಲೋಕದ ವೀರರು ನಾಲ್ಕು ಕಡೆಗೂ ಬೆಳಗುವ ನಿನ್ನ ಬಾಯಿಗಳೊಳಕ್ಕೆ ಹೋಗುತ್ತಿದ್ದಾರೆ. ಬಹು ವೇಗವುಳ್ಳ ದೀಪದ ಹುಳುಗಳು ತಮ್ಮ ನಾಶವನ್ನು ಮಾಡಿಕೊಳ್ಳುವದಕ್ಕಾಗಿ ಧಗಧಗಿಸುವ ಬೆಂಕಿಯೊಳಕ್ಕೆ ಹೋಗುವ ಹಾಗೆ ಈ ಜನರೆಲ್ಲರೂ ತಮ್ಮ ನಾಶವನ್ನು ಮಾಡಿಕೊಳ್ಳುವದಕ್ಕಾಗಿ ನಿನ್ನ ಬಾಯೊಳಕ್ಕೆ ಹೋಗುತ್ತಿದ್ದಾರೆ. ನೀನು ಧಗಧಗಿಸುವ ಮುಖಗಳಿಂದ ಎಲ್ಲ ಲೋಕಗಳನ್ನೂ ಎಲ್ಲ ಕಡೆಯಿಂದಲೂ ನುಂಗಿ ಚಪ್ಪರಿಸುತ್ತಿ. ನಿನ್ನ ತೀಕ್ಷ್ಣವಾದ ಕಿರಣಗಳು ತಮ್ಮ ಬೆಳಕುಗಳಿಂದ ಎಲ್ಲ ಜಗತ್ತನ್ನೂ ತುಂಬಿ ಸುಡುತ್ತಿವೆ. ಇಷ್ಟು ಭಯಂಕರವಾದ ರೂಪವುಳ್ಳ ನೀನು ಯಾರು? ನನಗೆ ಹೇಳು. ಕೃಷ್ಣ, ನಿನಗೆ ನಮಸ್ಕಾರ. ನನ್ನ ಮೇಲೆ ಪ್ರಸನ್ನನಾಗು. ಎಲ್ಲಕ್ಕೂ ಕಾರಣನಾದ ನೀನು ಯಾರೆಂದು ತಿಳಿಯಲಿಚ್ಛೆಸುತ್ತೇನೆ. ಏಕೆಂದರೆ ನಿನ್ನ ನಡೆವಳಿಕೆಯ ಗುಟ್ಟು ನನಗೆ ಗೊತ್ತಿಲ್ಲ" ಎಂದನು. (೧೫–೩೧)

ಹೀಗೆಂದ ಅರ್ಜುನನನ್ನು ಕುರಿತು ಆಗ ಶ್ರೀ ಕೃಷ್ಣನು ಹೇಳಿದ್ದು:– "ಅರ್ಜುನ, ನಾನು ಜಗತ್ತನ್ನೆಲ್ಲ ನಾಶಮಾಡುವದಕ್ಕೆಂದು ಚೆನ್ನಾಗಿ ಬೆಳೆದಿರುವ ಕಾಲಪುರುಷನು. ಲೋಕಗಳನ್ನೆಲ್ಲ ನಾಶಮಾಡುವದಕ್ಕಾಗಿ ಈಗ ಮುಂದೆ ಬಂದಿರುವೆನು. ನಿನ್ನ ಹೊರತು ಹಗೆಗಳ ದಂಡಿನಲ್ಲಿರುವ ಎಲ್ಲ ಕಾದಾಳುಗಳೂ ಇನ್ನು ಇಲ್ಲದೆ ಹೋಗುವರು. ಆದ್ದರಿಂದ ಏಳು; ಹೆಸರುವಾಸಿಯನ್ನು ಹೊಂದು; ಹಗೆಗಳನ್ನು ಗೆದ್ದು ಸಮೃದ್ಧಿಯಾದ ದೊರೆತನವನ್ನು ಅನುಭವಿಸು. ಇವರು ಮೊದಲೇ ನನ್ನಿಂದಲೆ ಸತ್ತವರಾಗಿದ್ದಾರೆ. ನೀನು ನೆಪಮಾತ್ರಕ್ಕೆ ನಿಲ್ಲು. ದ್ರೋಣನೂ ಭೀಷ್ಮನೂ ಜಯದ್ರಥನೂ ಕರ್ಣನೂ ಇನ್ನೂ ಇರುವ ಕಾದಾಳುಗಳೂ ನನ್ನಿಂದ ಸತ್ತೇ ಇದ್ದಾರೆ. ಇವರನ್ನೆಲ್ಲ ನೀನು ಕೊಲ್ಲು. ತಳಮಳಿಸಬೇಡ; ಕಾದು; ಯುದ್ಧದಲ್ಲಿ ಹಗೆಗಳನ್ನು ಗೆಲ್ಲುತ್ತಿ." (೩೨–೩೪)

ಈ ಮಾತನ್ನು ಕೇಳಿ ಅರ್ಜುನನು ನಡುಗುತ್ತ ಕೈ ಮುಗಿದುಕೊಂಡು ಅಡ್ಡಬಿದ್ದು ಬಗ್ಗಿಕೊಂಡು ಹೆದರುತ್ತ ಕೃಷ್ಣನನ್ನು ಕುರಿತು ಗದ್ಗದ ಸ್ವರದಿಂದ "ಕೃಷ್ಣ, ನಿನ್ನ ಹೆಸರುವಾಸಿಯಿಂದ ಲೋಕವೆಲ್ಲ ಹರ್ಷವನ್ನು ಹೊಂದುವದೂ ಮತ್ತು ನಿನ್ನ ಮೇಲೆ ಹೆಚ್ಚು ಪ್ರೀತಿಯನ್ನು ಮಾಡುವದೂ ರಾಕ್ಷಸರೆಲ್ಲ ಹೆದರಿ ದಿಕ್ಕುದಿಕ್ಕಿಗೆ ಓಡುವದೂ ಸಿದ್ಧರ ಗುಂಪೆಲ್ಲ ಆಡ್ಡ ಬೀಳುತ್ತಿರುವದೂ ಸರಿಯಾದದ್ದೆ. ನಾಲ್ಕು ಮುಖಗಳ ಬ್ರಹ್ಮನಿಗೆ ಕೂಡ ಕಾರಣನಾದವನಾಗಿ ಬಹು ದೊಡ್ಡವನಾದ ನಿನಗೆ ಏಕೆ ಎರಗದೆ ಇದ್ದಾರು ? ನಾಶವಿಲ್ಲದವನೆ, ದೇವತೆಗಳೊಡೆಯನೆ, ಜಗತ್ತಿಗೆಲ್ಲ ಆಧಾರನಾದವನೆ, ನೀನು ಸ್ಥೂಲವಸ್ತುಗಳಿಗಿಂತಲೂ ಸೂಕ್ಷ್ಮವಸ್ತುಗಳಿಗಿಂತಲೂ ಹೆಚ್ಚಿನವನೂ ನಾಶರಹಿತನೂ ಆದ ಬ್ರಹ್ಮನು. ನೀನು ಮೊದಲನೆಯ ದೇವನು; ಜಗತ್ತಿನಲ್ಲೆಲ್ಲ ತುಂಬಿಕೊಂಡಿರುವವನು; ಬಹು ಹಿಂದಿನವನು; ಈ ಜಗತ್ತಿಗೆ ಮುಖ್ಯಾಧಾರನು. ನೀನು ತಿಳಿಯುವವನು ಮತ್ತು ತಿಳಿಯಬರುವವುಗಳ ಸ್ವರೂಪನು. ಬಗೆಬಗೆಯ ರೂಪದವನೆ, ನೀನು ಜಗತ್ತಿನಲ್ಲೆಲ್ಲ ವ್ಯಾಪಿಸಿಕೊಂಡಿದ್ದೀಯೆ. ನೀನು ವಾಯು, ಯಮ, ಅಗ್ನಿ, ವರುಣ, ಚಂದ್ರ, ಬ್ರಹ್ಮ ಮತ್ತು ಆ ಬ್ರಹ್ಮನ ತಂದೆ. ನಿನಗೆ ಸಾವಿರಾರು ಸಲ ನಮಸ್ಕಾರ, ಮತ್ತೆಯೂ ನಿನಗೆ ಬಹಳವಾಗಿ ನಮಸ್ಕಾರ, ನಮಸ್ಕಾರ. ಸರ್ವರೂಪನೆ, ನಿನಗೆ ಮುಂಗಡೆಯಿಂದ ನಮಸ್ಕಾರ ಹಿಂಗಡೆಯಿಂದ ನಮಸ್ಕಾರ ಮತ್ತು ಎಲ್ಲ ಕಡೆಯಿಂದಲೂ ನಮಸ್ಕಾರ. ನಿನ್ನ ಶೌರ್ಯವು ಬಹಳ ಹೆಚ್ಚಿನದು. ನಿನ್ನ ಪರಾಕ್ರಮಕ್ಕೆ ಕೊನೆ ಇಲ್ಲ. ನೀನು ಜಗತ್ತಿನಲ್ಲೆಲ್ಲ ತುಂಬಿಕೊಂಡಿದ್ದಿ. ಆದ್ದರಿಂದ ನೀನು ಸರ್ವರೂಪನಾಗಿದ್ದಿ. ಈ ನಿನ್ನ ಮಹಿಮೆಯನ್ನು ತಿಳಿಯದೆ ನಾನು ಅವಿವೇಕದಿಂದಲೋ ಪ್ರೀತಿಯಿಂದಲೋ ಗೆಳೆಯನೆಂದು ತಿಳಿದು ಕೃಷ್ಣ, ಯಾದವಗೆಳೆಯ ಎಂದುತಿರಸ್ಕಾರದಿಂದ ಆಡಿದ ಮಾತುಗಳನ್ನೂ ಆಟವಾಡುವಾಗಲೂ ಮಲಗಿರುವಾಗಲೂ ಕುಳಿತಿರುವಾಗಳೂ ಉಣ್ಣುವಾಗಲೂ ಒಂಟಿಯಾಗಿರುವಾಗಲೂ ಎದುರಿಗೆ ಗೆಳೆಯರಿರುವಾಗಲೂ ಹಾಸ್ಯದಿಂದ ನಿನ್ನನ್ನು ಕಡೆಗಂಡದ್ದನ್ನೂ ಎಲ್ಲವನ್ನೂ ಕ್ಷಮಿಸೆಂದು ಸೆರೆಗೊಡ್ಡಿ ಬೇಡುತ್ತೇನೆ. ಕೃಷ್ಣ, ನಿನ್ನ ಆಳವನ್ನು ಅರಿಯಲಾಗುವುದಿಲ್ಲ; ನೀನು ಈ ಚರಾಚರವಾದ ಜಗತ್ತಿಗೆಲ್ಲ ತಂದೆ, ನೀನು ಪೂಜೆಗೆ ಯೋಗ್ಯನು ಮತ್ತು ದೊಡ್ಡ ಗುರು. ಮೂರು ಲೋಕದಲ್ಲಿಯೂ ನಿನಗೆ ಸಮಾನರಿಲ್ಲ. ಇನ್ನು ನಿನಗಿಂತ ಹೆಚ್ಚಿನವರು ಹೇಗಿದ್ದಾರು? ಆದ್ದರಿಂದ ನೀನು ಪ್ರಸನ್ನನಾಗೆಂದು ನಿನಗೆ ಅಡ್ಡಬಿದ್ದು ಮೈಬಗ್ಗಿ ಬೇಡಿಕೊಳ್ಳುತ್ತೇನೆ. ನೀನು ಜಗತ್ತಿಗೆಲ್ಲ ಒಡೆಯನು ಮತ್ತು ಹೊಗಳಿಕೆಗೆ ಪಾತ್ರನು. ಕೃಷ್ಣ, ಮಗುವನ್ನು ತಂದೆಯೂ

ಗೆಳೆಯನನ್ನು ಗೆಳೆಯನೂ ಹೆಂಡತಿಯನ್ನು ಗಂಡನೂ ಮನ್ನಿಸುವಂತೆ ನೀನು ನನ್ನನ್ನು ಮನ್ನಿಸಬೇಕು. ಹಿಂದೆ ಎಂದೂ ಕಾಣದ ಈ ನಿನ್ನ ರೂಪವನ್ನು ನೋಡಿ ಹರ್ಷಗೊಂಡು ಇರುವೆನು; ಹೆದರಿ ನನ್ನ ಮನಸ್ಸು ತಳಮಳಿಸುತ್ತಲೂ ಇರುವದು. ಕೃಷ್ಣ, ನನಗೆ ನಿನ್ನ ಮೊದಲಿನ ರೂಪವನ್ನೆ ತೋರಿಸು. ದೇವತೆಗಳೊಡೆಯನೆ, ಜಗತ್ತಿಗೆ ಆಧಾರನಾದವನೆ, ಪ್ರಸನ್ನನಾಗು. ನೀನು ಹಿಂದಿನಂತೆ ಕಿರೀಟವನ್ನಿಟ್ಟು ಕೊಂಡು ಗದೆಯನ್ನು ಹಿಡಿದು ಚಕ್ರವನ್ನು ತಿರುಗಿಸುತ್ತಿರುವ ರೂಪವನ್ನು ನೋಡಬೇಕೆಂದು ನನ್ನ ಆಸೆ. ಸಾವಿರಾರು ತೋಳುಗಳುಳ್ಳವನೆ, ವಿಶ್ವರೂಪ, ನಿನ್ನ ಆ ನಾಲ್ಕು ತೋಳುಗಳ ರೂಪವನ್ನು ತೋರಿಸು." ಎಂದು ಮೊರೆ ಇಟ್ಟನು. (೩೫–೪೬)

ಇದನ್ನು ಕೇಳಿ ಕೃಷ್ಣನು ಅರ್ಜುನನನ್ನು ಕುರಿತು "ಅರ್ಜುನ, ಈ ನನ್ನ ರೂಪವು ಬೆಳಕಿನಿಂದ ತುಂಬಿದ್ದು, ಜಗದ್ರೂಪವಾದದ್ದು, ಕೊನೆ ಇಲ್ಲದ್ದು, ಮೊದಲಿಲ್ಲದ್ದು, ಉತ್ಕೃಷ್ಟವಾದದ್ದು. ಇದನ್ನು ಬೇರೆ ಯಾರೂ ಎಂದೂ ಕಂಡಿಲ್ಲ. ಇದನ್ನು ನಾನು ನನ್ನ ಸಾಮರ್ಥ್ಯದಿಂದ ನಿನ್ನ ಮೇಲೆ ಅನುಗ್ರಹಿಸಿ ತೋರಿಸಿದೆನು. ವೇದಗಳನ್ನೆಲ್ಲ ಓದಿದರೂ ಯಜ್ಞಗಳನ್ನು ಮಾಡಿದರೂ ದಾನಗಳನ್ನು ಕೊಟ್ಟರೂ ಕರ್ಮಗಳನ್ನು ನೆರವೇರಿಸಿದರೂ ಭಯಂಕರವಾದ ಉಪವಾಸ ವ್ರತಗಳನ್ನು ಸಾಧಿಸಿದರೂ ಈ ನನ್ನನ್ನು ಭೂಲೋಕದಲ್ಲಿ ನೋಡುವದಕ್ಕೆ ನಿನ್ನ ಹೊರತು ಯಾರಿಗೂ ಆಗದು. ನನ್ನ ಈ ಭಯಂಕರವಾದ ರೂಪವನ್ನು ನೋಡಿ ತಳಮಳಿಸಬೇಡ. ನಿನಗೆ ಮನಸ್ಸು ಮುಂದುಗಾಣದಂತೆ ಆಗದಿರಲಿ. ಹೆದರಿಕೆಯನ್ನು ಬಿಡು. ಮನಸ್ಸು ಸಮಾಧಾನವನ್ನು ಪಡೆಯಲಿ. ಮತ್ತೆ ನೀನು ನನ್ನ ಆ ಹಿಂದಿನ ರೂಪವನ್ನು ಚೆನ್ನಾಗಿ ನೋಡು" ಎಂದು ಹೇಳಿ ತನ್ನ ಆ ರೂಪನ್ನು ತೋರಿಸಿದನು ಮತ್ತು ಹಿಂದಿನಂತೆ ಮನೋಹರವಾದ ದೇಹವುಳ್ಳವನಾಗಿ ಆ ಹೆದರಿದ ಅರ್ಜುನನನ್ನು ಸಮಾಧಾನಗೊಳಿಸಿದನು. (೪೭–೫೦)

ಇಷ್ಟಾದಮೇಲೆ ಅರ್ಜುನನು ಕೃಷ್ಣನನ್ನು ಕುರಿತು ಆ ಶಾಂತವಾದ ಮನುಷ್ಯರೂಪವನ್ನು ನೋಡಿದಮೇಲೆ ತನಗೆ ಸಮಾಧಾನವಾಗಿ ಮೊದಲಿನ ಸ್ಥಿತಿಯುಂಟಾಯಿತೆಂದು ಹೇಳಿದನು. ಆಗ ಕೃಷ್ಣನು ಅರ್ಜುನನನ್ನು ಕುರಿತು "ಅರ್ಜುನ, ನೀನು ನೋಡಿದ ಈ ರೂಪ ಯಾರಿಗೂ ನೋಡುವುದಕ್ಕೆ ದೊರೆಯತಕ್ಕದ್ದಲ್ಲ. ಇದನ್ನು ನೋಡಬೇಕೆಂದು ದೇವತೆಗಳು ಕೂಡ

ಯಾವಾಗಲೂ ಬಾಯಿನೀರು ಸುರಿಸುವರು. ಎಷ್ಟು ವೇದಗಳನ್ನು ಓದಿದರೂ ಎಷ್ಟು ಉಪವಾಸಗಳನ್ನು ಮಾಡಿದರೂ ಎಷ್ಟು ದಾನವನ್ನು ಕೊಟ್ಟರೂ ಎಷ್ಟು ಯಜ್ಞಗಳನ್ನು ನಡೆಸಿದರೂ ಅವರು ಈಗ ನೀನು ನೋಡಿದ ರೂಪವನು. ಕಾಣಲಾರರು. ಇನ್ನೊಂದನ್ನು ಮನಸ್ಸಿಗೆ ಹಚ್ಚಿಕೊಳ್ಳದ ಭಕ್ತಿಯಿಂದ ಮಾತ್ರ ಈ ನನ್ನ ಸ್ವರೂಪವನ್ನು ತಿಳಿಯುವದಕ್ಕೂ ಕಾಣುವದಕ್ಕೂ ತಮ್ಮ ಆತ್ಮವೆಂಬ ಬುದ್ಧಿಯಿಂದ ನನ್ನೊಳಗೆ ಸೇರುವದಕ್ಕೂ ಆಗುತ್ತದೆ. ನನಗೆ ಪ್ರೀತಿಯಾಗಲೆಂದು ಕರ್ಮವನ್ನು ಮಾಡುವವನೂ ನನ್ನನ್ನೇ ಗತಿಯೆಂದು ತಿಳಿಯುವವನೂ ನನ್ನನ್ನೇ ಭಜಿಸುವವನೂ ಹೊರಗಣ ವಿಷಯಗಳಲ್ಲಿ ಆಸಕ್ತಿ ಇಲ್ಲದಿರುವವನೂ ಯಾವ ಪ್ರಾಣಿಯಲ್ಲಿಯೂ ಹಗೆತನವಿಲ್ಲದಿರುವವನೂ ನನ್ನನ್ನು ಪಡೆಯುತ್ತಾನೆ." ಎಂದು ಹೇಳಿದನು. (೫೧–೫೫)

ಅಧ್ಯಾಯ-೧೨

ಭಕ್ತಿಯ ವಿಚಾರ

ಇದನ್ನು ಕೇಳಿದ ಮೇಲೆ ಅರ್ಜುನನು ಕೃಷ್ಣನನ್ನು ಕುರಿತು "ಕೃಷ್ಣ, ಕೆಲವರು ಯಾವಾಗಲೂ ನಿನ್ನಲ್ಲಿ ಮನಸ್ಸನ್ನಿಟ್ಟು ನಿನ್ನ ಮೇಲಿನ ಪ್ರೀತಿಯಿಂದ ನಿನ್ನನ್ನೆ ಎಡೆಬಿಡದೆ ಧ್ಯಾನಿಸುತ್ತಿರುವರು; ಇನ್ನು ಕೆಲವರು ಕಣ್ಣಿಗೆ ಕಾಣದ ಮತ್ತು ನಾಶವಿಲ್ಲದ ಸ್ವರೂಪವನ್ನು ಧ್ಯಾನಿಸುವರು. ಇವರಲ್ಲಿ ಯೋಗವನ್ನು ಚೆನ್ನಾಗಿ ತಿಳಿದವರು ಯಾರು?" ಎಂದು ಕೇಳಿದನು. (೧)

ಕೃಷ್ಣನು ಹೇಳಿದ್ದು :-

ನನ್ನಲ್ಲಿ ಮನಸ್ಸಿಟ್ಟು ಹೆಚ್ಚು ವಿಶ್ವಾಸದಿಂದ ಎಡೆಬಿಡದೆ ನನ್ನನ್ನೆ ಧ್ಯಾನಿಸುವವರು ಬಹಳ ಹೆಚ್ಚಿನ ಯೋಗಿಗಳೆಂದು ನನ್ನ ಅಭಿಪ್ರಾಯ. ಕಣ್ಣಿಗೆ ಕಾಣದ ನನ್ನ ಸ್ವರೂಪವು ಇನ್ನೊಬ್ಬರಿಗೆ ತೋರಿಸುವದಕ್ಕೆ ಬರುವದಿಲ್ಲ. ಅದು ನಾಶವಿಲ್ಲದ್ದು. ಅದು ಎಲ್ಲೆಲ್ಲಿಯೂ ತುಂಬಿರುವದು. ಅದನ್ನು ಮನಸ್ಸಿಗೆ ತಂದುಕೊಳ್ಳುವದಕ್ಕೆ ಆಗುವದಿಲ್ಲ. ಅದು ಯಾವ ಬದಲಾವಣೆಯನ್ನೂ ಹೊಂದದಿರುವದು. ಅದು ಅಲುಗಾಡದ್ದು ಮತ್ತು ಯಾವಾಗಲೂ ಇರುವಂಥದ್ದು. ಅದನ್ನು ಎಡೆಬಿಡದೆ ಧ್ಯಾನಿಸುವವರು ಇಂದ್ರಿಯಗಳನ್ನೆಲ್ಲ ಬಿಗಿಹಿಡಿದು ಎಲ್ಲವನ್ನೂ ಒಂದೇ ರೀತಿ ಕಾಣುತ್ತ ಎಲ್ಲ ಪ್ರಾಣಿಗಳಿಗೂ ಹಿತವನ್ನು ಮಾಡಬೇಕೆನ್ನುವವರಾಗಿದ್ದು ನನ್ನನ್ನೆ ಪಡೆಯುತ್ತಾರೆ. ಕಣ್ಣಿಗೆ ಕಾಣದ ಸ್ವರೂಪದಲ್ಲಿ ಮನಸ್ಸನ್ನಿಡುವವರಿಗೆ ಆಯಾಸವು

ಬಹು ಹೆಚ್ಚು. ಏಕೆಂದರೆ: ದೇಹವೇ ತಾವೆಂಬ ಅಭಿಮಾನ ಉಳ್ಳವರು ಕಣ್ಣಿಗೆ ಕಾಣದ ಆ ಸ್ವರೂಪವನ್ನು ಮನಸ್ಸಿಗೆ ತಂದುಕೊಳ್ಳುವದು ಕಷ್ಟ. ಎಲ್ಲ ಕರ್ಮಗಳನ್ನೂ ನನಗೊಪ್ಪಿಸಿ ನನ್ನನ್ನೆ ಗತಿಯೆಂದು ನನ್ನನ್ನು ತಮ್ಮ ಆತ್ಮವೆಂದು ಒಂದೇ ಮನಸ್ಸಿನಿಂದ ಧ್ಯಾನಿಸುತ್ತ ನನ್ನಲ್ಲಿ ಮನಸ್ಸಿಟ್ಟವರನ್ನು ನಾನು ತಡವಿಲ್ಲದೆ ಸಾವಿನ ರೂಪವಾದ ಸಂಸಾರವೆಂಬ ಸಮುದ್ರದಿಂದ ಮೇಲಕ್ಕೆತ್ತುತ್ತೇನೆ. (೨-೭)

ನನ್ನಲ್ಲಿಯೇ ಮನಸ್ಸನ್ನಿಡು. ನನ್ನಲ್ಲಿಯೇ ಬುದ್ಧಿಯನ್ನಿಡು. ಈ ದೇಹವನ್ನು ಬಿಟ್ಟ ಮೇಲೆ ನೀನು ನನ್ನಲ್ಲಿಯೇ ಇರುತ್ತಿ. ಸಂಶಯವಿಲ್ಲ. ಕದಲದಂತೆ ಮನಸ್ಸನ್ನು ನನ್ನಲ್ಲಿಡುವದಕ್ಕೆ ಆಗದೆಹೋದರೆ ಅದನ್ನು ನನ್ನಲ್ಲಿ ನಿಲ್ಲಿಸುವ ಉಪಾಯವನ್ನೆ ಮತ್ತೆ ಮತ್ತೆ ಮಾಡುತ್ತ ನನ್ನನ್ನು ಪಡೆಯಬೇಕೆಂದು ಬಯಸು. ಆ ಅಭ್ಯಾಸವೂ ಆಗದಿದ್ದರೆ ನನಗೆ ಪ್ರೀತಿಯಾಗಲೆಂದು ಕರ್ಮವನ್ನು ಮಾಡುವದೇ ಮುಖ್ಯವೆಂದು ತಿಳಿಯುವವನಾಗು. ನನಗೆ ಪ್ರೀತಿಯಾಗಲೆಂದು ಕರ್ಮಗಳನ್ನು ಮಾಡಿದರೂ ಮನಸ್ಸಿನ ಹೊಲಸನ್ನು ಕಳೆದುಕೊಂಡು ಆತ್ಮಸ್ವರೂಪದ ಅರಿವನ್ನು ಪಡೆಯುತ್ತಿ. ಆದೂ ನಿನ್ನಿಂದಾಗದಿದ್ದರೆ ಮನಸ್ಸನ್ನು ಬಿಗಿ ಹಿಡಿದು ಅದರೊಳಕ್ಕೆ ನನ್ನನ್ನೆ ತಂದುಕೊಂಡು ಕರ್ಮಗಳನ್ನು ಮಾಡುತ್ತ ಆ ಯಾವ ಕರ್ಮಕ್ಕೂ ಫಲದಾಸೆಯನ್ನು ಮಾಡದೆ ಇರುವವನಾಗು. ಮತ್ತೆ ಮತ್ತೆ ಮನಸ್ಸನ್ನು ನಿಲ್ಲಿಸುವದಕ್ಕೆ ಹೋಗುವ ಬರೀ ಅಭ್ಯಾಸಕ್ಕಿಂತ ಆತ್ಮನ ವಿಚಾರವಾಗಿ ಶಾಸ್ತ್ರವು ಹೇಳುವದನ್ನು ತಿಳಿದುಕೊಳ್ಳುವದು ಹೆಚ್ಚಿನದು. ಬರೀ ಆ ತಿಳಿವಳಿಕೆಗಿಂತಲೂ ಆ ತಿಳಿವಳಿಕೆಯೊಡನೆ ಧ್ಯಾನಿಸುವದು ಹೆಚ್ಚಿನದು. ಕರ್ಮಗಳ ಫಲದಾಸೆಯನ್ನು ಬಿಡುವುದು ಧ್ಯಾನಕ್ಕಿಂತ ಹೆಚ್ಚಿನದು. ಫಲದಾಸೆಯನ್ನು ಬಿಟ್ಟಮೇಲೆ ಶಾಂತಿಗೆ ತಡವಿಲ್ಲ. (೮-೧೨)

ಆ ನಿಜವಾದ ಭಕ್ತನಿಗೆ ಯಾವ ಪ್ರಾಣಿಗಳ ಮೇಲೆಯೂ ಹಗೆತನವಿರುವದಿಲ್ಲ. ಅವನು ಎಲ್ಲರಿಗೂ ಗೆಳೆಯ. ಅವನಿಗೆ ಎಲ್ಲರ ಮೇಲೆಯೂ ಮರುಕ. ಅವನಿಗೆ ತಾನು ತನ್ನದೆಂಬ ಹೆಮ್ಮೆ ಇಲ್ಲ. ಅವನು ದುಃಖ ಬಂದಾಗಲೂ ಸುಖ ಬಂದಾಗಲೂ ಒಂದೇ ರೀತಿ ಇರುವನು. ಸೈರಣೆಯು ಅವನ ಹುಟ್ಟು ಗುಣ. ಅವನು ಯಾವಾಗಲೂ ತೃಪ್ತನಾಗಿರುವನು. ಅವನ ಮನಸ್ಸು ಯಾವಾಗಲೂ ಹಿಡಿತದಲ್ಲಿರುವದು. ಅವನು ತನ್ನ ಸ್ವರೂಪವನ್ನು ಸಂಶಯವಿಲ್ಲದಂತೆ ತಿಳಿದಿರುವನು. ಅವನ ಮನಸ್ಸೂ ಬುದ್ಧಿಯೂ ನನ್ನೊಳಗೆ ನೆಲೆಗೊಂಡಿರುವವು.

ಅವನಿಂದ ಯಾರಿಗೂ ತಳಮಳ ಉಂಟಾಗುವುದಿಲ್ಲ. ಅವನು ಯಾರಿಂದಲೂ ತಳಮಳಗೊಳ್ಳುವದೂ ಇಲ್ಲ. ಅವನಲ್ಲಿ ಹರ್ಷ, ಸಿಟ್ಟು ಹೆದರಿಕೆ, ತಳಮಳ- ಇವು ತಲೇ ಎತ್ತುವದಿಲ್ಲ. ಅವನಿಗೆ ಯಾವ ಆಸೆಯೂ ಇರುವದಿಲ್ಲ. ಅವನು ಕೊಳೆ ಇಲ್ಲದಿರುವನು. ಅವನು ಹಿಡಿದ ಕೆಲಸವನ್ನು ಸಾಧಿಸುವನು. ಅವನು ಯಾರ ಪಕ್ಷವನ್ನೂ ಹಿಡಿಯುವದಿಲ್ಲ. ಅವನಿಗೆ ವ್ಯಥೆ ತಾಕುವದಿಲ್ಲ. ಅವನು ತನಗಾಗಿ ಯಾವ ಉದ್ಯೋಗವನ್ನೂ ಹಿಡಿಯುವದಿಲ್ಲ. ಅವನು ಹಿಗ್ಗುವದಿಲ್ಲ, ತಗ್ಗುವದಿಲ್ಲ, ಅಳುವದಿಲ್ಲ, ಬಯಸುವದಿಲ್ಲ. ಅವನು ಒಳ್ಳೆಯ ಕೆಲಸಗಳನ್ನೂ ಕೆಟ್ಟ ಕೆಲಸಗಳನ್ನೂ ಬಿಟ್ಟವನಾಗಿರುವನು. ಅವನಿಗೆ ಹಗೆಗಳೂ ಗೆಳೆಯರೂ ಒಂದೆ; ಮಾನವೂ ಅವಮಾನವೂ ಒಂದೆ. ಶೀತ, ಉಷ್ಣ, ಸುಖ, ದುಃಖ, - ಇವುಗಳನ್ನು ಅವನು ಒಂದೇ ರೀತಿಯಲ್ಲಿ ಕಾಣುವನು. ಅವನಿಗೆ ವಿಷಯಗಳ ಮೇಲೆ ಪ್ರೀತಿ ಇರುವದಿಲ್ಲ. ಹೊಗಳಿಕೆಯೂ ಬಯ್ಗಳೂ ಅವನಿಗೆ ಒಂದೆ. ಅವನಿಗೆ ಹರಟೆ ಸೇರುವದಿಲ್ಲ. ಅವನಿಗೆ ಸಿಕ್ಕಿದಷ್ಟರಿಂದಲೆ ತೃಪ್ತಿ. ಅವನಿಗೆ ಮನೆಮಠಗಳ ನಿಯಮವಿಲ್ಲ. ಅವನ ಮನಸ್ಸು ನನ್ನಲ್ಲಿ ನೆಲೆಗೊಂಡಿರುವದು. ಇಂಥ ಭಕ್ತನು ನನಗೆ ಬಹಳ ಬೇಕಾದವನು. ಭಕ್ತನ ಈ ನಡೆವಳಿಕೆಗಳು ಕರ್ಮಕ್ಕೆ ಸಮ್ಮತವಾದವುಗಳು ಮತ್ತು ಸಾವಿನ ಹೆದರಿಕೆಯನ್ನು ತಪ್ಪಿಸುವಂಥವುಗಳು. ಇವುಗಳನ್ನು ಎಡೆಬಿಡದೆ ಮೈಗೂಡಿಸಿಕೊಂಡು ನನ್ನಲ್ಲಿ ವಿಶ್ವಾಸವಿಟ್ಟು ನನ್ನನ್ನೆ ಗತಿಯೆಂದುಳಿದ ಭಕ್ತರು ನನಗೆ ಬಹಳ ಬೇಕಾದವರು. (೧೩-೨೦)

ಅಧ್ಯಾಯ-೧೩

ಹೊಲ ಮತ್ತು ಹೊಲದ ತಿಳಿವುಗಾರ

ಶ್ರೀ ಕೃಷ್ಣನ ಮಾತು ಮುಂದೆ ಸಾಗಿದ್ದು :-

ಅರ್ಜುನ, ಈ ಶರೀರವೆಂಬುವದು ಒಂದು ಹೊಲವೆಂದೂ ಇದನ್ನು ಯಾವನು ತನ್ನ ಹೊರಗಿನದಾಗಿ ತಿಳಿಯುವನೋ ಅವನು ಹೊಲದ ತಿಳಿವುಗಾರನೆಂದೂ ದೊಡ್ಡವರು ಹೇಳುವರು. ಎಲ್ಲ ಹೊಲಗಳಲ್ಲಿಯೂ ನನ್ನನ್ನೆ ಹೊಲದ ತಿಳಿವುಗಾರನೆಂದು ತಿಳಿ. ಹೊಲದ ಮತ್ತು ಹೊಲದ ತಿಳಿವುಗಾರನ ವಿಷಯವಾದ ತಿಳಿವಳಿಕೆಯೆಂಬುವದು ತಿಳಿವಳಿಕೆಯೆನಿಸಿಕೊಳ್ಳುವುದಕ್ಕೆ ತಕ್ಕದ್ದೆಂದು ನನ್ನ ಅಭಿಪ್ರಾಯ. ಹೊಲವು ಯಾವ ಸ್ವಭಾವದ್ದೆಂಬುದನ್ನೂ ಯಾವ ಧರ್ಮಗಳನ್ನುಳ್ಳದ್ದೆಂಬುದನ್ನೂ ಯಾವ ಬದಲಾವಣೆಗಳನ್ನು ಹೊಂದತಕ್ಕದ್ದೆಂಬುದನ್ನೂ ಯಾವದರಿಂದ ಯಾವದಾಯಿತೆಂಬುದನ್ನೂ ಹೊಲದ ತಿಳಿವುಗಾರನು ಯಾರೆಂಬುದನ್ನೂ ಅವನ ಶಕ್ತಿಗಳೇನೆಂಬುದನ್ನೂ ಸ್ವಲ್ಪದರಲ್ಲಿ ಹೇಳುತ್ತೇನೆ. ಋಷಿಗಳೂ ವೇದದ ಮಾತುಗಳೂ ಕಾರಣಗಳನ್ನು ಕೊಟ್ಟು ಗೊತ್ತುಮಾಡಿ ಹೇಳುವ ಉಪನಿಷತ್ತುಗಳ ಮಾತುಗಳೂ ಅದನ್ನು ಅನೇಕ ಬಗೆಯಾಗಿ ಹೇಳಿರುವವು. (೧-೪)

ಐದು ಭೂತಗಳು, ನಾನುನಾನೆಂದು ತೋರಿಕೊಳ್ಳುವ ತತ್ತ್ವ, ಬುದ್ಧಿ, ಮಾಯಾಶಕ್ತಿ, ಹನ್ನೊಂದು ಇಂದ್ರಿಯಗಳು, ಇಂದ್ರಿಯಗಳಿಗೆ ತಿಳಿಯಬರುವ ಐದುಬಗೆಯ ವಿಷಯಗಳು, ಬಯಕೆ, ಹಗೆತನ, ಸುಖ, ದುಃಖ, ದೇಹೇಂದ್ರಿಯಗಳ

ಗುಂಪು; ಮನಸ್ಸಿನ ವೃತ್ತಿ, ಇವುಗಳನ್ನು ಬಿಗಿ ಹಿಡಿಯುವ ಪ್ರಯತ್ನ-ಇವೂ, ಇವುಗಳಿಂದಾದವುಗಳೂ ಎಲ್ಲ ಹೊಲವೆಂದು ಸಂಕ್ಷೇಪವಾಗಿ ತಿಳಿ. (೫-೬)

ಹೆಮ್ಮೆ ಇಲ್ಲದಿರುವದು, ತನ್ನಲ್ಲಿಲ್ಲದ ಹೆಚ್ಚಿನ ಧರ್ಮವನ್ನು ಇದ್ದಂತೆ ತೋರಿಸಿಕೊಳ್ಳದೆ ಇರುವದು, ಪೀಡಿಸದಿರುವದು, ಸಮಾಧಾನ, ಒಳಗೂ ಹೊರಗೂ ಒಂದಾಗಿರುವದು, ಗುರುಸೇವೆ, ಕೊಳೆ ಇಲ್ಲದಿರುವದು, ಎಡೆಬಿಡದ ಪ್ರಯತ್ನ, ಮನಸ್ಸನ್ನು ಬಿಗಿಹಿಡಿಯುವದು, ವಿಷಯಗಳು ಬೇಡವೆನಿಸುವದು, ಗರ್ವವಿಲ್ಲದಿರುವದು, ಹುಟ್ಟನ್ನೂ ಮುಪ್ಪನ್ನೂ ರೋಗವನ್ನೂ ಸಾವನ್ನೂ ದುಃಖವನ್ನೂ ದೋಷದಿಂದ ಕೂಡಿದವುಗಳೆಂದು ಯೋಚಿಸುತ್ತಿರುವದು, ವಿಷಯಗಳಲ್ಲಿ ಪ್ರೀತಿ ಇಲ್ಲದಿರುವದು, ಮಕ್ಕಳು ಮರಿ ಮೊದಲಾದವರ ಮೇಲೆ ಅತಿ ಮಮತೆ ಇಲ್ಲದಿರುವದು, ಬೇಕೆನಿಸಿದ್ದು ಬಂದರೂ ಬೇಡವೆನಿಸಿದ್ದು ಬಂದರೂ ಯಾವಾಗಲೂ ಮನಸ್ಸು ಒಂದೇ ರೀತಿ ಇರುವದು, ನನ್ನನ್ನೆ ಗತಿಯೆಂಬ ಎಡಬಿಡದ ಭಕ್ತಿ, ಒಂಟಿಯಾಗಿರುವದಕ್ಕಾಗುವ ಕಡೆ ಇರುವದು, ಜನರ ಗುಂಪು ಬೇಡವೆನಿಸುವದು, ಯಾವಾಗಲೂ ಆತ್ಮ ವಿಚಾರವನ್ನು ಮೈಗೂಡಿಸಿಕೊಳ್ಳುವದು, ಮೋಕ್ಷದ ವಿಷಯವನ್ನೆ ಹಂಬಲಿಸುತ್ತಿರುವದು- ಇವೆಲ್ಲ ಜ್ಞಾನದ ಸಾಧನಗಳೆನಿಸುವವು. ಇವಲ್ಲದವುಗಳೆಲ್ಲ ಅಜ್ಞಾನ ಎನಿಸುವುವು. (೭-೧೧)

ಯಾವದನ್ನು ತಿಳಿಯಬೇಕೋ ಅದನ್ನು ಹೇಳುತ್ತೇನೆ. ಅದನ್ನು ತಿಳಿದರೆ ಮೋಕ್ಷವಾಗುತ್ತದೆ. ಅದು ಪರಬ್ರಹ್ಮ, ಅದಕ್ಕೆ ಹುಟ್ಟುವಿಕೆ ಇಲ್ಲ. ಅದು ಇರುವದೆನಿಸುವದೂ ಇಲ್ಲ; ಇಲ್ಲವೆನಿಸುವದೂ ಇಲ್ಲ. ಅದಕ್ಕೆ ಕೈ, ಕಾಲು, ಕಣ್ಣು, ತಲೆ, ಬಾಯಿ ಕಿವಿ,-ಇವು ಎಲ್ಲ ಕಡೆಯಲ್ಲಿಯೂ ಇವೆ. ಅದು ಎಲ್ಲವನ್ನೂ ಮುಸುಕಿಕೊಂಡಿರುವದು. ಅದು ಎಲ್ಲ ಇಂದ್ರಿಯಗಳ ಗುಣಗಳಿಂದ ಕೂಡಿದಂತೆ ತೋರುವದು: ಆದರೆ ಯಾವ ಇಂದ್ರಿಯಗಳೂ ಇಲ್ಲದ್ದು ಅದಕ್ಕೆ ಯಾವುದರ ಮೇಲೆಯೂ ಹೆಚ್ಚು ಪ್ರೇಮವಿಲ್ಲ. ಅದು ಎಲ್ಲ ವಸ್ತುಗಳಿಗೂ ಆಧಾರ. ಅದು ಗುಣಗಳಿಗೆ ಕಟ್ಟುಬಿದ್ದದ್ದಲ್ಲ; ಆದರೆ ಗುಣಗಳ ಫಲಗಳನ್ನು ಉಣ್ಣುವಂಥದ್ದು. ಅದು ಎಲ್ಲ ಪ್ರಾಣಿಗಳ ಒಳಗೂ ಹೊರಗು ಹರಡಿಕೊಂಡಿರುವದು. ಓಡಾಟವಿಲ್ಲದವುಗಳೂ ಓಡಾಡುವವುಗಳೂ ಎಲ್ಲ ಅದೇ. ಸೂಕ್ಷ್ಮವಾದ್ದರಿಂದ ಅದನ್ನು ತಿಳಿಯಲಾಗುವದಿಲ್ಲ. ಅದು ಹರಿದಾಟದ ಮನಸ್ಸಿನವರಿಗೆ ಬಹುದೂರ

ಮತ್ತು ಮನಸ್ಸು ಹಿಡಿತದಲ್ಲಿರುವವರಿಗೆ ಬಹು ಹತ್ತಿರ. ಅದು ಬಿಡಿಬಿಡಿಯಾಗಿರುವ ಪ್ರಾಣಿಗಳಲ್ಲಿ ಬಿಡಿ ಬಿಡಿಯಾಗಿಲ್ಲ. ಆದರೂ ಬಿಡಿಬಿಡಿಯಾಗಿರುವಂತೆ ತೋರುವದು. ತಿಳಿಯಬೇಕಾದ ಆ ಬ್ರಹ್ಮವು ಜಗತ್ತಿಗೆ ಆಧಾರವಾಗಿಯೂ ಜಗತ್ತನ್ನು ನುಂಗುವದಾಗಿಯೂ ಜಗತ್ತನ್ನು ಹಡೆಯುವದಾಗಿಯೂ ಇರುವದು. ಬೆಳಗುವ ವಸ್ತುಗಳಿಗೆಲ್ಲ ಅದು ಬೆಳಕನ್ನು ಕೊಡ ತಕ್ಕದ್ದಾಗಿರುವದು. ಅದು ಜಡವಸ್ತುಗಳಿಗಿಂತ ಹೆಚ್ಚಿನದಾದ ಜ್ಞಾನಸ್ವರೂಪವು. ಅದು ತಿಳಿಯಬೇಕಾದದ್ದು ಮತ್ತು ತಿಳಿಯಲಾದದ್ದೆನಿಸತಕ್ಕದ್ದು, ಅದು ಎಲ್ಲ ಪ್ರಾಣಿಗಳ ಬುದ್ಧಿಯಲ್ಲಿಯೂ ನೆಲಸಿರುವದು. (೧೨-೧೮)

ಹೀಗೆ ಹೊಲವನ್ನೂ ಜ್ಞಾನದ ಸಾಧನಗಳನ್ನೂ ತಿಳಿಯಬೇಕಾದ ಬ್ರಹ್ಮವನ್ನೂ ಸ್ವಲ್ಪದರಲ್ಲಿ ಹೇಳಿದ್ದಾಯಿತು. ನನ್ನ ಭಕ್ತನು ಇದನ್ನು ತಿಳಿದು ನನ್ನ ಸ್ವರೂಪನಾಗುವದಕ್ಕೆ ತಕ್ಕವನಾಗುತ್ತಾನೆ. ಹೊಲಕ್ಕೂ ಹೊಲದ ತಿಳಿವುಗಾರನಿಗೂ ಮೊದಲೆಂಬುದಿಲ್ಲ. ಹೊಲಗಳನ್ನೂ ಸತ್ತ್ವ, ರಜ, ತಮ-ಎಂಬ ಗುಣಗಳನ್ನೂ ಪ್ರಕೃತಿಯಿಂದ ಹುಟ್ಟಿದವುಗಳೆಂದು ತಿಳಿ, ದೇಹವೂ ಇಂದ್ರಿಯಗಳೂ ಆಗಿರುವದಕ್ಕೆ ಮಾಯಾಶಕ್ತಿಯೇ ಕಾರಣ; ಸುಖದುಃಖಗಳ ಅನುಭವಕ್ಕೆ ಜೀವನು ಕಾರಣ. ಹೊಲದ ತಿಳಿವುಗಾರನು ಹೊಲವನ್ನೆ ತಾನೆಂದು ತಿಳಿದವನಾಗಿ ಮಾಯೆಯಿಂದಾದ ಗುಣಗಳನ್ನು ಅನುಭವಿಸುತ್ತಾನೆ. ಅವನು ಒಳ್ಳೆಯ ಮತ್ತು ಕೆಟ್ಟ ಬಸಿರುಗಳಲ್ಲಿ ಬರುವದಕ್ಕೆ ಗುಣಗಳಿಂದಾದ ವಿಷಯಗಳ ಮೇಲಿನ ಪ್ರೀತಿಯೇ ಕಾರಣ. ಅವನು ಹತ್ತಿರದಲ್ಲಿದ್ದು ನೋಡುವವನು: ದೇಹೇಂದ್ರಿಯಗಳ ಕೆಲಸಕ್ಕೆ ಒಪ್ಪಿಗೆಯನ್ನು ಕೊಡುವವನು; ಮತ್ತು ಅವುಗಳಿಗೆ ಚೈತನ್ಯವನ್ನು ಕೊಟ್ಟು ಹುರಿದುಂಬಿಸುವವನು. ಅವನು ಅನುಭವಿಸುವವನು, ಒಡೆಯನು ಮತ್ತು ತೀರ ಒಳಗಿನ ಆತ್ಮನಾದವನು. ಇದು ಈ ಶರೀರದಲ್ಲಿ ಹೆಚ್ಚಿನವನಾದ ತಿಳಿವುಗಾರನ ವಿಷಯ. ಯಾವನು ತಿಳಿವುಗಾರನನ್ನೂ ಮಾಯಾಶಕ್ತಿಯನ್ನೂ ಹೀಗೆ ತಿಳಿಯುತ್ತಾನೆ ಅವನು ಯಾವ ಬಗೆಯಲ್ಲಿದ್ದರೂ ಮತ್ತೆ ಹುಟ್ಟುವದಿಲ್ಲ. (೧೮-೨೩)

ಕೆಲವರು ಧ್ಯಾನದಿಂದ, ಕೆಲವರು ವಿಚಾರದ ಮೂಲಕವಾದ ವಿವೇಕದ ಮಾರ್ಗದಿಂದ, ಇನ್ನು ಕೆಲವರು ಈಶ್ವರನ ಪ್ರೀತಿಗಾಗಿ ಕರ್ಮವನ್ನು ಮಾಡುವದರಿಂದ ಶುದ್ಧವಾದ ಮನಸ್ಸಿನಲ್ಲಿ ತಿಳಿವುಗಾರನಾದ ತಮ್ಮ ಆತ್ಮನನ್ನು ನೋಡುತ್ತಾರೆ. ಬೇರೆ ಕೆಲವರು ಹೀಗೆ ತಿಳಿಯಲಾರದವರಾಗಿ ದೊಡ್ಡವರಿಂದ ಕೇಳಿ

ಅವರು ಹೇಳಿದಂತೆ ಎಡೆಬಿಡದೆ ಚಿಂತಿಸುತ್ತಿರುತ್ತಾರೆ. ದೊಡ್ಡವರ ಮಾತಿನಲ್ಲಿ ಹೆಚ್ಚಿನ ಭರವಸೆವುಳ್ಳ ಅವರು ಕೂಡ ಹುಟ್ಟುಸಾವನ್ನು ದಾಟಿಯೇ ದಾಟುತ್ತಾರೆ.

(೨೪-೨೫)

ಅರ್ಜುನ, ಚೇತನವೆಂದೂ ಜಡವೆಂದೂ ಲೋಕದಲ್ಲಿ ಏನೇನು ಹುಟ್ಟುತ್ತದೊ ಅದೆಲ್ಲ ಹೊಲದ ತಿಳಿವುಗಾರನು ಹೊಲವನ್ನು ತಾನೆಂದು ತಿಳಿಯುವದರಿಂದ ಆದದ್ದೆಂದು ತಿಳಿ. ಎಲ್ಲಕ್ಕೂ ಸ್ವಾಮಿಯಾದ ಆತ್ಮನು ಎಲ್ಲ ಪ್ರಾಣಿಗಳಲ್ಲಿಯೂ ಒಂದೇ ಸಮನಾಗಿರುತ್ತಾನೆ. ಎಲ್ಲವೂ ನಾಶವಾದರೂ ಅವನಿಗೆ ನಾಶವಿಲ್ಲ. ಅವನನ್ನು ಹೀಗೆಂದು ನೋಡುವವನು ನಿಜವನ್ನು ನೋಡುವವನಾಗುತ್ತಾನೆ. ಎಲ್ಲ ಪ್ರಾಣಿಗಳಲ್ಲಿಯೂ ಒಂದೇ ರೀತಿ ಇರುವ ಒಡೆಯನನ್ನು ಕಾಣುವವನು ಹೆಚ್ಚಿನ ಗತಿಯನ್ನು ಹೊಂದುತ್ತಾನೆ. ಅವನನ್ನು ಕಾಣದವನು ತನ್ನನ್ನು ತಾನು ಕೊಂದುಕೊಂಡವನಾಗುತ್ತಾನೆ. (೨೬-೨೮)

ಹೇಗೆ ಹೇಗೆ ನೋಡಿದರೂ ಧರ್ಮಗಳೆಲ್ಲ ಮಾಯಾಶಕ್ತಿಯಿಂದಲೇ ಆಗುವವುಗಳು. ಆತ್ಮನು ಏನನ್ನೂ ಮಾಡುವವನಲ್ಲ. ಹೀಗೆ ಯಾವನು ನೋಡುವನೋ ಅವನು ಸರಿಯಾಗಿ ನೋಡುವವನೆನಿಸುತ್ತಾನೆ. ಬಿಡಿಬಿಡಿಯಾಗಿರುವ ವಸ್ತುಗಳೆಲ್ಲ ಒಬ್ಬನಾದ ಆತ್ಮನಲ್ಲಿಯೇ ತೋರತಕ್ಕವುಗಳೆಂದೂ ಜಗತ್ತಾಗಿ ಹೊರಬಿದ್ದಿರುವದೆಲ್ಲ ಆತ್ಮನಿಂದಲೇ ಎಂದೂ ಕಾಣುವವನು ಬ್ರಹ್ಮ ಸ್ವರೂಪವನ್ನು ಪಡೆಯುತ್ತಾನೆ. ನಮ್ಮೊಳಗಣ ಆತ್ಮನು ಇನ್ನೊಂದರಿಂದಾದವನಲ್ಲವಾದ್ದರಿಂದಲೂ ಗುಣಗಳ ಸಂಬಂಧವಿಲ್ಲದವನಾದ್ದರಿಂದಲೂ ನಾಶವನ್ನು ಪಡೆಯದಿರುವನು. ಅವನು ಶರೀರದಲ್ಲಿದ್ದರೂ ಏನನ್ನೂ ಮಾಡುವದಿಲ್ಲ ಮತ್ತು ಯಾವ ಫಲವನ್ನೂ ಅಂಟಿಸಿಕೊಳ್ಳುವದಿಲ್ಲ. ಎಲ್ಲೆಲ್ಲಿಯ ತುಂಬಿರುವ ಆಕಾಶವು ಸೂಕ್ಷ್ಮವಾದದ್ದಾದ್ದರಿಂದ ಏನನ್ನೂ ಅಂಟಿಸಿಕೊಳ್ಳದಿರುವಂತೆ ದೇಹದಲ್ಲೆಲ್ಲೆಲ್ಲಿಯೂ ಇರುವ ಆತ್ಮನು ಏನನ್ನೂ ಅಂಟಿಸಿಕೊಳ್ಳುವದಿಲ್ಲ. ಒಬ್ಬನಾದ ಸೂರ್ಯನು ಈ ಎಲ್ಲ ಲೋಕಗಳನ್ನೂ ಬೆಳಗುವ ಹಾಗೆ ಹೊಲದ ತಿಳಿವುಗಾರನು ಹೊಲಗಳನ್ನೆಲ್ಲ ಬೆಳಗುವನು. ಹೊಲಕ್ಕೂ ಹೊಲದ ತಿಳಿವುಗಾರನಿಗೂ ಹೀಗೆ ಭೇದವಿರುವದನ್ನೂ ಪ್ರಾಣಿಗಳಿಗೆಲ್ಲ ಹುಟ್ಟುಗುಣವಾಗಿರುವ ಅಜ್ಞಾನದ ಬಿಡುಗಡೆಯ ವಿಷಯವನ್ನೂ ನಿಸ್ಸಂಶಯವಾದ ತಿಳಿವೆಂಬ ಕಣ್ಣಿನಿಂದ ನೋಡುವವರು ಪರಬ್ರಹ್ಮಸ್ವರೂಪವನ್ನು ಹೊಂದುತ್ತಾರೆ.

(೨೯-೩೪)

ಅಧ್ಯಾಯ-೧೪

ಮೂರು ಗುಣಗಳ ವಿಚಾರ

ತಿಳಿವಳಿಕೆಗಳಲ್ಲೆಲ್ಲ ಹೆಚ್ಚಿನದಾದ ತಿಳಿವಳಿಕೆಯನ್ನು ನಿನಗೆ ಇನ್ನೂ ಹೇಳುತ್ತೇನೆ ಅದನ್ನು ತಿಳಿದು ಎಲ್ಲ ಋಷಿಗಳೂ ಈ ದೇಹದ ಕಟ್ಟನ್ನು ಕಳಚಿಕೊಂಡು ಹೆಚ್ಚಿನ ಫಲವನ್ನು ಪಡೆದಿದ್ದಾರೆ. ಈ ತಿಳಿವಳಿಕೆಯನ್ನು ಹೊಂದಿದವರು ನನ್ನ ಸ್ವರೂಪವನ್ನು ಪಡೆಯುತ್ತಾರೆ. ಆಮೇಲೆ ಅವರು ಸೃಷ್ಟಿಕಾಲದಲ್ಲಿ ಹುಟ್ಟುವದೂ ಇಲ್ಲ; ಪ್ರಲಯಕಾಲದಲ್ಲಿ ವ್ಯಥೆಯನ್ನು ಹೊಂದುವದೂ ಇಲ್ಲ. ಎಲ್ಲಕ್ಕಿಂತ ದೊಡ್ಡದಾದ ಮಾಯಾಶಕ್ತಿಯಲ್ಲಿ ನಾನು ಜಗತ್ತಿನ ಬೀಜವನ್ನಿಡುತ್ತೇನೆ. ಅದರಿಂದ ಎಲ್ಲ ವಸ್ತುಗಳೂ ಹುಟ್ಟುತ್ತವೆ. ದೇಹೇಂದ್ರಿಯಗಳ ಗುಂಪುಗಳನ್ನು ಹಡೆಯುವ ಸ್ಥಾನಗಳಿಗೆಲ್ಲ. ದೊಡ್ಡ ಮಾಯಾಶಕ್ತಿಯು ತಾಯ ಸ್ಥಾನವು. ನಾನು ಬೀಜವನ್ನಿಡುವ ತಂದೆ. ಸತ್ತ್ವ, ರಜ, ತಮ-ಎಂಬ ಮೂರು ಗುಣಗಳಿವೆ. ಇವು ಮಾಯಾಶಕ್ತಿಯಿಂದ ಹುಟ್ಟಿದವುಗಳು. ಇವು ನಾಶವಿಲ್ಲದ ಆತ್ಮನನ್ನು ದೇಹಕ್ಕೆ ಕಟ್ಟಿ ಹಾಕುವವು. (೧-೫)

ಈ ಮೂರು ಗುಣಗಳಲ್ಲಿ ಸತ್ತ್ವವು ಕೊಳೆ ಇಲ್ಲದ್ದಾದ್ದರಿಂದ ಬೆಳಗುವಂಥದ್ದಾಗಿರುವದು ಮತ್ತು ತೊಂದರೆಪಡಿಸತಕ್ಕದ್ದಲ್ಲದ್ದಾಗಿರುವದು ತಿಳಿಯಿತೆಂಬ ಅಭಿಮಾನವನ್ನುಹುಟ್ಟಿಸಿ ಅದು ಮನುಷ್ಯನನ್ನು ಕಟ್ಟಿಗೊಳಪಡಿಸುವದು. ರಜೋಗುಣವು ಬಯಕೆಯಿಂದಲೂ ಅತಿ ಪ್ರೀತಿಯಿಂದಲೂ ಹುಟ್ಟಿದ ಅನುರಾಗದ ರೂಪವೆಂದು ತಿಳಿ. ಅದು ಆತ್ಮನಿಗೆ ತಾನು ಮಾಡುವವನೆಂಬ ಅಭಿಮಾನವನ್ನು

ಹುಟ್ಟಿಸಿ ಕಟ್ಟಿಗೊಳಪಡಿಸುವದು. ಎಲ್ಲ ಪ್ರಾಣಿಗಳಿಗೂ ಅವಿವೇಕವನ್ನುಂಟುಮಾಡುವ ತಮೋಗುಣವು ಅಜ್ಞಾನದಿಂದುಂಟಾದದ್ದೆಂದು ತಿಳಿ. ಅದು ತಪ್ಪು ತಿಳಿವನ್ನೂ ಸೋಮಾರಿತನವನ್ನೂ ನಿದ್ರೆಯನ್ನೂ ಉಂಟುಮಾಡಿ ಕಟ್ಟಿಗೊಳಪಡಿಸುವದು. ಸತ್ತ್ವಗುಣವು ಸುಖದ ಬೆನ್ನು ಹತ್ತಿ ನಲಿಯುವಂತೆ ಮಾಡುತ್ತದೆ; ರಜೋಗುಣವು ಕರ್ಮದಲ್ಲಿ ತೊಡಗುವಂತೆ ಮಾಡುತ್ತದೆ; ತಮೋಗುಣವು ವಿವೇಕವನ್ನು ಮುಸುಕಿ ಮಾಡಬಾರದ್ದನ್ನು ಮಾಡಿಸುತ್ತದೆ. ಸತ್ತ್ವಗುಣವು ರಜೋಗುಣವನ್ನೂ ತಮೋಗುಣವನ್ನೂ ತುಳಿದು ಎದ್ದು ಕಾಣುತ್ತದೆ; ರಜೋಗುಣವು ಸತ್ತ್ವಗುಣವನ್ನೂ ತಮೋಗುಣವನ್ನೂ ತುಳಿದು ಎದ್ದುಕಾಣುತ್ತದೆ. (೬-೧೦)

ಈ ದೇಹದಲ್ಲಿ ಇಂದ್ರಿಯಗಳೆಂಬ ಎಲ್ಲ ಬಾಗಿಲುಗಳಲ್ಲಿಯೂ ಜ್ಞಾನವೆಂಬ ಬೆಳಕುಂಟಾಗುವಾಗ ಸತ್ತ್ವಗುಣವು ಮೇಲಕ್ಕೆದ್ದಿರುವದು; ರಜೋಗುಣವು ಮೇಲಕ್ಕೆದ್ದಾಗ ಹೆಚ್ಚಿನ ಬಯಕೆ, ಕೆಲಸದಲ್ಲಿ ತೊಡಗಬೇಕೆಂಬ ಉತ್ಸಾಹ, ಕೆಲಸದಲ್ಲಿ ಮುಂದುವರಿಯುವಿಕೆ, ಎಷ್ಟು ಮಾಡಿದರೂ ಸಾಕೆನಿಸದಿರುವದು, ವಿಷಯಗಳು ಬೇಕೆನಿಸುವದು- ಇವೆಲ್ಲ ಹುಟ್ಟುತ್ತವೆ; ತಮೋಗುಣವು ತಲೆ ಎತ್ತಿದಾಗ ಏನೂ ತಿಳಿಯದಂತಾಗುವದು. ಏನನ್ನಾದರೂ ಮಾಡಬೇಕೆನಿಸದಿರುವದು, ಮಾಡಬಾರದ್ದನ್ನು ಮಾಡುವದು, ತಪ್ಪು ತಿಳಿವಳಿಕೆ-ಇವು ಕಾಣಿಸಿಕೊಳ್ಳುವವು.
(೧೧-೧೩)

ಸತ್ತ್ವಗುಣವು ತಲೆ ಎತ್ತಿರುವಾಗ ಸತ್ತವನು ಒಳ್ಳೆಯ ತಿಳಿವಳಿಕೆಯವರು ಪಡೆಯುವ ಪುಣ್ಯಲೋಕಗಳಿಗೆ ಹೋಗುತ್ತಾನೆ, ರಜೋಗುಣವು ಹೆಚ್ಚಾಗಿದ್ದಾಗ ಸತ್ತವನು ಕರ್ಮದ ಆಸಕ್ತಿಯುಳ್ಳವರಲ್ಲಿ ಹುಟ್ಟುತ್ತಾನೆ; ತಮೋಗುಣವು ಹೆಚ್ಚಾಗಿದ್ದಾಗ ಸತ್ತರೆ ನಾಯಿ, ನರಿ-ಮೊದಲಾದವುಗಳ ಹೊಟ್ಟೆಯಲ್ಲಿ ಹುಟ್ಟುತ್ತಾನೆ. ಕೊಳೆ ಇಲ್ಲದ ಸತ್ತ್ವಗುಣವು ಒಳ್ಳೆಯ ಪುಣ್ಯಕರ್ಮಗಳ ಫಲ, ರಜೋಗುಣದ ಫಲವು ದುಃಖ, ತಮೋಗುಣದ ಫಲವು ನಿಜವನ್ನರಿಯದಿರುವದು. ಸತ್ತ್ವಗುಣದಿಂದ ತಿಳಿವಳಿಕೆ ಉಂಟಾಗುತ್ತದೆ; ರಜೋಗುಣದಿಂದ ಆಸೆಯೇ ಹೆಚ್ಚುತ್ತದೆ, ತಮೋಗುಣದಿಂದ ತಪ್ಪು ಮಾಡುವಂತೆಯೂ ತಪ್ಪು ತಿಳಿಯುವಂತೆಯೂ ನಿಜವನ್ನರಿಯದಿರುವಂತೆಯೂ ಆಗುತ್ತದೆ. ಸತ್ತ್ವಗುಣದಲ್ಲಿರುವವರು ಮೇಲು ಮೇಲಾದ ಜನ್ಮಗಳಿಗೆಹೋಗುತ್ತಾರೆ, ರಜೋಗುಣದವರು ನಡುವಣವರಾಗಿರುತ್ತಾರೆ; ತಮೋಗುಣದವರು ಕೀಳುಗುಣದ ನಡೆವಳಿಕೆಯವರಾಗಿ ನಾಯಿ, ನರಿ-ಮೊದಲಾದ ಕೆಳಗಿನ ಮೆಟ್ಟಿಲಿನ ಜನ್ಮಗಳಿಗೆ ಇಳಿಯುತ್ತಾರೆ. ಕರ್ಮಗಳೆಲ್ಲ ಗುಣಗಳಿಂದ ಹೊರತು ಬೇರೆ ಯಾರಿಂದಲೂ

ಆಗುವನಲ್ಲವೆಂದೂ ಆತ್ಮನು ಗುಣಗಳ ಮೇಲಿನವನೆಂದೂ ತಿಳಿಯುವವನು ನನ್ನ ಸ್ವರೂಪವನ್ನು ಹೊಂದುತ್ತಾನೆ. ದೇಹದ ಬೀಜಗಳಾದ ಈ ಮೂರು ಗುಣಗಳನ್ನು ದಾಟಿದವನು ಹುಟ್ಟು, ಸಾವು, ಮುಪ್ಪು-ಇವುಗಳ ದುಃಖದಿಂದ ಬಿಡುಗಡೆಯನ್ನು ಹೊಂದಿ ಮೋಕ್ಷವನ್ನು ಪಡೆಯುತ್ತಾನೆ. (೧೪-೨೦)

ಇದನ್ನೆಲ್ಲ ಕೇಳಿದ ಅರ್ಜುನನು ಈ ಮೂರು ಗುಣಗಳನ್ನೂ ದಾಟಿದವನ ಗುರುತುಗಳೇನೆಂದೂ ಆವನ ಆಚಾರಗಳೇನೆಂದೂ ಈ ಮೂರು ಗುಣಗಳನ್ನೂ ದಾಟುವ ಬಗೆ ಹೇಗೆಂದೂ ಕೃಷ್ಣನನ್ನು ಕೇಳಿದನು. (೨೧)

ಅದಕ್ಕೆ ಶ್ರೀ ಕೃಷ್ಣನ ಉತ್ತರ:-

ಅವನಿಗೆ ತಿಳಿವಳಿಕೆಯೂ ಕರ್ಮದಲ್ಲಿ ತೊಡಗುವಿಕೆಯೂ ನಿದ್ರೆ ಮೊದಲಾದವುಗಳೂ ಬಂದರೆ ಅವುಗಳ ಮೇಲೆ ಹಗೆತನವಿಲ್ಲ; ಹೋದರೆ ಅವುಗಳನ್ನು ಬಯಸುವುದಿಲ್ಲ. ಅವನು ಯಾರ ಪಕ್ಷಕ್ಕೂ ಸೇರುವದಿಲ್ಲ. ಆವನು ಗುಣಗಳ ಸೆಳೆತದಿಂದ ಬದಲಾವಣೆಯನ್ನು ಹೊಂದುವದಿಲ್ಲ. ದೇಹೇಂದ್ರಿಯಗಳು ವಿಷಯಗಳೊಡನೆ ವ್ಯವಹರಿಸುತ್ತವೆಂದು ತಿಳಿದು ಅವನು ತನ್ನ ಸ್ಥಿತಿಯಿಂದ ಕದಲುವದಿಲ್ಲ. ಅವನು ದುಃಖವನ್ನೂ ಸುಖವನ್ನೂ ಒಂದೇ ರೀತಿಯಲ್ಲಿ ಕಾಣುತ್ತ ತನ್ನಲ್ಲಿ ತಾನಿರುವನು. ಅವನಿಗೆ ಬಂಗಾರವೂ ಮಣ್ಣು ಹೆಂಟೆಯೂ ಒಂದೇ. ಬೇಕೆನಿಸಿದ್ದು ಬಂದರೂ ಬೇಡವೆನಿಸಿದ್ದು ಬಂದರೂ ಅವನು ಒಂದೇ ರೀತಿ ಇರುವನು. ಅವನು ಬುದ್ಧಿಶಾಲಿ. ಯಾರು ಜರಿದರೂ ಯಾರು ಹೊಗಳಿದರೂ ಅವನಿಗೆ ಒಂದೆ. ಮಾನವು ದೊರೆತಾಗಲೂ ಅಪಮಾನವಾದಾಗಲೂ ಅವನು ಒಂದೇ ರೀತಿ ಇರುವನು. ಅವನು ಗೆಳೆಯರನ್ನೂ ಹಗೆಗಳನ್ನೂ ಒಂದೇ ರೀತಿ ಕಾಣುವನು. ಅವನು ತನ್ನ ದೇಹೇಂದ್ರಿಯಗಳ ಸುಖಕ್ಕಾಗಿ ಯಾವ ಉದ್ಯೋಗವನ್ನೂ ಹಿಡಿಯುವದಿಲ್ಲ. ಅವನು ಗುಣಗಳನ್ನು ದಾಟಿದವನೆನಿಸುವನು. ನನ್ನನ್ನು ಎಡೆಬಿಡದೆ ಭಕ್ತಿಯಿಂದ ಸೇವಿಸುವವನು ಈ ಗುಣಗಳನ್ನು ದಾಟಿ ಬ್ರಹ್ಮಸ್ವರೂಪನಾಗುವದಕ್ಕೆ ತಕ್ಕವನಾಗುತ್ತಾನೆ. ನಾನು ಸಾವಿಲ್ಲದಂಥದ್ದೂ ಬದಲಾವಣೆಯನ್ನು ಹೊಂದದಿರುವಂಥದ್ದೂ ಎಂದೆಂದಿಗೂ ಇರುವಂಥದ್ದೂ ಧರ್ಮದಿಂದ ಪಡೆಯುವದಕ್ಕಾಗುವಂಥದ್ದೂ ಎಂದೆಂದಿಗೂ ಮುಕ್ಕಾಗದ ಆನಂದರೂಪವಾದದ್ದೂ ಆದ ಸಗುಣಬ್ರಹ್ಮನ ಆಶ್ರಯಸ್ಥಾನವು. (೨೨-೨೭)

ಅಧ್ಯಾಯ-೧೫

ಭಗವಂತನ ಹೆಚ್ಚುಗಾರಿಕೆ

ಶ್ರೀ ಕೃಷ್ಣನ ಮಾತು ಮುಂದೆ ಸಾಗಿದ್ದು -

ಸಂಸಾರವೆಂಬ ಮರಕ್ಕೆ ಜಗತ್ತನ್ನು ಹೊರಗೆಡಹುವ ಮಾಯಾಶಕ್ತಿಯಿಂದ ಕೂಡಿದ ಸಗುಣ ಬ್ರಹ್ಮನು ಬೇರು. ಅದು ಮೇಲುಗಡೆಗಿರುವದು. ಐದು ಭೂತಗಳೇ ಮೊದಲಾದವುಗಳು ಅದರ ಕೊಂಬೆಗಳು. ಅವು ಕೆಳಗಡೆಗಿರುವವು. ಕರ್ಮ ಕಾಂಡದ ಮಾತುಗಳು, ಆತ್ಮನನ್ನು ಮರೆಮಾಡಿ ಸಂಸಾರವನ್ನು ಕಾಪಾಡುವ ಎಲೆಗಳು. ಅದನ್ನು ಎಂದಿಗೂ ಹೋಗದಂಥದ್ದೆನಿಸಿ ನಾಳೆಗಿದ್ದೀತೋ ಇಲ್ಲವೊ ಎಂಬಂತಿರುವಂಥ ಅರಳಿಯ ಮರವೆನ್ನುವರು. ಅದನ್ನು ತಿಳಿದವನು ವೇದವನ್ನು ತಿಳಿದವನಾಗುವನು. ಪ್ರಾಣಿಗಳ ಕರ್ಮಗಳಿಗೂ ತಿಳಿವಳಿಕೆಗೂ ಫಲಗಳಾಗಿ ಮನುಷ್ಯರೇ ಮೊದಲಾದವರ ಕೆಳಗಿನ ಲೋಕವೂ ಬ್ರಹ್ಮನೇ ಮೊದಲಾದವರ ಮೇಲಿನ ಲೋಕವೂ ಆ ಮರದರೆಂಬೆಗಳಾಗಿ ಹರಡಿಕೊಂಡಿರುವವು. ಅವು ಮೂರು ಗುಣಗಳಿಂದ ಮೈದುಂಬಿರುವವು. ವಿಷಯಗಳೇ ಅದರ ಚಿಗರುಗಳು.ಭೂಲೋಕದಲ್ಲಿ ಕರ್ಮಗಳನ್ನು ಮಾಡಿಸಿ ಪುಣ್ಯಪಾಪಗಳನ್ನು ಗಂಟುಬೀಳಿಸುವ ಪ್ರೀತಿ, ಹಗೆತನ-ಮೊದಲಾದ ಮರಿ ಬೇರುಗಳು ಕೆಳಗಡೆಗಿಳಿದಿರುವವು. (೧-೨)

ಸಂಸಾರದಲ್ಲಿರುವಾಗ ಇದರ ರೂಪವು ತಿಳಿಯುವದಿಲ್ಲ. ಇದಕ್ಕೆ ಮೊದಲೂ ಇಲ್ಲ, ಕೊನೆಯೂ ಇಲ್ಲ. ಅದಕ್ಕೆ ಇರುವಿಕೆಯೂ ಇಲ್ಲ. ಚೆನ್ನಾಗಿ ಬೇರುಬಿಟ್ಟುಕೊಂಡಿರುವ ಇದನ್ನು ಒಳ್ಳೆಯ ಬಲವಾಗಿರುವ ವೈರಾಗ್ಯವೆಂಬ ಕೊಡಲಿಯಿಂದ ಕತ್ತರಿಸಬೇಕು. ಆ ಮೇಲೆ ಇದನ್ನು ಹೊರಗೆಡಹಿದ ಪುರುಷನನ್ನು ಮರೆಹೋಗುತ್ತೇನೆಂದು ಆ ಬ್ರಹ್ಮದ ನೆಲೆಯನ್ನು ಹುಡುಕಬೇಕು. ಆ ನೆಲೆಯನ್ನು ಮುಟ್ಟಿದವರು ಮತ್ತೆ ಹಿಂದಿರುಗುವದಿಲ್ಲ. ಆ ಪುರುಷನಿಂದಲೆ ಎಷ್ಟೋ ಹಿಂದಿನಿಂದ ಈ ಬ್ರಹ್ಮಾಂಡವು ಹೊರಹೊಮ್ಮಿರುವದು. (೩–೪)

ನಾಶರಹಿತವಾದ ಆ ಬ್ರಹ್ಮವನ್ನು ಪಡೆಯಬೇಕಾದರೆ ಹೆಮ್ಮೆಯೂ ಅವಿವೇಕವೂ ಇರಬಾರದು; ವಿಷಯಗಳ ಮೇಲಿನ ಪ್ರೀತಿಯ ದೋಷವನ್ನು ಗೆದ್ದಿರಬೇಕು; ಯಾವಾಗಲೂ ಬ್ರಹ್ಮದ ಚಿಂತೆಯೇ ಇರಬೇಕು; ಬಯಕೆಗಳೆಲ್ಲ ಹಿಮ್ಮೆಟ್ಟಿ ಹೋಗಿರಬೇಕು; ಶೀತ, ಉಷ್ಣ–ಮೊದಲಾದ ಜೋಡಿಗಳನ್ನು ಕಳಚಿಕೊಂಡಿರಬೇಕು ಮತ್ತು ತಪ್ಪು ತಪ್ಪಾಗಿ ತಿಳಿಯದಿರಬೇಕು, ಆ ನೆಲೆಯನ್ನು ಮುಟ್ಟಿದಮೇಲೆ ಹಿಂದಿರುಗುವಿಕೆ ಇಲ್ಲ. ಅದನ್ನು ಸೂರ್ಯನೂ ಬೆಳಗುವದಿಲ್ಲ ಚಂದ್ರನೂ ಬೆಳಗುವದಿಲ್ಲ. ಅದು ನನ್ನ ಶ್ರೇಷ್ಠವಾದ ಸ್ಥಾನ. (೫–೬)

ಈ ಸಂಸಾರದಲ್ಲಿ ಬಹು ಹಿಂದಿನಿಂದ ಇರುವ ಜೀವರೂಪವು ನನ್ನ ಅಂಶವೆ. ಜೀವನು ದೇಹದಿಂದ ಹೋಗುವಾಗಲೂ ದೇಹಕ್ಕೆ ಬರುವಾಗಲೂ ತಮ್ಮ ತಮ್ಮ ಸ್ಥಳದಲ್ಲಿರುವ ಮನಸ್ಸನ್ನೂ ಐದು ಇಂದ್ರಿಯಗಳನ್ನೂ ಸೆಳೆಯುತ್ತಾನೆ. ಆ ದೇಹದೊಡೆಯನು ಒಂದು ದೇಹದೊಳಕ್ಕೆ ಸೇರಿಕೊಳ್ಳುವಾಗಲೂ ಒಂದು ದೇಹವನ್ನು ಬಿಟ್ಟು ಹೊರಡುವಾಗಲೂ, ಗಾಳಿಯು ಹೂಗಳಿಂದ ಗಂಧವನ್ನು ಸೆಳೆಯುವಂತೆ, ಇಂದ್ರಿಯಗಳನ್ನು ಸೆಳೆದುಕೊಂಡೇ ಸೇರಿಕೊಳ್ಳುತ್ತಾನೆ ಮತ್ತು ಹೊರಡುತ್ತಾನೆ. ಕಿವಿ, ಕಣ್ಣು, ಸೋಂಕು, ರುಚಿ, ಮೂಸುವಿಕೆ–ಇವುಗಳ ಮೂಲಕ ಮನಸ್ಸು ವಿಷಯಗಳನ್ನು ಭೋಗಿಸುತ್ತದೆ. ಜೀವನು ದೇಹವನ್ನು ಬಿಟ್ಟು ಹೊರಡುವಾಗಲೂ ದೇಹದಲ್ಲಿರುವಾಗಲೂ ಗುಣಗಳಿಂದ ಕೂಡಿ ಭೋಗಿಸುವಾಗಲೂ ಅವನನ್ನು ಅವಿವೇಕಿಗಳು ನೋಡಲಾರರು; ತಿಳಿಗಣ್ಣಿನವರು ನೋಡುತ್ತಾರೆ. ಪ್ರಯತ್ನ ಮಾಡುವ ಯೋಗಿಗಳು ತಮ್ಮಲ್ಲಿರುವ ಇವನನ್ನು ನೋಡುತ್ತಾರೆ. ಪ್ರಯತ್ನ ಮಾಡುತಿದ್ದರೂ ಚಿತ್ತಶುದ್ಧಿ ಇಲ್ಲದ ಅವಿವೇಕಿಗಳು ಇವನನ್ನು ನೋಡುವದಿಲ್ಲ. (೭–೧೧)

ಜಗತ್ತನ್ನೆಲ್ಲ ಬೆಳಗುವ ಸೂರ್ಯನಲ್ಲಿರುವ ಬೆಳಕೂ ಚಂದ್ರನಲ್ಲಿರುವ ಬೆಳಕೂ ಅಗ್ನಿಯಲ್ಲಿರುವ ಬೆಳಕೂ ನನ್ನದೆ. ನಾನು ಭೂಮಿಯನ್ನು ಒಳಹೊಕ್ಕು ನನ್ನ ಬಲದಿಂದ ಎಲ್ಲ ಜಗತ್ತನ್ನೂ ಹಿಡಿದು ನಿಲ್ಲಿಸಿಕೊಂಡಿರುವೆನು. ನಾನು ಎಲ್ಲ ಪ್ರಾಣಿಗಳ ಶರೀರವನ್ನೂ ಒಳಹೊಕ್ಕು ಜಠರಾಗ್ನಿಯಾಗಿ ಪ್ರಾಣ,ಅಪಾನ ಮೊದಲಾದ ವಾಯುಗಳಿಂದ ಕೂಡಿ ಅಗಿದು ತಿನ್ನುವದು, ನೆಮಲಿ ನುಂಗುವದು ಮೊದಲಾದ ನಾಲ್ಕು ಬಗೆಯ ಆಹಾರವನ್ನು ಅರಗಿಸುತ್ತೇನೆ. ನಾನು ಎಲ್ಲರ ಬುದ್ಧಿಯಲ್ಲಿಯೂ ಒಳಹೊಕ್ಕಿದ್ದೇನೆ. ನೆನಪೂ ತಿಳಿವಳಿಕೆಯೂ ಉಂಟಾಗುವದೂ ಹಾರಿ ಹೋಗುವದೂ ನನ್ನಿಂದಲೆ. ನಾನೆ ಎಲ್ಲ ವೇದಗಳಿಂದ ತಿಳಿಯಬೇಕಾದವನು. ನಾನು ಉಪನಿಷತ್ತಿನ ಸಂಪ್ರದಾಯವನ್ನು ಮೊದಲು ಮಾಡಿದವನು ಮತ್ತು ವೇದಾರ್ಥವನ್ನೆಲ್ಲ ತಿಳಿದವನು. (೧೨-೧೫)

ಸಂಸಾರದಲ್ಲಿ ನಾಶವಾಗುವವುಗಳೆಂಬುದೊಂದು; ನಾಶವಾಗದಿರುವ ಮಾಯಾಶಕ್ತಿಯೊಂದು ಲೋಕದಲ್ಲಿ ಇವರಿಬ್ಬರು ಪುರುಷರು. ಇದ್ದ ಕಡೆಯಲ್ಲಿಯೇ ಇರುವವುಗಳೂ ಓಡಾಡುವವುಗಳೂ ಎಲ್ಲ ನಾಶವಾಗುವವುಗಳು. ವಂಚನೆಯ ರೂಪದಿಂದಿರುವ ಮಾಯಾಶಕ್ತಿಯು ನಾಶವಿಲ್ಲದ್ದು. ಇವೆರಡಕ್ಕಿಂತ ಬೇರೆಯಾದ ಉತ್ತಮ ಪುರುಷನೊಬ್ಬನಿದ್ದಾನೆ. ಅವನು ಪರಮಾತ್ಮನು. ನಾಶರಹಿತನಾದ ಅವನು ಮೂರು ಲೋಕಗಳನ್ನೂ ಒಳಹೊಕ್ಕು ಹಿಡಿದುಕೊಂಡಿದ್ದಾನೆ. ನಾನು ನಾಶವಾಗುವವುಗಳಿಗಿಂತ ಮೇಲಿನವನು; ನಾಶವಿಲ್ಲದ ಮಾಯಾಶಕ್ತಿಗಿಂತ ಮೇಲಿನವನು. ಆದ್ದರಿಂದ ನಾನು ಪುರುಷೋತ್ತಮನೆಂದು ಜಗತ್ತಿನಲ್ಲಿಯೂ ವೇದದಲ್ಲಿಯೂ ಹೆಸರುಗೊಂಡಿದ್ದೇನೆ. ತಪ್ಪು ತಿಳಿಯದೆ ನನ್ನನ್ನು ಪುರುಷೋತ್ತಮನೆಂದು ತಿಳಿಯುವವನು ಎಲ್ಲವನ್ನೂ ತಿಳಿದವನು. ಅವನು ಎಲ್ಲ ಬಗೆಯಿಂದಲೂ ನನ್ನನ್ನು ಆಶ್ರಯಿಸುತ್ತಾನೆ. ನಾನು ಈಗ ಹೇಳಿರುವ ಇದು ಬಹುಗುಟ್ಟಾದ ಶಾಸ್ತ್ರ. ಇದನ್ನು ತಿಳಿದವನು ಬುದ್ಧಿವಂತನಾಗುವನು ಮತ್ತು ಮಾಡಬೇಕಾದದ್ದನ್ನೆಲ್ಲ ಮಾಡಿದವನೂ ಆಗುವನು. (೧೬-೨೦)

ಅಧ್ಯಾಯ-೧೬

ಒಳ್ಳೆಯ ಮತ್ತು ಕೆಟ್ಟ ಸ್ವಭಾವಗಳು

ಶ್ರೀ ಕೃಷ್ಣನ ಮಾತು ಮುಂದೆ ಸಾಗಿದ್ದು -

ಅಂಜುಬುರುಕುತನವಿಲ್ಲದಿರುವದು, ಶುದ್ಧವಾದ ಮನಸ್ಸಿನಿಂದ ನಡೆಯುವದು, ಜ್ಞಾನವನ್ನು ಅನುಭವಕ್ಕೆ ತಂದುಕೊಳ್ಳುವ ನಿಷ್ಠೆ, ದಾನ, ಇಂದ್ರಿಯಗಳನ್ನು ಬಿಗಿಹಿಡಿಯುವದು, ಯಜ್ಞ, ವೇದಗಳನ್ನು ಬಾಯಿಗೆ ಕಲಿಯುವದು, ತಪಸ್ಸು, ಸರಳತನ, ಯಾರನ್ನೂ ಪೀಡಿಸದಿರುವದು, ನಿಜವನ್ನಾಡುವದು, ಸಿಟ್ಟಿಲ್ಲದಿರುವದು, ವಿಷಯಗಳ ಮೇಲಿನ ಆಸಕ್ತಿಯನ್ನು ಬಿಡುವದು, ಮನಸ್ಸಿನ ಸಮಾಧಾನ, ಚಾಡಿ ಹೇಳದಿರುವದು, ತಿರಸ್ಕಾರವನ್ನು ಸೈರಿಸದಿರುವದು, ಸೈರಣೆ, ದೃಢನಿಶ್ಚಯ, ಶುಚಿಯಾಗಿರುವದು, ಇತರರಿಗೆ ಎರಡೆಣಿಸದಿರುವದು, ಹೆಮ್ಮೆ ಇಲ್ಲದಿರುವದು-ಇವು ದೇವತೆಗಳಲ್ಲಿರುವದಕ್ಕೆ ಯೋಗ್ಯವಾದ ಒಳ್ಳೆಯ ವಾಸನೆಗಳಿಂದ ಹುಟ್ಟಿದವನಿಗೆ ಉಂಟಾಗುತ್ತವೆ. ತನ್ನಲ್ಲಿಲ್ಲದ ಒಳ್ಳೆಯತನವನ್ನು ತೋರಿಸಿಕೊಳ್ಳುವದು, ಸೊಕ್ಕು, ಹೆಮ್ಮೆ, ಸಿಟ್ಟು, ಮನಸ್ಸು ನೋಯುವ ಮಾತು, ಅವಿವೇಕ ಇವೆಲ್ಲ ಅಸುರರಿಗೊಪ್ಪುವ ಕೆಟ್ಟ ವಾಸನೆಗಳು. ಒಳ್ಳೆಯ ವಾಸನೆಗಳು ಸಂಸಾರದ ಬಿಡುಗಡೆಗೂ ಕೆಟ್ಟ ವಾಸನೆಗಳು ಕಟ್ಟಿಗೊಳಗಾಗುವದಕ್ಕೂ ಕಾರಣಗಳೆಂದು ಗೊತ್ತಾಗಿರುವವು. ಅರ್ಜುನ, ವ್ಯಸನಪಡಬೇಡ. ನೀನು ಒಳ್ಳೆಯ ವಾಸನೆಯಿಂದ ಹುಟ್ಟಿದವನಾಗಿದ್ದಿ. (೧-೫)

ಈ ಲೋಕದಲ್ಲಿ ಪ್ರಾಣಿಗಳ ಸೃಷ್ಟಿಯು ಒಳ್ಳೆಯ ವಾಸನೆಯದೆಂದೂ ಕೆಟ್ಟ ವಾಸನೆಯದೆಂದೂ ಎರಡು ಬಗೆ. ಒಳ್ಳೆಯ ವಾಸನೆಗಳನ್ನು ಆಗಲೆ ವಿವರಿಸಿದ್ದೇನೆ. ಇನ್ನು ಹೇಳುವ ಕೆಟ್ಟ ವಾಸನೆಗಳ ವಿಚಾರವನ್ನು ಕೇಳು. ಮಾಡಬೇಕಾದದ್ದು ಯಾವದೆಂಬುದನ್ನೂ ಮಾಡಬಾರದ್ದು ಯಾವದೆಂಬುದನ್ನೂ, ಕೆಟ್ಟ ವಾಸನೆಯ ಜನರು ತಿಳಿಯುವದಿಲ್ಲ. ಅವರಲ್ಲಿ ಶುಚಿತ್ವವೂ ಇಲ್ಲ; ಒಳ್ಳೆಯ ಆಚಾರವೂ ಇಲ್ಲ; ನಿಜವನ್ನುಹೇಳುವಿಕೆಯೂ ಇಲ್ಲ. ಅವರು– ಜಗತ್ತೆಲ್ಲ ಸುಳ್ಳಿನಿಂದ ತುಂಬಿರುವದೆಂದೂ ಧರ್ಮದ ಆಧಾರವಿಲ್ಲದ್ದೆಂದೂ ಮೇಲೆ ಆಳುವವನಿಲ್ಲನೆಂದೂ ಗಂಡುಹೆಣ್ಣುಗಳ ಸೇರಿಕೆಯಿಂದಾಗಿ ಆ ಕಾಮವೇ ಕಾರಣವಾಗಿ ಉಳ್ಳದ್ದಲ್ಲದೆ ಮತ್ತೇನೂ ಇಲ್ಲವೆಂದೂ ಹೇಳುವರು. ಅವರು ಈ ದೃಷ್ಟಿಯನ್ನು ಅವಲಂಬಿಸಿ ವಿವೇಕವನ್ನು ಹಾಳುಮಾಡಿಕೊಂಡು ಕೀಳುಬುದ್ಧಿಯವರಾಗಿ ಇತರರಿಗೆ ಹಾನಿಯನ್ನು ಮಾಡುತ್ತ ಜಗತ್ತು ಹಾಳಾಗುವಂಥ ಕ್ರೂರ ಕರ್ಮವನ್ನು ಮಾಡುವವರಾಗಿ ಹುಟ್ಟುತ್ತಾರೆ.
(೬–೯)

ಅವರು ಎಂದಿಗೂ ಸಾಕೆನಿಸದಂಥ ಬಯಕೆಗಳನ್ನು ಅವಲಂಬಿಸಿ ದಂಭ, ಮಾನ, ಮದ–ಇವುಗಳಿಂದ ಕೂಡಿ ಅವಿವೇಕದಿಂದ ಕೆಟ್ಟ ನಿಶ್ಚಯಗಳನ್ನು ಮಾಡಿಕೊಂಡು ಅಶುಚಿಯಾದ ಆಚಾರವನ್ನು ಹಿಡಿದು ಮುಂದುವರಿಯುತ್ತಿರುವರು. ಅವರು ಸಾಯುವವರೆಗೂ ತಪ್ಪದಂಥ ಮತ್ತು ಕೊನೆಮೊದಲಿಲ್ಲದಂಥ ಚಿಂತೆಯನ್ನು ಹಚ್ಚಿಕೊಂಡು ವಿಷಯಸುಖವೇ ಹೆಚ್ಚೆಂದೂ ಇದರ ಹೊರತು ಬೇರೆ ಇಲ್ಲವೆಂದೂ ಗೊತ್ತು ಮಾಡಿಕೊಂಡಿರುವರು. ಅವರು ನೂರಾರು ಬಯಕೆಗಳೆಂಬ ಹಗ್ಗಗಳಿಂದ ಕಟ್ಟಿಸಿಕೊಂಡವರಾಗಿ ಕೆಟ್ಟ ಬಯಕೆ, ಸಿಟ್ಟು–ಮೊದಲಾದವುಗಳನ್ನಾಶ್ರಯಿಸಿ, ಗಂಡುಹೆಣ್ಣುಗಳ ಕೂಡಿಕೆಯ ಸುಖಕ್ಕಾಗಿ ಅಧರ್ಮದಿಂದ ಅನೇಕ ಪದಾರ್ಥಗಳನ್ನು ಅಪೇಕ್ಷಿಸುತ್ತಾರೆ. (೧೦–೧೨)

"ಇದು ಈಗ ನನಗೆ ದೊರೆಯಿತು. ಈ ಇಷ್ಟಾರ್ಥವನ್ನು ಪಡೆಯುತ್ತೇನೆ. ಇದು ಇದೆ. ಮತ್ತೆ ಈ ಹಣವೂ ನನಗೆ ದೊರೆಯುತ್ತದೆ. ಈ ಹಗೆಯನ್ನು ನಾನು ಕೊಂದೆನು; ಉಳಿದವರನ್ನೂ ಕೊಲ್ಲುವೆನು. ನಾನು ಒಡೆಯನು, ಸುಖ ಸಾಧನಗಳನ್ನುಳ್ಳವನು, ಸಿದ್ಧನು, ಬಲಿಷ್ಠನು, ಸುಖಿ, ಹಣಗಾರ, ಮತ್ತು ಒಳ್ಳೆಯ ಕುಲದವನು. ನನಗೆ ಸಮಾನರು ಬೇರೆ ಯಾರಿದ್ದಾರೆ? ನಾನು ಯಾಗ ಮಾಡುತ್ತೇನೆ, ದಾನ ಮಾಡುತ್ತೇನೆ, ಆನಂದಪಡುತ್ತೇನೆ." ಎಂದು ತಪ್ಪು ತಿಳಿವಳಿಕೆಯಿಂದ ಅವರು ಅವಿವೇಕವನ್ನು ಹೊಂದಿರುತ್ತಾರೆ. ಅವರು ಕೆಟ್ಟ ಉದ್ದೇಶಗಳಿಂದ ತಲೆ

ತಿರುಗಿದವರಾಗಿ ಅವಿವೇಕವೆಂಬ ಬಲೆಯ ಮುಸುಕಿಗೆ ಸಿಕ್ಕಿ ವಿಷಯಸುಖದಲ್ಲಿ ಹೆಚ್ಚು ಆಸಕ್ತಿಯನ್ನು ಹೊಂದಿ ಹೊಲಸಾದ ನರಕದಲ್ಲಿ ಬೀಳುತ್ತಾರೆ. ಅವರು ತಾವೇ ದೊಡ್ಡವರೆಂದು ತಿಳಿದು ಎದೆಯನ್ನುಬ್ಬಿಸಿಕೊಂಡು ಹಣಗಾರರೆಂಬ ಮಾನದಿಂದಲೂ ಮದದಿಂದಲೂ ಕೂಡಿ ಯಾವ ನಿಯಮಗಳನ್ನೂ ಲೆಕ್ಕಕ್ಕೆ ತೆಗೆದುಕೊಳ್ಳದೆ ಇತರರಿಗೆ ತೋರಿಸಿಕೊಳ್ಳುವದಕ್ಕಾಗಿ ಮಾತ್ರ ದೀಕ್ಷಿತರೆಂಬ ಹೆಸರನ್ನು ತಂದುಕೊಡುವ ಯಜ್ಞಗಳನ್ನು ನಡೆಸುವರು. ಅವರು ಅಭಿಮಾನವನ್ನೂ ಬಲವನ್ನೂ ಸೊಕ್ಕನ್ನೂ ಸಿಟ್ಟನ್ನೂ ಚೆನ್ನಾಗಿ ಮೈಗೂಡಿಸಿಕೊಂಡು ತಮ್ಮ ದೇಹದಲ್ಲಿಯೂ ಇತರರ ದೇಹದಲ್ಲಿಯೂ ಇರುವ ನನ್ನ ಮೇಲೆ ಹಗೆತನವನ್ನು ಮಾಡುತ್ತ ಇತರರ ಮೇಲೆ ಹೊಟ್ಟೆಕಿಚ್ಚುಪಡುತ್ತಿರುವರು. (೧೩-೧೮)

ನನ್ನನ್ನು ಕಂಡರೆ ಆಗದೆ ಕಲ್ಲುಮನಸ್ಸಿನಿಂದ ಕೆಟ್ಟ ಕೆಲಸಗಳನ್ನು ಮಾಡುವ ಆ ನೀಚರನ್ನು ನಾನು ಯಾವಾಗಲೂ ಸಂಸಾರದಲ್ಲಿ ಕೆಟ್ಟ ಸ್ವಭಾವದ ಬಸಿರಿಗೆ ನೂಕುವೆನು. ಆ ಅವಿವೇಕಿಗಳು ಕೆಟ್ಟ ಸ್ವಭಾವದ ಬಸಿರನ್ನು ಹೊಕ್ಕು ಪ್ರತಿ ಹುಟ್ಟಿನಲ್ಲಿಯೂ ನನ್ನನ್ನು ಪಡೆಯದೆ ಇನ್ನಷ್ಟು ಕೀಳಾದ ಜನ್ಮಕ್ಕೆ ಹೋಗುತ್ತಾರೆ. ತನ್ನ ಹಾನಿಯನ್ನು ಮಾಡುವ ನರಕದ ಬಾಗಿಲು ಬಯಕೆ, ಸಿಟ್ಟು, ಜಿಪುಣತನ ಎಂದು ಈ ಮೂರು ಬಗೆ. ಆದ್ದರಿಂದ ಈ ಮೂರನ್ನೂ ಬಿಡಬೇಕು. ಈ ನರಕದ ಬಾಗಿಲುಗಳಾದ ಮೂರರಿಂದ ಬಿಡುಗಡೆಯನ್ನು ಹೊಂದಿದ ಮನುಷ್ಯನು ತನ್ನ ಉನ್ನತಿಯನ್ನು ಮಾಡಿಕೊಳ್ಳುತ್ತಾನೆ; ಅದರಿಂದ ಉತ್ಕೃಷ್ಟವಾದ ಮೋಕ್ಷವನ್ನು ಹೊಂದುತ್ತಾನೆ. ಯಾವನು ಶಾಸ್ತ್ರದ ನಿಯಮವನ್ನು ಕಡೆಗಂಡು ತನ್ನ ಮನಸ್ಸು ಬಂದಂತೆ ನಡೆಯುವನೊ ಅವನು ಮೋಕ್ಷಕ್ಕೆ ತಕ್ಕ ಯೋಗ್ಯತೆಯನ್ನು ಪಡೆಯುವದಿಲ್ಲ. ಅವನಿಗೆ ಈ ಲೋಕದ ಸುಖವೂ ಇಲ್ಲ; ಮೋಕ್ಷವೂ ಇಲ್ಲ. ಆದ್ದರಿಂದ ಯಾವುದನ್ನು ಮಾಡಬೇಕೆಂಬ ಮತ್ತು ಯಾವದನ್ನು ಮಾಡಬಾರದೆಂಬ ವಿಷಯದಲ್ಲಿ ನಿನಗೆ ಶಾಸ್ತ್ರವೇ ಪ್ರಮಾಣ, ಶಾಸ್ತ್ರದಲ್ಲಿ ಹೇಳಿರುವುದನ್ನು ತಿಳಿದು ಈ ಲೋಕದಲ್ಲಿ ನಿನ್ನ ಧರ್ಮವನ್ನು ನೀನು ಮಾಡಬೇಕು. (೧೯-೨೪)

ಅಧ್ಯಾಯ-೧೭

ಶ್ರದ್ಧೆಯ ಮೂರು ಬಗೆ

ಶ್ರೀ ಕೃಷ್ಣನ ಅಭಿಪ್ರಾಯವನ್ನು ತಿಳಿದ ಅರ್ಜುನನು ಶ್ರೀ ಕೃಷ್ಣನನ್ನು ಕುರಿತು ಶಾಸ್ತ್ರದ ನಿಯಮಗಳನ್ನು ಬಿಟ್ಟು ಶ್ರದ್ಧೆಯಿಂದ ಪೂಜಿಸುವವರ ನಡೆವಳಿಕೆಯು ಸಾತ್ತ್ವಿಕವೊ, ರಾಜಸವೊ ಅಥವಾ ತಾಮಸವೊ? ಎಂಬುದನ್ನು ಹೇಳೆಂದು ಕೇಳಿದನು. (೧)

ಶ್ರೀ ಕೃಷ್ಣನ ಉತ್ತರ :–

ಜೀವರ ಹುಟ್ಟು ಗುಣವಾಗಿ ಆ ಶ್ರದ್ಧೆಯು ಸಾತ್ತ್ವಿಕ, ರಾಜಸ, ತಾಮಸ ಎಂದು ಮೂರು ಬಗೆ. ಎಲ್ಲರ ಶ್ರದ್ಧೆಯೂ ಅವರವರ ಮನಸ್ಸಿನ ಸಂಸ್ಕಾರಕ್ಕೆ ಅನುಗುಣವಾಗಿ ಆಗುತ್ತದೆ. ಈ ಜೀವನು ಶ್ರದ್ಧೆಯಂತೆ ಆಗುತ್ತಾನೆ. ಯಾವನಿಗೆ ಯಾವ ಬಗೆಯ ಶ್ರದ್ಧೆಯೋ ಅವನು ಅದೇ ಆಗುತ್ತಾನೆ. (೨–೩)

ಸತ್ತ್ವಗುಣದವರು ದೇವತೆಗಳನ್ನೂ ರಜೋಗುಣದವರು ಯಕ್ಷರನ್ನೂ ರಾಕ್ಷಸರನ್ನೂ ಪೂಜಿಸುತ್ತಾರೆ. ತಾವೇ ದೊಡ್ಡವರೆಂದುಕೊಂಡು ಬಯಕೆಗಳ ಮತ್ತು ವಿಷಯಗಳ ಮೇಲಿನ ಪ್ರೀತಿಯ ಆವೇಶದಿಂದ ಕೂಡಿ ಶಾಸ್ತ್ರದಲ್ಲಿ ಹೇಳಿಲ್ಲದಂಥ ಮತ್ತು ಪ್ರಾಣಿಗಳಿಗೆ ಪೀಡೆಯನ್ನು ಮಾಡುವಂಥ ತಪಸ್ಸನ್ನು ಮಾಡುವ ಅವಿವೇಕಿಗಳು ದೇಹದಲ್ಲಿರುವ ಇಂದ್ರಿಯಗಳೆಲ್ಲವನ್ನೂ ಮತ್ತು

ನನ್ನನ್ನೂ ಸೊರಗಿಸುವವರಾಗಿ ಅಸುರರಂಥ ಕಟುಕ ಮನಸ್ಸಿನವರಾಗಿರುವರು. ಎಲ್ಲರ ಆಹಾರದಲ್ಲಿಯೂ ಮತ್ತು ಯಜ್ಞ, ತಪಸ್ಸು, ದಾನ– ಇವುಗಳಲ್ಲಿಯೂ ಇರುವ ಪ್ರೀತಿಯು ಮೂರು ಬಗೆ. ಅವುಗಳ ಭೇದವನ್ನು ಕೇಳು. (೪–೭)

ಆಯುಸ್ಸನ್ನೂ ಉತ್ಸಾಹವನ್ನೂ ಶಕ್ತಿಯನ್ನೂ ಆರೋಗ್ಯವನ್ನೂ ಸುಖವನ್ನೂ ಪ್ರೀತಿಯನ್ನೂ ಹೆಚ್ಚಿಸುವದಾಗಿಯೂ ರಸದಿಂದಲೂ ಜಿಡ್ಡಿನಿಂದಲೂ ಕೂಡಿ ಕೆಲವು ಕಾಲ ಶರೀರದಲ್ಲಿ ಉಳಿದಿದ್ದು ಅರಗುವಂಥದ್ದಾಗಿ ಮನೋಹರವಾಗಿರುವ ಆಹಾರಗಳು ಸಾತ್ತ್ವಿಕರಿಗೆ ಬೇಕೆನಿಸುವವು. ಬಹಳ ಕಾರ, ಹುಳಿ, ಉಪ್ಪು, ಬಿಸಿ, ತೀಕ್ಷ್ಣ,ಒಣಗಿರುವಿಕೆ, ಸೀದವುಗಳು ಅಥವಾ ಹುರಿದವುಗಳು ಇವು ಒಡನೆ ಆಗುವ ಪೀಡೆಯನ್ನೂ ಆಮೇಲೆ ಆಗುವ ದುಃಖವನ್ನೂ ರೋಗವನ್ನೂ ಉಂಟುಮಾಡತಕ್ಕ ಆಹಾರಗಳು. ಇವು ರಾಜಸರಿಗೆ ಬೇಕೆನಿಸುವವು. ಅರ್ಧ ಬೆಂದಿರುವದು ಅಥವಾ ಬೆಂದು ಒಂದು ಜಾವದ ಮೇಲಾಗಿರುವದು, ಒಣಕಲಾಗಿರುವದು, ದುರ್ಗಂಧದಿಂದ ಕೂಡಿರುವದು, ಬೆಂದಮೇಲೆ ರಾತ್ರಿಯನ್ನು ಕಳೆದಿರುವ ತಂಗಳು, ಉಂಡು ಮಿಕ್ಕದ್ದು, ದೇವರಿಗೊಪ್ಪಿಸುವದಕ್ಕೆ ಯೋಗ್ಯವಲ್ಲದ್ದು – ಇಂಥ ಊಟವು ತಾಮಸರಿಗೆ ಬೇಕೆನಿಸುವದು. (೮–೧೦)

ಶಾಸ್ತ್ರದಲ್ಲಿ ಮಾಡೆಂದು ಹೇಳಿರುವ ಯಜ್ಞವನ್ನು ತಾವು ಅಗತ್ಯವಾಗಿ ಮಾಡತಕ್ಕದ್ದೆಂದು ಮನಸ್ಸನ್ನು ಸಮಾಧಾನಸ್ಥಿತಿಯಲ್ಲಿಟ್ಟುಕೊಂಡು ಫಲವನ್ನು ಬಯಸದೆ ಮಾಡುವದು ಸಾತ್ತ್ವಿಕ. ಫಲವನ್ನು ಗುರಿಯಲ್ಲಿಟ್ಟುಕೊಂಡು ಜನರ ತೋರಿಕೆಗಾಗಿ ಯಜ್ಞವನ್ನು ಮಾಡುವುದು ರಾಜಸ. ನಿಯಮಗಳಿಲ್ಲದೆ, ಅನ್ನದಾನವಿಲ್ಲದೆ, ಮಂತ್ರವಿಲ್ಲದೆ, ದಕ್ಷಿಣೆ ಇಲ್ಲದೆ ಮತ್ತು ಶ್ರದ್ಧೆ ಇಲ್ಲದೆ ಯಜ್ಞವನ್ನು ಮಾಡುವದು ತಾಮಸ. (೧೧–೧೩)

ದೇವತೆಗಳನ್ನೂ ಬ್ರಾಹ್ಮಣರನ್ನೂ ಗುರುಗಳನ್ನೂ ಹೆಚ್ಚಿನ ತಿಳಿವಳಿಕೆಯವರನ್ನೂ ಪೂಜಿಸುವದು, ಶುಚಿತ್ವ, ಸರಳತೆ, ಗಂಡು ಹೆಣ್ಣುಗಳ ಕೂಟವನ್ನು ಬಯಸದಿರುವದು, ಪೀಡಿಸದಿರುವದು – ಇವೆಲ್ಲ ಶರೀರದಿಂದ ಮಾಡುವ ತಪಸ್ಸುಗಳು. ನಿಜವಾದದ್ದಾಗಿ ಮತ್ತು ಈಗ ಕೇಳುವದಕ್ಕೆ ಪ್ರಿಯವೂ ಮುಂದಕ್ಕೆ ಹಿತವೂ ಆದದ್ದಾಗಿ ಯಾರಿಗೂ ತಳಮಳವನ್ನುಂಟುಮಾಡದ ಮಾತೂ ವೇದದ ಬಾಯಪಾಠವೂ ಮಾತಿನಿಂದ ಮಾಡುವ ತಪಸ್ಸುಗಳು. ಮನಸ್ಸು

ತಿಳಿಯಾಗಿರುವದು, ಒಳ್ಳೆಯದನ್ನೇ ಚಿಂತಿಸುವದು, ಮಾತಾಡದಿರುವದು, ಮನಸ್ಸನ್ನು ಬಿಗಿಹಿಡಿಯುವದು, ವಂಚನೆ ಇಲ್ಲದಿರುವದು - ಇವುಮನಸ್ಸಿನ ತಪಸ್ಸುಗಳು. (೧೪-೧೬)

ಫಲವನ್ನು ಬಯಸದೆ ಸಮಾಧಾನವಾಗಿರುವ ಮನಸ್ಸಿನಿಂದ ಮನುಷ್ಯನು ಹೆಚ್ಚಿನ ವಿಶ್ವಾಸದಿಂದ ಮಾಡಿದ ಈ ಮೂರು ಬಗೆಯ ತಪಸ್ಸು ಸಾತ್ತ್ವಿಕವೆನಿಸುವವು. ದೊಡ್ಡವನೆನಿಸಿಕೊಳ್ಳಬೇಕೆಂದೂ ಮಾನವನ್ನೂ ಪೂಜೆಯನ್ನೂ ಪಡೆಯಬೇಕೆಂದೂ ಇತರರ ತೋರಿಕೆಗಾಗಿ ಮಾಡುವ ತಪಸ್ಸು ಲೋಕದಲ್ಲಿ ಹೊಯ್ದಾಡುತ್ತಿರುವಂಥ ಮತ್ತು ಅಲ್ಪ ಕಾಲವಿರುವ ಫಲವನ್ನು ಕೊಡುವಂಥ ರಾಜಸವೆನಿಸುವದು. ಅವಿವೇಕದ ನಿಶ್ಚಯದಿಂದ ತನ್ನ ಶರೀರವನ್ನು ಗಾಸಿಗೊಳಿಸುತ್ತ ಮತ್ತೊಬ್ಬರಿಗೆ ಕೇಡನ್ನುಂಟುಮಾಡಬೇಕೆಂದು ಮಾಡುವ ತಪಸ್ಸು ತಾಮಸವೆನಿಸುವದು. (೧೭-೧೯)

ಇದನ್ನು ಮತ್ತೊಬ್ಬರಿಗೆ ಕೊಡಬೇಕೆಂದು ಮನಸ್ಸು ಮಾಡಿ ತನಗೆ ಯಾವ ಉಪಕಾರವನ್ನೂ ಮಾಡದೆ ಇರುವವನಿಗೆ ಪುಣ್ಯಸ್ಥಳದಲ್ಲಿ ಪುಣ್ಯಕಾಲದಲ್ಲಿ ಯೋಗ್ಯತೆ ನೋಡಿ ಕೊಡುವ ದಾನವು ಸಾತ್ತ್ವಿಕ. ಮುಂದೆ ಉಪಕಾರವಾಗಬೇಕೆಂಬ ನಿರೀಕ್ಷಣೆಯಿಂದಲೂ ಅಥವಾ ಫಲವನ್ನು ಗುರಿಯಲ್ಲಿಟ್ಟುಕೊಂಡೋ " ಅಯ್ಯೋ! ಇದು ನನ್ನ ಕೈ ಬಿಟ್ಟು ಹೋಗುತ್ತಿದೆಯಲ್ಲಾ !!" ಎಂಬ ವ್ಯಥೆಯಿಂದ ಕೊಡುವ ದಾನವು ರಾಜಸ. ಪುಣ್ಯಸ್ಥಳವಲ್ಲದ ಕಡೆ ಪುಣ್ಯಕಾಲವಲ್ಲದಾಗ ಅಯೋಗ್ಯರಿಗೆ ಅನಾದರದಿಂದ ಅವಮಾನಪೂರ್ವಕವಾಗಿ ಕೊಡುವ ದಾನವು ತಾಮಸ. (೨೦-೨೨)

ಪರಬ್ರಹ್ಮನ ಹೆಸರು ಓಂ, ತತ್, ಸತ್-ಎಂಬ ಮೂರು ಬಗೆಗಳೆಂದು ತಿಳಿದವರು ಹೇಳುವರು. ಈ ಬ್ರಹ್ಮನಿಂದ ಸೃಷ್ಟಿಕಾಲದಲ್ಲಿ ಬ್ರಾಹ್ಮಣರೂ ವೇದಗಳೂ ಯಜ್ಞಗಳೂ ಸೃಷ್ಟಿಯಾದವು. ಆದ್ದರಿಂದ ಬ್ರಹ್ಮವನ್ನು ತಿಳಿದವರು ಶಾಸ್ತ್ರದಲ್ಲಿ ಹೇಳಿರುವಂತೆ ಮಾಡುವ ಯಜ್ಞ, ದಾನ, ತಪಸ್ಸು ಮೊದಲಾದುವುಗಳೆಲ್ಲ ಯಾವಾಗಲೂ 'ಓಂ' ಎಂದಮೇಲೆಯೆ ಸಾಗುವವು. ಮೋಕ್ಷವನ್ನು ಬಯಸುವವರು 'ತತ್' ಎಂಬ ಶಬ್ದವನ್ನು ಹೇಳಿದ ಮೇಲೆಯೇ ಫಲವನ್ನು ಗುರಿಯಲ್ಲಿಟ್ಟುಕೊಳ್ಳದೆ ಯಜ್ಞ, ತಪಸ್ಸು ಮೊದಲಾದುವುಗಳನ್ನೂ

ಬಗೆಬಗೆಯ ದಾನಗಳನ್ನೂ ಮಾಡುವರು. 'ಇದೆ' ಎಂಬರ್ಥದಲ್ಲಿಯೂ 'ಯೋಗ್ಯ' ಎಂಬರ್ಥದಲ್ಲಿಯೂ 'ಸತ್' ಎಂಬ ಮಾತು ಉಪಯೋಗದಲ್ಲಿದೆ. 'ಸತ್' ಎಂಬ ಶಬ್ದವು ಶ್ಲಾಘ್ಯವಾದ ಕರ್ಮವೆಂಬರ್ಥದಲ್ಲಿಯೂ ಬಳಕೆಯಲ್ಲಿದೆ. ಯಜ್ಞದಲ್ಲಿಯೂ ತಪಸ್ಸಿನಲ್ಲಿಯೂ ದಾನದಲ್ಲಿಯ ತೊಡಗಿರುವಿಕೆಯು 'ಸತ್' ಎನಿಸುವುದು. ಈಶ್ವರನಿಗೆ ಪ್ರೀತಿಯಾಗಲೆಂದು ಮಾಡುವ ಕರ್ಮವು ಕೂಡ 'ಸತ್' ಎಂದೇ ಹೇಳಿಸಿಕೊಳ್ಳುವದು. ಶ್ರದ್ಧೆ ಇಲ್ಲದೆ ಮಾಡಿದ ಹೋಮವೂ ದಾನವೂ ತಪಸ್ಸೂ ಮತ್ತು ಮಾಡಿದ್ದೆಲ್ಲವೂ 'ಅಸತ್' (ಅಯೋಗ್ಯ) ಎನಿಸುವವು. ಅಂಥ ಕರ್ಮವು ಸತ್ತ ಮೇಲಿನ ಫಲವನ್ನು ಕೊಡುವುದೂ ಇಲ್ಲ; ಈಗಿನ ಫಲವನ್ನು ಕೊಡುವುದೂ ಇಲ್ಲ. (೨೩–೨೮)

ಅಧ್ಯಾಯ-೧೮

ಕರ್ಮದ ಬಿಡುಗಡೆ

ಆಗ ಅರ್ಜುನನು ಶ್ರೀ ಕೃಷ್ಣನನ್ನು ಕುರಿತು ಸಂನ್ಯಾಸ ಮತ್ತು ತ್ಯಾಗ – ಎಂಬ ಮಾತುಗಳ ನಿಜ ಸ್ವರೂಪವನ್ನು ಬೇರೆ ಬೇರೆಯಾಗಿ ತಿಳಿಯಹೇಳೆಂದು ಕೇಳಿದನು. (೧)

ಶ್ರೀ ಕೃಷ್ಣನು ಹೇಳಿದ್ದು :-

ಫಲದ ಆಸೆಗಾಗಿ ಮಾಡುವ ಕರ್ಮಗಳನ್ನು ಬಿಡುವದು ಸಂನ್ಯಾಸವೆಂದೂ ಯಾವ ಕರ್ಮಗಳಲ್ಲಿಯೂ ಫಲವನ್ನು ಬಯಸದಿರುವುದು ತ್ಯಾಗವೆಂದೂ ಪಂಡಿತರು ಹೇಳುವರು. ಕರ್ಮಗಳೆಂಬುವೆಲ್ಲ ದೋಷಗಳಿಂದ ಕೂಡಿದವುಗಳಾದ್ದರಿಂದ ಬಿಡತಕ್ಕದ್ದೆಂದು ವಿದ್ವಾಂಸರಲ್ಲಿ ಕೆಲವರ ಅಭಿಪ್ರಾಯ. ಯಜ್ಞ, ದಾನ, ತಪಸ್ಸು–ಇವುಗಳನ್ನು ಬಿಡಬಾರದೆಂದು ಇನ್ನು ಕೆಲವರ ಅಭಿಪ್ರಾಯ. ಈ ವಿಷಯದಲ್ಲಿ ನನ್ನ ನಿಶ್ಚಯವು ಬೇರೆ. ಬಿಡುವಿಕೆಯಲ್ಲಿ ಮೂರು ಬಗೆಗಳು ಹೆಸರುಗೊಂಡಿವೆ. ಯಜ್ಞ, ದಾನ, ತಪಸ್ಸು–ಇವುಗಳನ್ನು ಬಿಡಬಾರದು; ಮಾಡಲೇಬೇಕು. ವಿವೇಕಿಗಳಿಗೆ ಯಜ್ಞವೂ ದಾನವೂ ತಪಸ್ಸೂ ಮನಸ್ಸಿನ ಹೊಲಸನ್ನು ಕಳೆಯುವವು. – ತಾನು ಮಾಡುವವನೆಂಬ ಅಭಿಮಾನವನ್ನೂ ಫಲದ ಆಸೆಯನ್ನೂ ಬಿಟ್ಟು ಈ ಕರ್ಮಗಳನ್ನೆಲ್ಲ ಮಾಡಬೇಕೆಂಬುದು ನಾನು ಗೊತ್ತು ಮಾಡಿಕೊಂಡಿರುವ ಉತ್ತಮವಾದ ಅಭಿಪ್ರಾಯ. (೨–೬)

ಶಾಸ್ತ್ರದಲ್ಲಿ ಮಾಡಬೇಕೆಂದು ಹೇಳಿರುವ ಕರ್ಮಗಳನ್ನು ಬಿಡುವದು ಸರಿಯಲ್ಲ. ತಪ್ಪು ತಿಳಿವಳಿಕೆಯಿಂದ ಅವುಗಳನ್ನು ಬಿಡುವದು ತಾಮಸದ್ದಾಗಿರುತ್ತದೆ. ಇದನ್ನು ಮಾಡುವದು ಕಷ್ಟವೆಂಬ ಮಾತ್ರದಿಂದ ತನ್ನ ಮೈಗೆಲ್ಲಿ ಆಯಾಸವಾಗುವದೋ ಎಂದು ಬಿಡುವದು ರಜೋಗುಣದ್ದಾಗುತ್ತದೆ. ಬಿಟ್ಟಿದ್ದರ ಫಲವಾದ ಮೋಕ್ಷವು ಇವರಿಬ್ಬರಿಗೂ ದೊರೆಯುವದಿಲ್ಲ. ಮಾಡಲೇಬೇಕೆಂದು ಶಾಸ್ತ್ರದಲ್ಲಿ ಗೊತ್ತುಮಾಡಿರುವ ಕರ್ಮವನ್ನು ತನ್ನ ಕರ್ತವ್ಯವೆಂದು ತಿಳಿದು ತಾನು ಮಾಡುವವನೆಂಬ ಅಭಿಮಾನವನ್ನೂ ಫಲದ ಆಸೆಯನ್ನೂ ಬಿಟ್ಟು ಮಾಡುವದರಲ್ಲಿರುವ ಬಿಡುವಿಕೆಯು ಸಾತ್ತ್ವಿಕದ್ದಾಗಿರುತ್ತದೆ. (೭-೯)

ಸಾತ್ತ್ವಿಕವಾಗಿ ಬಿಟ್ಟವನು ಸತ್ತ್ವಗುಣದಿಂದ ತುಂಬಿ ತುಳುಕುವ ಬುದ್ಧಿಯುಳ್ಳವನಾಗಿಯೂ ಸಂಶಯವಿಲ್ಲದವನಾಗಿಯೂ ಇರುವನು. ಇದು ತನ್ನನ್ನು ಸಂಸಾರಕ್ಕೆ ತಳ್ಳುವ ಫಲದ ಸೆಳೆತ ಉಳ್ಳದ್ದೆಂದು ಅವನು ಕರ್ಮದ ಮೇಲೆ ಹಗೆತನವನ್ನೂ ಮಾಡುವದಿಲ್ಲ; ಇದು ತನ್ನ ಮನಸ್ಸಿನ ಹೊಲಸನ್ನು ಕಳೆಯುವದೆಂದು ಅದರ ಮೇಲೆ ಅತಿ ಪ್ರೀತಿಯನ್ನೂ ಮಾಡುವದಿಲ್ಲ. ದೇಹವೇ ತಾವೆಂದು ತಿಳಿದಿರುವವರು ಕರ್ಮಗಳನ್ನು ತೀರಾ ಬಿಡುವುದೆಂಬುದು ಸಾಧ್ಯವೇ ಅಲ್ಲ. ಫಲದ ಆಸೆಯನ್ನು ತೊರೆದವನೂ ಅದನ್ನು ಮಾಡಿದರೂ ಬಿಟ್ಟವನಾಗುವನು. ಫಲದಾಸೆಯನ್ನು ಬಿಡದವರಿಗೆ ಅವರು ಸತ್ತ ಮೇಲೆ ಅವರಿಗೆ ಬೇಡವೆನಿಸದಂಥದ್ದೆಂದೂ ಬೇಕೆನಿಸಿದಂಥದ್ದೆಂದೂ ಮತ್ತು ಅವೆರಡರ ಸರಿಬೆರಕೆಯದೆಂದೂ ಮೂರು ಬಗೆಯಾದ ಫಲಗಳನ್ನು ಅದು ಗಂಟುಹಾಕುತ್ತದೆ. (೧೦-೧೨)

ಕರ್ಮವು ಐದರಿಂದ ನಡೆಯುವದೆಂದು ನಾನು ಹೇಳುವದನ್ನು ತಿಳಿದುಕೊ ಇದು ಕರ್ಮಫಲಗಳೆಲ್ಲ ಅಡಕವಾಗಿರುವ ವೇದಾಂತಶಾಸ್ತ್ರದ ಅಭಿಪ್ರಾಯ. ದೇಹ, ಜೀವ, ಬೇರೆ ಬೇರೆ ಇಂದ್ರಿಯಗಳು, ಬೇರೆ ಬೇರೆ ವಾಯುಗಳ ವ್ಯಾಪಾರ ಮತ್ತು ಅಭಿಮಾನ ದೇವತೆಗಳು– ಇವೇ ಆ ಐದು. ಶರೀರದಿಂದಲೂ ಮಾತಿನಿಂದಲೂ ಮತ್ತು ಮನಸ್ಸಿನಿಂದಲೂ ಶಾಸ್ತ್ರಕ್ಕೆ ಒಪ್ಪಾದ ಅಥವಾ ಒಪ್ಪಲ್ಲದ ಯಾವ ಕರ್ಮವನ್ನು ಮಾಡಿದರೂ ಅದು ಈ ಐದರಿಂದ ನೆರವೇರುವದು. ಹೀಗಿರುವಾಗ ತನ್ನ ಬುದ್ಧಿಗೆ ತಕ್ಕ ಸಂಸ್ಕಾರವಿಲ್ಲದ್ದರಿಂದ ತನ್ನ ಆತ್ಮವನ್ನೆ ಮಾಡುವವನೆಂದು ನೋಡುವವನು ಕೀಳು ಬುದ್ಧಿಯವನು. ಅವನು ನಿಜವನ್ನು ನೋಡಿದವನಲ್ಲ.

ದೇಹ ಮೊದಲಾದವುಗಳಲ್ಲಿ ತಾನೆಂಬ ಅಭಿಮಾನದ ಸೋಂಕೂ ಮತ್ತು ಫಲದ ಆಸೆಯ ಸೋಂಕೂ ಇಲ್ಲದವನು ಈ ಎಲ್ಲ ಪ್ರಾಣಿಗಳನ್ನು ಕೊಂದರೂ ಕೊಂದಹಾಗಲ್ಲ. ಅವನು ಕಟ್ಟಿಗೊಳಪಡುವುದಿಲ್ಲ. (೧೩-೧೭)

ತಿಳಿವಳಿಕೆ, ತಿಳಿಯ ಬರುವವುಗಳು, : ತಿಳಿಯುವವನು - ಈ ಮೂರೂ ಕರ್ಮವನ್ನು ಮಾಡೆಂದೆಬ್ಬಿಸುವವು. ಇಂದ್ರಿಯಗಳು, ಮಾಡುವಿಕೆ, ಮಾಡುವವನು - ಈ ಮೂರೂ ಕರ್ಮವನ್ನು ನೆರವೇರಿಸುವವು. ತಿಳಿವಳಿಕೆಯೂ ಮಾಡುವಿಕೆಯೂ ಮಾಡುವವನೂ - ಇವರು ಗುಣಗಳ ಭೇದದಿಂದ ಮೂರು ಬಗೆಗಳೆಂದು ಗುಣಗಳ ವಿಷಯಕವಾದ ಶಾಸ್ತ್ರವು ಹೇಳುವದು. ಅದನ್ನು ಅಲ್ಲಿ ಹೇಳಿರುವಂತೆ ಹೇಳುತ್ತೇನೆ; ಕೇಳು. (೧೮-೧೯)

ಬಿಡಿಬಿಡಿಯಾಗಿರುವ ಎಲ್ಲ ವಸ್ತುಗಳಲ್ಲಿ ಬಿಡಿಬಿಡಿಯಲ್ಲದ್ದಾಗಿಯೂ ನಾಶವಿಲ್ಲದ್ದಾಗಿಯೂ ಅಖಂಡವಾಗಿಯೂ ಇರುವ ವಸ್ತುವನ್ನು ನೋಡುವ ತಿಳಿವಳಿಕೆಯು ಸಾತ್ತ್ವಿಕ. ಬೇರೆಬೇರೆ ಪ್ರಾಣಿಗಳಲ್ಲಿ ಬೇರೆಬೇರೆ ತೋರುವ ಆತ್ಮರನ್ನು ಬೇರೆಬೇರೆಯೆಂದೇ ನೋಡುವ ತಿಳಿವಳಿಕೆಯು ರಾಜಸ. ರೂಪುಗೊಂಡ ಒಂದು ವಸ್ತುವಿನಲ್ಲಿಯೇ ಎಲ್ಲವೂ ಅಡಕವಾಗಿರುವದೆಂದು ಬಲವಾದ ಭಾವನೆಯನ್ನು ಹೊಂದುವ ತಿಳಿವಳಿಕೆಯು ಯುಕ್ತಿಗೆ ಹೊಂದದ್ದೂ ನಿಜವಲ್ಲದ್ದೂ ಕ್ಷುದ್ರವಾದದ್ದೂ ಆಗಿ ತಾಮಸವೆನಿಸುವದು. (೨೦-೨೨)

ತಾನು ಯಾವಾಗಲೂ ಮಾಡತಕ್ಕದ್ದೆಂದು ಶಾಸ್ತ್ರದಲ್ಲಿ ಗೊತ್ತಾಗಿರುವ ಕರ್ಮವನ್ನು ತಾನು ಮಾಡುವವನೆಂಬ ಅಭಿಮಾನವಿಲ್ಲದೆಯೂ ಪ್ರೀತಿಯ ಅಥವಾ ಹಗೆತನದ ಸಂಬಂಧವಿಲ್ಲದೆಯೂ ಫಲದಾಸೆ ಇಲ್ಲದೆಯೂ ಮಾಡುವದು ಸಾತ್ತ್ವಿಕ. ಹಾಗಲ್ಲದೆ ಫಲದ ಆಸೆಯನ್ನಿಟ್ಟುಕೊಂಡು ಗರ್ವದಿಂದಲೂ ಆಯಾಸದಿಂದಲೂ ಮಾಡುವದು ರಾಜಸ. ಮುಂದೇನಾದೀತೆಂಬುದನ್ನೂ ತನಗೆಷ್ಟು ಶ್ರಮವೆಂಬುದನ್ನೂ ಇತರರಿಗೆಷ್ಟು ಕಷ್ಟವೆಂಬುದನ್ನೂ ತನ್ನಿಂದಾಗಬಹುದಾದದ್ದೂ ಅಲ್ಲವೊ ಎಂಬುದನ್ನೂ ಎಣಿಕೆಗೆ ತಂದುಕೊಳ್ಳದೆ ಅವಿವೇಕದಿಂದ ಮಾಡುವದು ತಾಮಸ. (೨೩-೨೫)

ಫಲದಾಸೆ ಇಲ್ಲದೆಯೂ ತಾನು ಮಾಡುವವನೆಂಬ ಅಭಿಮಾನವನ್ನು ತಾಳದೆಯೂ ಹಿಡಿದ ಪಟ್ಟನ್ನು ಬಿಡದೆ ಉತ್ಸಾಹದಿಂದ ಕೂಡಿ, ಕೆಲಸವಾದರೂ ಆಗದಿದ್ದರೂ ಮನಸ್ಸಿನ ಏರಿಳಿತಗಳಿಲ್ಲದೆ, ಮಾಡುವವನು ಸಾತ್ತ್ವಿಕನು.

ಸುಖದ ಮೇಲೆ ಪ್ರೀತಿಯನ್ನಿಟ್ಟುಕೊಂಡು, ಫಲವನ್ನು ಬಯಸುವವನೂ ಕೆಟ್ಟ ಆಸೆಯವನೂ ಇತರರಿಗೆ ನೋವನ್ನುಂಟುಮಾಡುವವನೂ ಕೊಳೆಯಾದವನೂ ಉಬ್ಬುತ್ತ ತಗ್ಗುತ್ತ ಇರುವವನೂ ಆಗಿ, ಮಾಡುವವನು ರಾಜಸನು. ತಕ್ಕಷ್ಟು ಎಚ್ಚರಿಕೆ ಇಲ್ಲದೆಯೂ ಶಾಸ್ತ್ರದ ಸಂಸ್ಕಾರವನ್ನು ಪಡೆಯದೆಯೂ ಎದೆಯನ್ನು ಉಬ್ಬಿಸಿಕೊಂಡು ಮೋಸಗಾರನಾಗಿ ಮತ್ತೊಬ್ಬರ ಬಾಳಿಗೆ ನೀರು ತಿದ್ದುವವನಾಗಿ ಸೋಮಾರಿಯಾಗಿ ಜೋಲುಮುಖದವನಾಗಿ ಎಂದಿಗೂ ಮುಗಿಯದ್ದನ್ನು ಮಾಡುವವನು ತಾಮಸನು. (೨೭-೨೮)

ಗುಣಗಳ ಭೇದದಿಂದ ಮೂರು ಬಗೆಯಾಗಿರುವ ಬುದ್ಧಿಯ ಮತ್ತು ಹಿಡಿದ ಪಟ್ಟಿನ ಭೇದವನ್ನು ಕುರಿತು ಬೇರೆಬೇರೆಯಾಗಿ ಪೂರ್ಣವಾಗಿ ಹೇಳುತ್ತೇನೆ; ಕೇಳು. (೨೯)

ಕರ್ಮಗಳಲ್ಲಿ ಮುಂದುವರಿಯುವದನ್ನೂ ತಾನು ಮಾಡುವವನಲ್ಲವೆಂದು ಹಿಮ್ಮೆಟ್ಟುವದನ್ನೂ ಮಾಡತಕ್ಕದ್ದನ್ನೂ ಮಾಡಬಾರದ್ದನ್ನೂ ಕರ್ಮಫಲದಿಂದಾಗುವ ಭಯವನ್ನೂ ತಾನು ಮಾಡುವವನಲ್ಲವೆಂಬುದರಿಂದಾಗುವ ಅಭಯವನ್ನೂ ತಾನು ಮಾಡುವವನೆಂಬಭಿಮಾನದಿಂದಾಗುವ ಬಂಧವನ್ನೂ ತಾನು ಮಾಡುವವನಲ್ಲವೆಂಬುದರಿಂದಾಗುವ ಮೋಕ್ಷವನ್ನೂ ತಿಳಿಯವ ಬುದ್ಧಿಯು ಸಾತ್ತ್ವಿಕ. ಶಾಸ್ತ್ರಕ್ಕೆ ಒಪ್ಪಾದದ್ದು ಯಾವದೆಂಬದನ್ನೂ ಒಪ್ಪಲ್ಲದ್ದು ಯಾವದೆಂಬುದನ್ನೂ ಮಾಡಬಹುದಾದದ್ದು ಯಾವುದೆಂಬುದನ್ನೂ ಇದು ಹೀಗೆಯೇ ಸರಿಯೆಂಬ ನಿರ್ಣಯವಿಲ್ಲದೆ ತಿಳಿಯುವ ಬುದ್ಧಿಯು ರಾಜಸ. ಅಜ್ಞಾನವೆಂಬ ಕತ್ತಲೆಯ ಮುಸುಕಿನೊಳಗೆ ಸಿಕ್ಕಿ ಶಾಸ್ತ್ರಕ್ಕೆ ಒಪ್ಪಲ್ಲದ್ದನ್ನು ಒಪ್ಪಾದದ್ದೆಂದು ಎಲ್ಲವನ್ನೂ ತಲೆಕೆಳಗಾಗಿ ತಿಳಿಯುವಬುದ್ಧಿಯು ತಾಮಸ. (೩೦-೩೨)

ಸಮಾಧಾನವಾದ ಮನಸ್ಸಿನಿಂದ ಮನಸ್ಸು, ಪ್ರಾಣ, ಇಂದ್ರಿಯ - ಇವುಗಳ ವ್ಯಾಪಾರವನೆಲ್ಲ ಹಿಡಿತದಲ್ಲಿಟ್ಟುಕೊಳ್ಳುವ ಬಿಗಿಪಟ್ಟು ಸಾತ್ತ್ವಿಕ. ಧರ್ಮ, ಅರ್ಥ ಮತ್ತು ಕಾಮ-ಇವು ಮೂರೇ ತಾನು ಪಡೆಯತಕ್ಕವುಗಳೆಂದು ತಿಳಿದು ಸಮಯ ಬಂದರೆ ಫಲವನ್ನು ಬಯಸುವ ಬಿಗಿಪಟ್ಟು ರಾಜಸ. ನಿದ್ರೆಯನ್ನೂ ತನಗಾಗದವುಗಳಿಂದ ಹೆದರಿಕೆಯನ್ನೂ ತನಗೆ ಬೇಕೆನಿಸಿದ್ದು ಹೋಯಿತೆಂದು ದುಃಖವನ್ನೂ ಜೋಲುಮುಖವನ್ನೂ ಸೊಕ್ಕನ್ನೂ ಬಿಡದಿರುವ ತಿಳಿಗೇಡಿಯು ಹಿಡಿದಪಟ್ಟು ತಾಮಸ. (೩೩-೩೫)

ಸುಖದ ಮೂರು ಬಗೆಗಳನ್ನು ಹೇಳುತ್ತೇನೆ; ಕೇಳು. ಮತ್ತೆ ಮತ್ತೆ ಬಂದು ಕಾಣಿಸಿಕೊಂಡು ಆದರವನ್ನುಂಟುಮಾಡುವದಾಗಿಯೂ ದುಃಖವನ್ನು ಹಿಮ್ಮೆಟ್ಟಿಸುವದಾಗಿಯೂ ಮೊದಲು ವಿಷದಂತೆ ಒಗ್ಗದೆ ಇದ್ದು ಆಮೇಲೆ ಅಮೃತವೆನಿಸುವದಾಗಿಯೂ ಇರುತ್ತ ತಿಳಿಯಾದ ಬುದ್ಧಿಯಿಂದುಂಟಾದ ಸುಖವು ಸಾತ್ತ್ವಿಕ, ವಿಷಯಗಳ ಮತ್ತು ಇಂದ್ರಿಯಗಳ ಸೇರಿಕೆಯಿಂದ ಹುಟ್ಟಿ ಮೊದಲು ಅಮೃತದಂತಿದ್ದು ಕೊನೆಗೆ ವಿಷದಂತಾಗುವ ಸುಖವು ರಾಜಸ. ಮೊದಲೂ ಕೊನೆಗೂ ನಿದ್ರೆ, ಸೋಮಾರಿತನ ಮತ್ತು ಮರೆವು ಇವುಗಳಿಂದುಂಟಾಗಿ ಭ್ರಾಂತಿಯನ್ನುಂಟುಮಾಡುವ ಸುಖವು ತಾಮಸ. (೩೬-೩೯)

ಭೂಮಿಯ ಮೇಲಾಗಲಿ ಸ್ವರ್ಗದಲ್ಲಿರುವ ದೇವತೆಗಳಲ್ಲಾಗಲಿ ಹುಟ್ಟಿದಾಗಿನಿಂದ ಕಾಣಿಸಿಕೊಳ್ಳುವ ಈ ಮೂರು ಗುಣಗಳ ಸೋಂಕಿಲ್ಲದ ವಸ್ತುವೆಂಬುದಿಲ್ಲ. ಬ್ರಾಹ್ಮಣ, ಕ್ಷತ್ರಿಯ, ವೈಶ್ಯ, ಶೂದ್ರ- ಎಂಬ ನಾಲ್ಕು ಜಾತಿಯವರಿಗೂ ಹುಟ್ಟಿದಾಗಿನಿಂದ ಕಾಣಿಸಿಕೊಳ್ಳುವ ಗುಣಗಳಿಗೆ ತಕ್ಕಂತೆ ಬೇರೆ ಬೇರೆ ಕರ್ಮಗಳು ಗೊತ್ತಾಗಿರುವವು. (೪೦-೪೧)

ಮನಸ್ಸನ್ನು ಬಿಗಿಹಿಡಿಯುವದು, ಇಂದ್ರಿಯಗಳನ್ನು ಬಿಗಿಹಿಡಿಯುವದು ತಪಸ್ಸು, ಶುಚಿತ್ವ, ಸೈರಣೆ, ಸರಳತನ, ವೇದದ ಅರ್ಥವನ್ನು ತಿಳಿಯುವದು, ಅದನ್ನು ಅನುಭವಿಸುವದು ಮತ್ತು ಈಶ್ವರನೊಬ್ಬನಿರುವನೆಂಬ ನಂಬಿಕೆ ಇವು ಬ್ರಾಹ್ಮಣರ ಹುಟ್ಟು ಗುಣಕ್ಕೆ ತಕ್ಕ ಕೆಲಸಗಳು. ಬಲಶಾಲಿಗಳ ಮುಂದೆ ಎದೆಗೆಡದಿರುವದು, ಹಗೆಗಳಿಗೆ ಸೋಲದ ಕೆಚ್ಚು, ಕಷ್ಟ ಬಂದಾಗ ಕಳವಳಗೊಳ್ಳದಿರುವದು, ಕೆಲಸವನ್ನು ಸಾಧಿಸುವ ಸಾಮರ್ಥ್ಯ, ಯುದ್ಧದಲ್ಲಿ ಕಾಲಿಗೆ ಬುದ್ಧಿಯನ್ನು ಹೇಳದಿರುವದು, ಯೋಗ್ಯರಿಗೆ ದಾನ ಮಾಡುವದು, ಸೇವಕರ ಮೇಲೆ ಅಧಿಕಾರವನ್ನು ತೋರಿಸುವದು - ಇವು ಕ್ಷತ್ರಿಯರ ಹುಟ್ಟುಗುಣಕ್ಕೆ ತಕ್ಕ ಕೆಲಸಗಳು. ಹೊಲದ ಉಳುಮೆ, ದನಗಳನ್ನು ಸಾಕುವದು, ವ್ಯಾಪಾರ - ಇವು ವೈಶ್ಯರ ಹುಟ್ಟುಗುಣಕ್ಕೆ ತಕ್ಕ ಕೆಲಸಗಳು. ಸೇವೆಯು ಶೂದ್ರನ ಹುಟ್ಟುಗುಣಕ್ಕೆ ತಕ್ಕ ಕೆಲಸ. (೪೨-೪೪)

ತನ್ನ ತನ್ನ ಕರ್ಮದಲ್ಲಿ ನಿರತನಾದವನು ಆತ್ಮನ ಅರಿವನ್ನು ಪಡೆಯುವ ಯೋಗ್ಯತೆಯನ್ನು ಹೊಂದುತ್ತಾನೆ. ಅದು ಹೇಗೆಂದರೆ: ಸಮಸ್ತ ವಸ್ತುಗಳನ್ನೂ ಹುಟ್ಟಿಸಿ ಅವುಗಳೊಳಹೊಕ್ಕು ತುಂಬಿಕೊಂಡಿರುವ ಪರಮೇಶ್ವರನಿಗೆ ತನ್ನ

ಕರ್ಮಗಳನ್ನೆಲ್ಲ ಒಪ್ಪಿಸಿದರೆ ಆಗ ಆ ಯೋಗ್ಯತೆಯುಂಟಾಗುತ್ತದೆ. ತನ್ನ ಹುಟ್ಟುಗುಣಕ್ಕೆ ಗೊತ್ತಾಗಿರುವ ಕರ್ಮದಲ್ಲಿ ಏನಾದರೊಂದು ಕೊರತೆ ಕಂಡರೂ ಅದು ಮತ್ತೊಬ್ಬರ ಹುಟ್ಟುಗುಣದ ಕರ್ಮವನ್ನು ಚೆನ್ನಾಗಿ ನಡೆಸಿದ್ದಕ್ಕಿಂತ ಮೇಲು, ತನ್ನ ಹುಟ್ಟುಗುಣಕ್ಕೆ ತಕ್ಕ ಕರ್ಮವನ್ನು ಮಾಡುವದರಿಂದ ಪಾಪವುಂಟಾಗುವದಿಲ್ಲ. ತನ್ನ ಹುಟ್ಟುಗುಣಕ್ಕೆ ತಕ್ಕ ಕರ್ಮವು ದೋಷ ಉಳ್ಳದ್ದಾಗಿ ಕಂಡರೂ ಬಿಡಬಾರದು. ಏಕೆಂದರೆ; ಅಗ್ನಿಯು ಹೊಗೆಯ ಮುಸುಕನ್ನು ಹೊಂದಿರುವಂತೆ ಎಲ್ಲ ಕೆಲಸಗಳೂ ದೋಷದ ಮುಸುಕುಳ್ಳವುಗಳಾಗಿರುವವು. (೪೭–೪೮)

ಯಾವುದರಲ್ಲಿಯೂ ಹೆಚ್ಚು ಮಮತೆಯನ್ನಿಡದೆ ಮನಸ್ಸನ್ನು ಬಿಗಿಹಿಡಿದು ಮತ್ತೇನನ್ನೂ ಬಯಸದೆ ಕರ್ಮಗಳು ತನ್ನಿಂದಾದವುಗಳಲ್ಲವೆಂಬ ತಿಳಿವಿನಿಂದ ಅವುಗಳನ್ನು ದೂರ ಮಾಡಿಕೊಂಡವನು ಅವುಗಳ ಸಂಬಂಧವಲ್ಲದ ಉತ್ಕೃಷ್ಟವಾದ ಸ್ಥಿತಿಯನ್ನು ಹೊಂದುತ್ತಾನೆ. ಯೋಗ್ಯತೆಯನ್ನು ಹೊಂದಿದವನು ಆತ್ಮನ ಅರಿವಿನಲ್ಲಿ ಮುಳುಗಿ ತೇಲುವವನಾಗಿ ಬ್ರಹ್ಮನನ್ನು ಹೇಗೆ ಪಡೆಯುತ್ತಾನೆಂಬುದನ್ನು ಸಂಕ್ಷೇಪವಾಗಿ ಹೇಳುತ್ತೇನೆ; ಕೇಳು. ಅವನ ಬುದ್ಧಿಯಲ್ಲಿ ವಂಚನೆ ಮೊದಲಾದದ್ದು ಇರುವದಿಲ್ಲ. ದೇಹೇಂದ್ರಿಯಗಳು ಅವನ ಹಿಡಿತದಲ್ಲಿರುವವು. ಅವನು ಶಬ್ದ ಮೊದಲಾದ ವಿಷಯಗಳನ್ನು ಹತ್ತಿರಕ್ಕೆ ಬರಮಾಡಿಕೊಳ್ಳುವದಿಲ್ಲ. ಪ್ರೀತಿ, ಹಗೆತನ – ಇವು ಅವನಿಗಿರುವದಿಲ್ಲ. ಅವನು ಜನರ ಗದ್ದಲವಿಲ್ಲದ ಕಡೆ ಇರುವನು. ಅವನ ಊಟ ಮಿತವಾಗಿರುವದು. ಮಾತು, ಶರೀರ, ಮನಸ್ಸು– ಈ ಮೂರೂ ಅವನ ಕೈಯಲ್ಲಿರುವವು. ಅವನು ಯಾವಾಗಲೂ ಧ್ಯಾನದಲ್ಲಿ ತೊಡಗಿರುವನು. ಅವನಲ್ಲಿ ವೈರಾಗ್ಯವು ತುಂಬಿತುಳುಕುವದು. ದೇಹ ಮೊದಲಾದವುಗಳನ್ನು ತಾನೆನ್ನುವದು, ಬಯಕೆ, ಮೊದಲಾದ ಆವೇಶಗಳ ಬಲ, ಸೊಕ್ಕು, ಆಸೆ, ಸಿಟ್ಟು, ಉಪಕರಣಗಳು – ಇವುಗಳನ್ನೆಲ್ಲವನ್ನೂ ತನ್ನದೆಂಬಭಿಮಾನವನ್ನು ಬಿಟ್ಟು ಸಮಾಧಾನದಿಂದಿರುವ ಅವನು ಬ್ರಹ್ಮಸ್ಥ ರೂಪನಾಗುವದಕ್ಕೆ ತಕ್ಕವನಾಗುತ್ತಾನೆ. (೪೯–೫೩)

ಬ್ರಹ್ಮಸ್ವರೂಪನಾದ ತಿಳಿಮನಸ್ಸಿನವನು ಅಳುವದಿಲ್ಲ, ಬಯಸುವದಿಲ್ಲ. ಅವನು ಎಲ್ಲ ಪ್ರಾಣಿಗಳನ್ನೂ ಒಂದೇ ರೀತಿ ಕಾಣುತ್ತ ನನ್ನ ಮೇಲಿನ ಬಹು ಹೆಚ್ಚಾದ ಭಕ್ತಿಯನ್ನು ಹೊಂದುತ್ತಾನೆ. ನಾನು ಎಷ್ಟು ದೊಡ್ಡವನೆಂಬುದನ್ನೂ ನನ್ನ ನಿಜವಾದ ಸ್ವರೂಪವೇನೆಂಬುದನ್ನೂ ಅವನು ಅ ಭಕ್ತಿಯಿಂದ ಇದ್ದದ್ದಿದ್ದ ಹಾಗೆ

ತಿಳಿಯುತ್ತಾನೆ ಮತ್ತು ಅದರಿಂದ ನನ್ನ ನಿಜಸ್ಥಿತಿಯನ್ನರಿತು ಒಡನೆ ನನ್ನೊಳಗೆ ಸೇರಿಹೋಗುತ್ತಾನೆ. ಎಲ್ಲ ಕರ್ಮಗಳನ್ನೂ ಯಾವಾಗಲೂ ಮಾಡುವವನಾದರೂ ನನ್ನನ್ನೆ ಗತಿಯೆಂದು ನಂಬಿರುವವನು ನನ್ನ ಅನುಗ್ರಹದಿಂದ ಎಷ್ಟು ಮಾತ್ರವೂ ಸವೆಯದೆ ಎಂದೆಂದಿಗೂ ಇರುವ ಮೋಕ್ಷವನ್ನು ಪಡೆಯುತ್ತಾನೆ. (೫೪–೫೬)

ಅರ್ಜುನ, ಎಲ್ಲ ಕರ್ಮಗಳನ್ನೂ ಮನಸ್ಸಿನಿಂದ ನನಗೊಪ್ಪಿಸಿಬಿಡು. ನನ್ನನ್ನೆ ಗತಿಯೆಂದು ಮನಸ್ಸನ್ನು ಸಮಾಧಾನದಲ್ಲಿಟ್ಟುಕೊ. ಯಾವಾಗಲೂ ನನ್ನಲ್ಲಿಯೇ ಮನಸ್ಸನ್ನಿಟ್ಟಿರು. ನೀನು ನನ್ನಲ್ಲಿ ಮನಸ್ಸನ್ನಿಟ್ಟರೆ ನನ್ನ ಅನುಗ್ರಹದಿಂದ ಎಲ್ಲ ಅನರ್ಥಗಳನ್ನೂ ದಾಟುತ್ತಿ. ದುರಭಿಮಾನದಿಂದ ನನ್ನ ಮಾತನ್ನು ಕೇಳದೆ ಹೋದರೆ ನೀನು ಹಾಳಾಗುತ್ತಿ ದುರಭಿಮಾನವನ್ನು ತಳೆದು ಯುದ್ಧ ಮಾಡುವದಿಲ್ಲವೆಂದು ಯೋಚಿಸುತ್ತೀಯಲ್ಲ! ನಿನ್ನ ಈ ನಿಶ್ಚಯವು ಸುಳ್ಳೆ. ನಿನ್ನ ಹುಟ್ಟು ಗುಣವು ನಿನ್ನನ್ನು ಯುದ್ಧಕ್ಕೆ ನೂಕಿಯೇನೂಕುತ್ತದೆ. ಯುದ್ಧವು ನಿನ್ನ ಹುಟ್ಟು ಗುಣಕ್ಕೆ ಗಂಟುಬಿದ್ದ ಕರ್ಮ. ನೀನು ಅವಿವೇಕದಿಂದ ಅದನ್ನು ಮಾಡುವದಿಲ್ಲವೆಂದರೂ ನಿನಗರಿವಿಲ್ಲದೆ ಮಾಡಿಬಿಡುತ್ತಿ. ಈಶ್ವರನು ಎಲ್ಲ ಪ್ರಾಣಿಗಳನ್ನೂ ಯಂತ್ರದ ಬೊಂಬೆಗಳಂತೆ ಮಾಯೆಯಿಂದ ತಿರುಗಿಸುತ್ತ ಎಲ್ಲ ಪ್ರಾಣಿಗಳ ಹೃದಯದಲ್ಲಿರುತ್ತಾನೆ. ಎಲ್ಲ ಬಗೆಯಿಂದಲೂ ಅವನನ್ನೆ ಶರಣೆನ್ನು. ಅವನ ಅನುಗ್ರಹದಿಂದ ಬಹಳ ಮೇಲಾದದ್ದಾಗಿಯೂ ಎಂದಿಗೂ ಹೋಗದ್ದಾಗಿಯೂ ಸಮಾಧಾನರೂಪವಾಗಿಯೂ ಇರುವ ಮೋಕ್ಷವನ್ನು ಹೊಂದುತ್ತಿ. (೫೭–೬೨)

ನಾನು ನಿನಗೆ ಬಹು ಗುಟ್ಟಾದ ಈ ತಿಳಿವಳಿಕೆಯನ್ನು ಹೇಳಿರುವೆನು. ಇದನ್ನು ಮೊದಲಿಂದ ಕೊನೆಯವರೆಗೂ ಆಲೋಚನೆ ಮಾಡಿ ಮುಂದೆ ಹೇಗೆ ಮಾಡಬೇಕೆಂದು ಗೊತ್ತುಮಾಡಿಕೊಳ್ಳುತ್ತೀಯೊ ಹಾಗೆ ಮಾಡು. ಎಲ್ಲಕ್ಕಿಂತ ಹೆಚ್ಚು ಗುಟ್ಟಾದ ಮತ್ತು ಉತ್ತಮವಾದ ಇನ್ನೊಂದುಮಾತಿದೆ. ಅದನ್ನು ಕೇಳು. ನೀನು ನನಗೆ ಅಚ್ಚುಮೆಚ್ಚಿನ ಗೆಳೆಯನಾದ್ದರಿಂದ ನಿನಗೆ ಒಳ್ಳೆಯದಾಗಲೆಂದು ಹೇಳುತ್ತೇನೆ. ನನ್ನಲ್ಲಿ ಮನಸ್ಸಿಡು; ನನ್ನಲ್ಲಿ ಪ್ರೇಮವುಳ್ಳವನಾಗು; ನನ್ನನ್ನು ಪೂಜೆ ಮಾಡು; ನನಗೆ ಎರಗು; ನನ್ನನ್ನೆ ಹೊಂದುತ್ತಿ. ನೀನು ನನ್ನ ಗೆಳೆಯನೆಂಬುದರಮೇಲೆ ನಿನಗೆ ನಿಜವಾಗಿ ಆಣೆ ಮಾಡಿ ಹೇಳುತ್ತೇನೆ. ಆತ್ಮನು ಏನನ್ನೂ ಮಾಡುವವನಲ್ಲವಾದ್ದರಿಂದ ಅವನಿಗೆ ಯಾವ ಧರ್ಮಗಳ ಸಂಬಂಧವೂ ಇಲ್ಲವೆಂದು ತಿಳಿಯುವವದರ

ಮೂಲಕ ನೀನು ಎಲ್ಲರ ಧರ್ಮಗಳಿಗೂ ದೂರನಾದವನಾಗಿ ನನಗೇ ಶರಣು ಬಾ; ನಾನು ನಿನ್ನ ಪಾಪಗಳನ್ನೆಲ್ಲ ಕಳಚಿ ಬಿಡುತ್ತೇನೆ ಅಳಬೇಡ. (೬೩-೬೬)

ಇದನ್ನು ತಪಸ್ವಿಯಲ್ಲದವನಿಗೂ ಭಕ್ತನಲ್ಲದವನಿಗೂ ಕೇಳುವಿಚ್ಛೆ ಇಲ್ಲದವನಿಗೂ ನನ್ನ ಹೆಚ್ಚುಗಾರಿಕೆಯನ್ನು ಸಹಿಸದವನಿಗೂ ಎಂದಿಗೂ ಹೇಳಬೇಡ. ಬಹಳ ಹೆಚ್ಚಿನ ಗುಟ್ಟಾದ ಇದನ್ನು ನನ್ನ ಭಕ್ತರಲ್ಲಿ ನೆಡುವವನು ನನ್ನಲ್ಲಿ ಹೆಚ್ಚಿನ ಭಕ್ತಿ ಮಾಡಿದವನಾಗಿ ನನ್ನನ್ನೆ ಪಡೆಯುತ್ತಾನೆ; ಸಂಶಯವಿಲ್ಲ. ಮನುಷ್ಯರಲ್ಲಿ ಅವನಿಗಿಂತ ಹೆಚ್ಚು ಬೇಕಾದವನು ಯಾರೂ ಇಲ್ಲ. ಅವನಿಗಿಂತ ಹೆಚ್ಚುಬೇಕಾದವರು ಈ ಭೂಲೋಕದಲ್ಲಿ ಬೇರೆ ಯಾರೂ ಮುಂದೆ ಹುಟ್ಟುವದೂ ಇಲ್ಲ. ನಮ್ಮಿಬ್ಬರ ಈ ಮಾತುಗಾರಿಕೆಯು ಧರ್ಮಸಮ್ಮತವಾದದ್ದು. ಇದನ್ನು ಓದಿದವನು ನನ್ನನ್ನು ತಿಳಿವಳಿಕೆಯೆಂಬ ಯಜ್ಞದಿಂದ ಪೂಜೆ ಮಾಡಿದವನಾಗುತ್ತಾನೆಂದು ನನ್ನ ಅಭಿಪ್ರಾಯ. ಶ್ರದ್ಧೆಯುಳ್ಳವನೂ ನನ್ನ ಹೆಚ್ಚುಗಾರಿಕೆಗೆ ಅಸೂಯೆಪಡದೆ ಇದನ್ನು ಕೇಳುವವನೂ ಆದವನು ತನ್ನ ಪಾಪಗಳನೆಲ್ಲ ಕಳೆದುಕೊಂಡು ಪುಣ್ಯವಂತರು ಪಡೆಯುವ ಮೇಲುಮೇಲಾದ ಲೋಕಗಳನ್ನು ಪಡೆಯುವನು. ಅರ್ಜುನ, ಇದನ್ನು ನೀನು ಒಮ್ಮುಖವಾದ ಮನಸ್ಸಿನಿಂದ ಕೇಳಿದೆಯೊ? ನಿನ್ನ ತಪ್ಪು ತಿಳಿವಳಿಕೆಯು ಹೋಯಿತೇ? (೬೭-೭೨)

ಹೀಗೆಂದು ಕೃಷ್ಣನು ಕೇಳಿದಾಗ ಅರ್ಜುನನು ಕೃಷ್ಣನನ್ನು ಕುರಿತು ಕೃಷ್ಣ, ನನ್ನ ತಪ್ಪು ತಿಳಿವಳಿಕೆಯು ಹೋಯಿತು. ನಿನ್ನ ಅನುಗ್ರಹದಿಂದ ಆತ್ಮನ ನಿಜವಾದ ಸ್ವರೂಪವು ನೆನಪಿಗೆ ಬಂತು. ಇನ್ನು ಸಂಶಯವಿಲ್ಲ; ಸಿದ್ಧನಾಗಿದ್ದೇನೆ; ನಿನ್ನ ಮಾತಿನಂತೆ ನಡೆಯುತ್ತೇನೆ" ಎಂದು ಹೇಳಿದನು. (೭೩)

ಸಂಜಯನು ತನ್ನ ಮಾತನ್ನು ಮುಗಿಸಿದ್ದು :-

ಧೃತರಾಷ್ಟ್ರ, ನಾನು ಶ್ರೀ ಕೃಷ್ಣನ ಮತ್ತು ಮಹಾತ್ಮನಾದ ಅರ್ಜುನನ ಈ ಮಾತುಗಾರಿಕೆಯನ್ನು ಕೇಳಿದಾಗ ನನ್ನ ಮೈಕೂದಲು ಹುರಿಗೊಂಡುನಿಂತವು. ನಾನು ಬಹು ಬೆರಗಾದೆನು. ಯೋಗೇಶ್ವರನಾದ ಕೃಷ್ಣನು ತಾನಾಗಿ ತನ್ನ ಬಾಯಿಂದ ಹೇಳಿದ ಈ ಗುಟ್ಟಾದ ಮತ್ತು ಬಹು ಹೆಚ್ಚಿನದಾದ ಯೋಗವನ್ನು ವ್ಯಾಸರ ಅನುಗ್ರಹದಿಂದ ಕೇಳಿದೆನು. ಪುಣ್ಯವೂ, ಅದ್ಭುತವೂ ಆದ ಈ ಮಾತುಗಾರಿಕೆಯನ್ನು

ನೆನೆದುನೆನೆದು ನಾನು ಬಾರಿಬಾರಿಗೂ ಹರ್ಷವನ್ನು ಹೊಂದುತ್ತಿರುವೆನು. ಶ್ರೀ ಕೃಷ್ಣನ ಆಶ್ಚರ್ಯಕರವಾದ ಆ ವಿಶ್ವರೂಪವನ್ನು ಮತ್ತೆ ನೆನೆದು ನೆನೆದು ನಾನು ಮತ್ತೆ ಮತ್ತೆ ಆಶ್ಚರ್ಯವನ್ನೂ ಹರ್ಷವನ್ನೂ ಹೊಂದುತ್ತಿರುವೆನು. ಯೋಗ ಸಿದ್ಧಿಗಳ ಒಡೆಯನಾದ ಶ್ರೀ ಕೃಷ್ಣನೂ ಗಾಂಡೀವವನ್ನು ಹಿಡಿದ ಅರ್ಜುನನೂ ಇರುವ ಕಡೆ ರಾಜ್ಯ ಸಂಪತ್ತೂ ಗೆಲವೂ ಏಳಿಗೆಯೂ ನೀತಿಯೂ ಎಂದೆಂದಿಗೂ ನೆಲಸಿರುವವೆಂದು ನನ್ನ ನಿಶ್ಚಯ. (೭೪-೭೮)

ಓಂ ತತ್ಸತ್



ಹೊಸಕೆರೆ ಚಿದಂಬರಯ್ಯನವರು (1870–1938)

ಧರ್ಮದ ವಿಚಾರವು ತಲೆ ನರೆತವರ ಮಾತೆನ್ನುವುದು ತೀರ ದಡ್ಡತನದ್ದು ಚೆನ್ನಾಗಿ ಕಣ್ಣು ಬಿಟ್ಟು ನೋಡಿದರೆ ಮಕ್ಕಳೇ ಅದಕ್ಕೆ ತಕ್ಕವರು. ಮುಖದಲ್ಲಿ ಕೂದಲು ಹುಟ್ಟುವುದರಲ್ಲಿರುವಾಗಲೇ ಮನಸ್ಸಿನೊಳಕ್ಕೆ ಧರ್ಮದ ಬೀಜವು ಬೀಳಬೇಕು.

ಧ್ರುವ ಮತ್ತು ಪ್ರಹ್ಲಾದ ಮೊದಲಾದವರು ಚಿಕ್ಕಂದಿನಲ್ಲಿಯೇ ಈ ತಿಳಿವಿನ ತುದಿಯನ್ನು ಮುಟ್ಟಿದ್ದರೆಂದು ಪುರಾಣಗಳು ಡಂಗುರವನ್ನು ಹೊಡೆಯುತ್ತವೆ. ಹೊಸ ಬಟ್ಟೆಗೆ ಬಣ್ಣವು ಚೆನ್ನಾಗಿ ಹಿಡಿಯುವಂತೆ ಚಿಕ್ಕವರಿಗೆ ಈ ವಿಷಯವು ಚೆನ್ನಾಗಿ ಕಚ್ಚಿ ಹಿಡಿಯುವ ಸಂಭವವುಂಟು. ಈ ಕಾರಣದಿಂದ ಮಕ್ಕಳಿಗೆ ಗೀತೆಯ ತಿಳಿವಳಿಕೆಯನ್ನು ತಂದುಕೊಡಬೇಕೆಂಬ ಉದ್ದೇಶದಿಂದ ಗೀತೆಯನ್ನು ಕನ್ನಡದ ವ್ಯಾಸಂಗದಲ್ಲಿ ಹೆಚ್ಚಿನ ಯೋಗ್ಯತೆಯನ್ನು ತೋರಿಸಿಕೊಳ್ಳುವ ಮಕ್ಕಳಿಗೆ ತಕ್ಕ ಹಾಗೆ ಬರೆಯುವುದು ಸುಲಭವಲ್ಲವೆಂದು ಗೊತ್ತಿದ್ದರೂ ನನಗೆ ತಿಳಿದ ಮಟ್ಟಿಗೆ ಮಕ್ಕಳ ಬಳಕೆಯ ಮಾತಿನಲ್ಲಿ ಮಾತಾಡುವ ಗೀತೆಯಾಗಿರಬೇಕು ಎಂಬ ಗುರಿಯನ್ನಿಟ್ಟುಕೊಂಡು ಈ ಗ್ರಂಥವನ್ನು ಬರೆದೆನು.

ಇದು ಮಕ್ಕಳ ಕೈಗೀತೆಯೆಂದು ದೊಡ್ಡವರು ಕೈಮುದುರಿಕೊಳ್ಳಬಾರದು. ಮಕ್ಕಳದೆಂಬ ಮುದ್ದಿನಿಂದಲಾದರೂ ದೊಡ್ಡವರು ಇದನ್ನು ಓದಿ ಆನಂದಿಸಬಹುದು.

(೧೯೩೩ರಲ್ಲಿ ಲೇಖಕರು ಬರೆದ ಒಂದು ಮೊದಲ ಮಾತಿನಿಂದ)

ಪ್ರಕಾಶಕರು

ವಿನಯ್ ಫೌಂಡೇಷನ್

ನಂ. ೪೨, ಲತಾಕುಂಜ, ೧೪ನೇ ಅಡ್ಡರಸ್ತೆ, ೧೦ನೇ ಮುಖ್ಯರಸ್ತೆ,
ಎನ್.ಎಸ್. ಪಾಳ್ಯ, ಬಿಟಿಎಂ ಲೇಔಟ್ ೨ನೇ ಹಂತ, ಬೆಂಗಳೂರು – ೭೬